ಬೆಲೆ: ಎರಡು ಆಣೆ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೪-೦
೬ ತಿಂಗಳಿಗೆ ,, ೩-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ ತರಿಸಿಕೊಂಡಲ್ಲಿ ೫ ಆಣೆ ಹೆಚ್ಚಿಗೆ ಬೀಳುವದು.

ಕರ್ಮವೀರ

KARMAVEER
WEEKLY
HUBLI
JULY 29
1946

ಸಂಪಾದಕರು : ಹ. ರಾ. ಪುರೋಹಿತ, ಎಂ. ಎ.] ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ [Editor : H. R. Purohit, M. A.

ಸಂಪುಟ ೧೮] ಹುಬ್ಬಳ್ಳಿ ಸೋಮವಾರ ತಾರೀಖು ೨೯ — ೭ — ೧೯೪೬ [ಸಂಚಿಕೆ ೧೭

ವಚನಭಂಗಕ್ಕೂ ಹೇಸದ ಸ್ಮಟ್ಸರ ವರ್ಣದ್ವೇಷ

ದಕ್ಷಿಣ ಆಫ್ರಿಕೆಯ ಹಿಂದೀಯರಿಗಾದ ಅನ್ಯಾಯಗಳು
ಹಿಂದುಸ್ತಾನ ಸರಕಾರದ ದುರ್ಬಲ ವ್ಯವಹಾರ: ಹಿಂದೀ ಸ್ವಾತಂತ್ರ್ಯವೊಂದೇ ಹಿಂದೀಯರಿಗೆ ರಕ್ಷಣೆ ಕೊಡಬಲ್ಲದು

✲ ದಕ್ಷಿಣ ನಾತಾಳ ಹಿಂದೀ ಕಾಂಗ್ರೆಸ್ಸಿನ ಹಿಂದಿನ ಅಧ್ಯಕ್ಷ ಸ್ವಾಮೀ ಭವಾನೀ ದಯಾಲರಿಂದ ✲

ದಕ್ಷಿಣ ಆಫ್ರಿಕೆಯ ಹಿಂದೀಯರ ಕಥೆ ಮೊದಲಿನಿಂದ ತುದಿಯ ವರೆಗೂ ಕೆಡುತ್ತ ಬಂದ ಪರಿಸ್ಥಿತಿಯ ಕಥೆಯಾಗಿದೆ. ಅವರಿಗೆ ಕೊಟ್ಟ ಮಾತುಗಳು ಮುರಿಯಲ್ಪಟ್ಟಿವೆ. ಅವರ ಹಕ್ಕುಗಳನ್ನು ಮೆಟ್ಟಲಾಗಿದೆ. ಅವರ ವಿಷಯದಲ್ಲಿ ತತ್ವಗಳಿಗೆ ತಿಲಾಂಜಲಿ ಎರೆಯಲಾಗಿದೆ. ಅಗಿಂದಾಗ್ಗೆ ಬರುತಲೆ ಇರುವ ಹಿಂದೀ—ವಿರೋಧಿ ಕಾಯಿದೆಗಳನ್ನು ತರಬೇಡಿರೆಂದು ಅವರು ಸರಕಾರಕ್ಕೆ ಮಾಡಿಕೊಂಡಿರುವ ಪ್ರಾರ್ಥನೆಗಳು ವ್ಯರ್ಥವೇ ಆಗಿವೆ. ಅವುಗಳಲ್ಲಿ ಅತ್ಯಂತ ಅಪಾಯಕರವಾದುದು ಈಗ ಬಂದಿರುವ “ ಘೆಟ್ಟೋ ” ಅಥವಾ ಪ್ರತ್ಯೇಕೀಕರಣ ಕಾಯಿದೆ. ಅದರ ಸೃಷ್ಟಿಕರ್ತನು ಬೇರಾರೂ ಅಗಿರದೆ ಶ್ವೇತಜನಾಂಗದ ಶ್ರೇಷ್ಠತೆಯೆಂಬ ಧರ್ಮದ ಆಚಾರ್ಯ ಪುರುಷ ಜಾನ್ ಕ್ರಿಶ್ಚನ್ ಸ್ಮಟ್ಸರೇ ಆಗಿದ್ದಾರೆ. ಜಗತ್ತು ಅವರನ್ನು ಪ್ರಜಾತಂತ್ರ ಸ್ವಾತಂತ್ರ್ಯಗಳ ರಕ್ಷಕ, ನ್ಯಾಯ ಸಮಾನತೆಗಳ ಮತ್ತು ಶಾಂತಿ ಮಾನವ ಹಕ್ಕುಗಳ ಪರಿಪಾಲಕನೆಂದು ಗೌರವಿಸುತ್ತದೆ ಮತ್ತೆ !

ರಾಷ್ಟ್ರೀಯವಾದಿಗಳಾದ ದಿವಂಗತ ಜನರಲ್ ಹರ್ಟಜೋಗರು ಹಿಂದೀ ವಿರೋಧಿಗಳಲ್ಲಿ ನಿಸ್ಸೀಮರಾದರೂ ತಾವು ಮುಖ್ಯ ಮಂತ್ರಿಗಳಾಗಿದ್ದಷ್ಟು ಕಾಲ ಕೇಪಟೌನ ಒಪ್ಪಂದವನ್ನು ಅಕ್ಷರಶಃ ಪಾಲಿಸಿದರು. ಆದರೆ ಮುಖ್ಯ ಮಂತ್ರಿ ಸ್ಮಟ್ಸರು ೧೯೧೪ ರ ಗಾಂಧೀ-ಸ್ಮಟ್ಸ ಒಡಂಬಡಿಕೆಯನ್ನೂ ೧೯೨೭ ರ ಕೇಪಟೌನ ಒಪ್ಪಂದವನ್ನೂ ಕಸಕ್ಕಿಂತ ಕಳತೆಯಾಗ್ಗಿ ಕಂಡು ಧೂರ್ತತೆಯಿಂದ ಅವುಗಳನ್ನು ಮುರಿದು ತಮ್ಮ ರಾಷ್ಟ್ರದ ಗೌರವಕ್ಕೆ ಧಕ್ಕೆ ತಂದಿದ್ದಾರೆ.

ಜನರಲ್ ಸ್ಮಟ್ಸರ ಮೇಲೆ ಹೊರಿಸಬಹುದಾದ ಆರೋಪಗಳು ಪ್ರಚಂಡವಾಗಿವೆ. ಇದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ೧೯೩೯ ರಲ್ಲಿ ಎರಡನೆ ಬಾರಿ ಅವರು ಮುಖ್ಯ ಮಂತ್ರಿ ಪದಕ್ಕೆ ಬಂದ ನಂತರ ನಡೆಸಿರುವ ಹಿಂದೀ ವಿರೋಧಕ ಚಟುವಟಿಕೆಗಳ ಸಂಕ್ಷಿಪ್ತ ಅವಲೋಕನದಿಂದ ಹಿಂದೀಯರನ್ನು ದಕ್ಷಿಣ ಅಫ್ರಿಕೆಯಿಂದ ಹೊರಗಟ್ಟುವದೇ ಅವರ ಉದ್ದೇಶವೆಂದು ಯಾವ ನಿಷ್ಪಕ್ಷಪಾತಿಗೂ ಮನವರಿಕೆಯಾಗದಿರದು. ಯುರೋಪಿಯನ್ ಪ್ರದೇಶಗಳಲ್ಲಿ ಹಿಂದೀಯರ ಚಂಚು ಪ್ರವೇಶ ಎಷ್ಟು ಮಟ್ಟಿಗಾಗಿದೆಯೆಂಬುದನ್ನು ಕಂಡುಹಿಡಿಯಲು ಅವರು ಮೊದಲನೆ ಬ್ರೂಮ ಸಮಿತಿಯನ್ನು ನೇಮಿಸಿದರು. ಆದರೆ ಅದರ ವರದಿ ತಮ್ಮ ಅಪೇಕ್ಷೆಗೆ ವ್ಯತಿರಿಕ್ತವಾಗಿದ್ದುದನ್ನು ನೋಡಿದ ಸ್ಮಟ್ಸರು ಅದನ್ನು ತಿರಸ್ಕರಿಸಿ ಎರಡನೆ ಬ್ರೂಮ ಸಮಿತಿಯನ್ನು ನೇಮಿಸಿದರು. ಹಿಂದೀಯರು ಮತ್ತು ಹಿಂದೀಯ ಅಧಿಕ ಸಂಖ್ಯಾಕರಾಗಿರುವ ನಿರ್ದೇಶಕ ಮಂಡಲಗಳುಳ್ಳ ಕಂಪನಿಗಳು ೧೯೨೭ ರಿಂದೀಚೆಗೆ ಯುರೋಪಿಯನ್ನರಿಂದ ಕೊಂಡ ಅಸ್ತಿಗಳ ಅಳವನ್ನು ಅದು ವರದಿ ಮಾಡುವದಕ್ಕಾಗಿತ್ತು. ಹೀಗೆ ಕೊಳ್ಳಲು ಕಾರಣಗಳನ್ನು ಪರಿಶೀಲಿಸುವದು ಅದರ ಕೆಲಸವಾಗಿರಲಿಲ್ಲ.

ಈ ಬಾರಿಯ ವರದಿಯನ್ನು ಕಾರ್ಯರೂಪಕ್ಕೆ ಇಳಿಸಲು ಮಾತ್ರ ಸ್ಮಟ್ಸರು ಅಸಾಧಾರಣ ಅತುರವನ್ನು ತೋರಿದರು. ಹಿಂದುಸ್ತಾನ ಸರಕಾರದ ನಿಷೇಧ, ಮಾನ್ಯ ಶಾಸ್ತ್ರಿ, ರಾಜಾ ಸರ್ ಮಹಾರಾಜಸಿಂಗ ರೇಜಾ ಅಲಿ ಮೊದಲಾದ ಪ್ರಮುಖರ ಬಿನ್ನಹ, ಇವಾವುದನ್ನೂ ಲೆಕ್ಕಿಸದೆ ಯೂನಿಯನ್ ಪಾರ್ಲಮೆಂಟನಲ್ಲಿ ೧೯೪೩ ರಲ್ಲಿ ಏಶಿಯಾಟಿಕರ ವ್ಯಾಪಾರ ಮತ್ತು ಭೂಸಂಪಾದನೆಯ ಹಕ್ಕನ್ನು ನಿಯಂತ್ರಿಸುವ “ ಪೆಗಿಂಗ ಕಾಯಿದೆ ” ಯೆಂದು ಪ್ರಸಿದ್ಧವಾದ ಕಾಯಿದೆಯನ್ನು ಪಾಸು ಮಾಡಿದ್ದಾಯಿತು. ಇದು ಬರಿ ತ್ವರಿತದ ಕ್ರಮವೆಂದೂ ಸದ್ಯಃ ಸ್ಥಿತಿಯನ್ನು ಇದ್ದಂತಿಡುವದೇ ಅದರ ಉದ್ದೇಶವೆಂದೂ ನಾತಾಳದ ಹಿಂದೀಯರ ಸ್ಥಿತಿಗತಿಯನ್ನು ಕಂಡುಹಿಡಿಯಲು ಮುಂದೊಂದು ನ್ಯಾಯಾಧೀಶರ ಸಮಿತಿಯನ್ನು ನೇಮಿಸಿ ಅದರ ಸಲಹೆಯಂತೆ ಹಿಂದೀ ಸಮಸ್ಯೆಗಳನ್ನು ಒಂದೇಟಿಗೆ ಪರಿಹರಿಸಿಬಿಡಲಾಗುವದೆಂದೂ ಆಗ ಮಾತು ಕೊಟ್ಟಿದ್ದರು. ಆ ಕಾಯಿದೆ ದರ್ಬಾನ ನಗರಕ್ಕಷ್ಟೆ ಅನ್ವಯಿಸುತಿತ್ತು.

ಒಪ್ಪಂದದ ಧಿಕ್ಕಾರ

೧೯೪೪ ರಲ್ಲಿ ಜಾನ ಸ್ಮಟ್ಸರು ನಾತಾಳ ಹಿಂದೀ ಕಾಂಗ್ರೆಸ್ಸಿನ ಗೂಡ ಒಂದು ಪವಿತ್ರ ಒಪ್ಪಂದ ಮಾಡಿಕೊಂಡರು. ದಕ್ಷಿಣ ಅಫ್ರಿಕೆಯ ಹಿಂದೀ ಕಾಂಗ್ರೆಸ್ಸು ಹಿಂದೀ ಪ್ರಶ್ನೆಯನ್ನು ಯುಕ್ತ ರಾಷ್ಟ್ರಗಳ ಮುಂದೆ ಮಂಡಿಸುವ ಬೆದರಿಕೆಹಾಕಿದೆಯೆಂಬ ಟೊಳ್ಳು ನೆವವನ್ನು ಎತ್ತಿಕೊಂಡು ಕಾಂಗ್ರೆಸ್ಸಿನ ಮುಂದಾಳುಗಳಿಗೆ ಮೊನ್ನೆ ಭೆಟ್ಟಿಯನ್ನು ನಿರಾಕರಿಸಿದ ಈ ಸ್ಮಟ್ಸ ಮಹಾಶಯರೇ ಅಂದು ಕಾಂಗ್ರೆಸ್ಸಿನ ಮುಂದಾಳುಗಳನ್ನು ಪ್ರಿಟೋರಿಯಾದಲ್ಲಿ ತಮಗೆ ಭೆಟ್ಟಿಯಾಗಲು ಕರೆದಿದ್ದರು.

ಸ್ವಲ್ಪ ಕಾಲದ ಚರ್ಚೆಯ ನಂತರ ಪ್ರಿಟೋರಿಯಾ ಒಪ್ಪಂದವೆಂದು ಪ್ರಸಿದ್ಧವಾದ ಒಪ್ಪಂದಕ್ಕೆ ಎಪ್ರಿಲ ೧೮, ೧೯೪೪ನೆ ದಿನ ಸ್ಮಟ್ಸರು ಹಸ್ತಾಕ್ಷರ ಮಾಡಿದರು. ಈ ಒಪ್ಪಂದವೇ ಕಾಂಗ್ರೆಸ್ಸಿನ ಬಲ ಪಕ್ಷದ ಮುಂದಾಳುಗಳ ಅಧಃಪಾತಕ್ಕೆ ಕಾರಣವಾಯಿತು. ಏಕೆಂದರೆ ಅಂದಿನಿಂದ ಅರೇ ತಿಂಗಳಿಗೆ, ನವೆಂಬರ ೧೮ಕ್ಕೆ, ಸ್ಮಟ್ಸರು ಆ ಒಪ್ಪಂದವನ್ನು ಕಸದ ಬುಟ್ಟಿಗೆ ಒಗೆದರು. “ ಪ್ರಿಟೋರಿಯಾ ಒಪ್ಪಂದದಿಂದ ಧ್ಯೇಯಸಾಧನೆಯಾಗಿಲ್ಲವಾಗಿ ಇತರ ಮಾರ್ಗಗಳಿಂದ ಉಪಾಯಗಳನ್ನು ಹುಡುಕಬೇಕಾಗಿದೆ ” ಎಂದು ದ. ಆ. ಹಿಂದೀ ಕಾಂಗ್ರೆಸ್ಸಿಗೆ ಅವರು ಬರೆದುಬಿಟ್ಟರು.

ಈ ಹೊಸ “ಮಾರ್ಗಗಳು” ಯಾವವು? ನ್ಯಾಯಾಧೀಶ ಸಮಿತಿಯ ಸಲಹೆಗಳು. ಆ ಸಮಿತಿಯವರು ಹಿಂದೀ ಸರಕಾರದ ಮತ್ತು ಯೂನಿಯನ್ ಸರಕಾರದ ಪ್ರತಿನಿಧಿಗಳ ದುಂಡುಮೇಜಿನ ಪರಿಷತ್ತನ್ನು ಕರೆಯಬೇಕೆಂದೂ ಸೌಹಾರ್ದಪೂರ್ವಕ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದೂ ಸೂಚಿಸಿದ್ದರು. ಆದರೆ ಪುನಃ ಸ್ಮಟ್ಸರು ಈ ಸೂಚನೆಗಳನ್ನು ಗಾಳಿಗೆ ತೂರಿದರು. ಸದ್ಯದ ಪೆಗಿಂಗ ಕಾಯಿದೆಯ ಬದಲಿಗೆ ಇಡಿ ನಾತಾಳ ಮತ್ತು ಟ್ರಾನ್ಸವಾಲ ಪ್ರಾಂತಗಳಿಗೆ ಅನ್ವಯಿಸುವ ಹೊಸ ಶಾಶ್ವತ ಕಾಯಿದೆಯನ್ನು ತರುವದಾಗಿ ನಿಷ್ಠುರತೆಯಿಂದ ಸಾರಿಬಿಟ್ಟರು.

ಈ ಹೇಳಿಕೆಯಿಂದ ಹಿಂದೀ ವಲಸೆಗಾರರ ಪರಿಸ್ಥಿತಿಗೆ ದೊಡ್ಡ ಗಂಡಾಂತರವೊದಗಿತು. ಕಳೆದ ಫೆಬ್ರುವರಿಯಲ್ಲಿ ದಕ್ಷಿಣ ಅಫ್ರಿಕೆಯ ಹಿಂದೀ ಕಾಂಗ್ರೆಸ್ಸಿನ ಅಧಿವೇಶನವನ್ನು ಮುಂದುವರಿಸಿದ ನಂತರ ಹಿಂದೀ ಮುಂದಾಳುಗಳ ಒಂದು ಶಿಷ್ಟಮಂಡಲ ಸ್ಮಟ್ಸರನ್ನು ಕಂಡು ದಕ್ಷಿಣ ಅಫ್ರಿಕೆಯ ಕಾಯಿದೆ ಪುಸ್ತಕದಲ್ಲಿ ಇಂಥ ಕಲಂಕಿತ ಕಾಯಿದೆಗೆ ಸ್ಥಾನ ಕೊಡಬಾರದೆಂದೂ ಅವರು ನೇಮಿಸಿದ ಸಮಿತಿಯ ಸೂಚನೆಯನ್ನೆ ಅನುಸರಿಸಿ ದುಂಡುಮೇಜಿನ ಪರಿಷತ್ತು ಕೂಡಿಸಬೇಕೆಂದೂ ಪ್ರಾರ್ಥಿಸಿತು. ಹಿಂದೀಯರು ಈ ಕಾಯಿದೆಯನ್ನು ಸರ್ವಥಾ ಒಪ್ಪಲಾರರೆಂದೂ ದಕ್ಷಿಣ ಅಫ್ರಿಕಾ ವಿಧಾಯಕ ಸಭೆಯಲ್ಲಿ ತಾವಿಟ್ಟ ವಿಶ್ವಾಸಕ್ಕೆ ಇದರಿಂದ ಘಾತಮಾಡಿದಂತಾಗುವದೆಂದೂ ಅವರು ನಿರ್ದಾಕ್ಷಿಣ್ಯವಾಗಿ ತಿಳಿಸಿದರು. ಆದರೆ ಎಲ್ಲವೂ ವ್ಯರ್ಥ. ಜನರಲ್ ಸ್ಮಟ್ಸರು ಈ ವಿಷಯದಲ್ಲಿ ಹಿಂದುಸ್ತಾನದ ಹಸ್ತಕ್ಷೇಪವನ್ನು ತಾವು ಸಹಿಸಲಾರೆವೆಂದು ನೆಟ್ಟಗೆ ಹೇಳಿಬಿಟ್ಟರು. ಹಿಂದೀ ಪ್ರಶ್ನೆ ಪೂರ್ಣ ಅಂತರಿಕ ಪ್ರಶ್ನೆ ಎಂದು ಅವರು ಸಾಧಿಸಿದ್ದಲ್ಲದೆ ತಮ್ಮ ಮಸೂದೆಯನ್ನು ಮುಂದೊತ್ತಿಯೆ ತೀರುವದಾಗಿ ಸಾರಿಬಿಟ್ಟರು.

ಹಿಂದೀ ನಿವಾಸಿಗಳು ಉಗ್ರವಾಗಿ ನಿಷೇಧಿಸಿದರು, ಹಿಂದುಸ್ತಾನ ಸರಕಾರ ತೀಕ್ಷ್ಣವಾಗಿ ಖಂಡಿಸಿತು. ಆದರೆ ಹೇಯ, ಅತ್ಯಂತ ಪಕ್ಷಪಾತಿ, ವರ್ಣದ್ವೇಷದ ಅತಿ ದುಷ್ಟ ಸೃಷ್ಟಿಯಾದ ಈ ಕಾಯಿದೆ ಪಾಸಾಗಿಯೆ ಬಿಟ್ಟಿತು. ಮತಾಧಿಕಾರರಹಿತವಾದ, ಅರ್ಥಿಕ ದೃಷ್ಟಿಯಲ್ಲಿ ದುರ್ಬಲವಾದ ಜನತೆಯೊಂದನ್ನು ಸಂಪೂರ್ಣವಾಗಿ ಇದು ನಿರ್ಬಂಧಿತ ವಸತಿಯ ಜೀವನಕ್ಕೆ ಗುರಿಯಾಗಿ ಮಾಡುವದು.

೩೨ ವರ್ಷಗಳ ನಂತರ ಮತ್ತೆ ಸತ್ಯಾಗ್ರಹ

ಹಿಂದುಸ್ತಾನಕ್ಕೂ ಇಂಗ್ಲಂಡಿಗೂ ಶಿಷ್ಟಮಂಡಲಗಳನ್ನು ಕಳಿಸಿದ ಮೇಲೆ ೩೨ ವರ್ಷಗಳ ನಂತರ ಇದೀಗ ದಕ್ಷಿಣ ಅಫ್ರಿಕೆಯ ಹಿಂದೀ ನಿವಾಸಿಗಳು ಪುನಃ ಸತ್ಯಾಗ್ರಹ ಸಮರವನ್ನು ಹೂಡಿದ್ದಾರೆ. ಮೊದಲನೆಯದು ೧೯೧೪ ರಲ್ಲಿ ಹೂಡಲ್ಪಟ್ಟು ಗಾಂಧೀ-ಸ್ಮಟ್ಸ ಒಡಂಬಡಿಕೆಯೊಡನೆ ಕೊನೆಗೊಂಡಿತ್ತು. ಈ ಬಾರಿ ಟ್ರಾನ್ಸವಾಲ ಹಿಂದೀ ಕಾಂಗ್ರೆಸ್ಸಿನಯುವಕ ಅಧ್ಯಕ್ಷರಾದ ಯೂಸುಫಮಹಮುದ ದಾದೂ, ನಾತಾಳ ಹಿಂದೀ ಕಾಂಗ್ರೆಸ ಅಧ್ಯಕ್ಷ ರಾಜ ಜಿ. ಎಂ. ನಾಯಕರ್, ದಕ್ಷಿಣ ಅಫ್ರಿಕಾ ಹಿಂದೀ ಕಾಂಗ್ರೆಸಿನ ಹಿಂದಿನ ಅಧ್ಯಕ್ಷ ಸೊರಾಬಜಿ ರುಸ್ತುಮಜಿ, ಹಿಂದೀ ಮಹಿಳಾ ಸಂಘದ ಮುಂದಾಳಾದ ಡಾ. ಗುಣಂ ಮೊದಲಾದವರು ಈಗಾಗಲೆ ಕಠಿನ ಶಿಕ್ಷೆಗೆ ಗುರಿಯಾಗಿದ್ದಾರೆ.

ಬಿಳಿಯರ ರೌದ್ರಾವೇಶ

ದರ್ಬಾನದ ಇಂಗ್ಲೀಷ ಜನರೂ ಈ ಸತ್ಯಾಗ್ರಹಿಗಳಿಗೆ ಬುದ್ಧಿ ಕಲಿಸಲು ನಿಶ್ಚಯ ಮಾಡಿದ್ದಾರೆ. ಅವರು ಇರುಳಲ್ಲಿ ಸತ್ಯಾಗ್ರಹಿಗಳ ಶಿಬಿರವನ್ನು ನುಗ್ಗಿ, ಡೇರೆಗಳನ್ನು ಕೆಡಹಿ, ಅವುಗಳನ್ನೆತ್ತಿಕೊಂಡೊಯ್ಯುತ್ತಲೂ ಈ “ ಕೂಲಿ ” ಗಳನ್ನು ಸಜೀವವಾಗಿ ಸುಡಲೆಂದು ಅವಕ್ಕೆ ಉರಿ ಹಚ್ಚುತ್ತಲೋ ಇದ್ದಾರೆ. ಅವರು ಮಂಚಗಳನ್ನು ಮುರಿದು ಕಂಬಳಿಗಗನು ಒಯ್ಯುತಿದ್ದಾರೆ. ದ. ಅಫ್ರಿಕೆಯಲ್ಲಿ ತಮ್ಮ ಬಿಳಿ ಜನಾಂಗದ ಶ್ರೇಷ್ಠತೆಯನ್ನು ಕಾಪಾಡಲು ಸ್ತ್ರೀಸತ್ಯಾಗ್ರಹಿಗಳನ್ನು ಒದೆಯುತ್ತಲೂ ಇದ್ದಾರೆ. ದರ್ಬಾನದ ಬಿಳಿಯರ ಮೊನ್ನೆ ಮೊನ್ನಿನ ಪಾತವೀಕೃತಿಯೆಂದರೆ ಹಿಂದೀ ಕಾನ್ಸಟೇಬಲನಾದ ಕೃಷ್ಣ ಪಿಳ್ಳೆಯನ್ನು ಅಮಾನುಷವಾಗಿ ಕೊಲೆ ಮಾಡಿದ್ದು. ಅವನು ರಸ್ತೆಯಲ್ಲಿ ಹೋಗುತಿದ್ದಾಗ ಬಿಳಿ ಪುಂಡರು ಅವನ ಮೇಲೆ ಏರಿ ಹೋಗಿ ಕೊಂದುಹಾಕಿದರು. ಯುರೋಪಿಯನ್ ಪುಂಡಾಟಿಕೆಗೆ ಅಹುತಿಯಾದ ಈ ಪ್ರಥಮ ಹುತಾತ್ಮನು ಅಸ್ಪತ್ರೆಯಲ್ಲಿ ಶಾಂತವಾಗಿ ಪ್ರಾಣಬಿಟ್ಟನು.

ಹಿಂದುಸ್ತಾನದಲ್ಲಿ ಸಾಮಾನ್ಯವಾಗಿ ಘೆಟ್ಟೋ ಕಾಯಿದೆಯೆಂದು ಪ್ರಸಿದ್ಧವಾದ ಈ ಏಶಿಯಾಟಿಕ್ ಭೂಸ್ವಾಮ್ಯ ಮತ್ತು ಹಿಂದೀ ಪ್ರಾತಿನಿಧ್ಯ ಕಾಯಿದೆಯ ವಿರುದ್ಧ ಹಿಂದೀ ನಿವಾಸಿಗಳು ಸತ್ಯಾಗ್ರಹವನ್ನು ಸಾಗಿಸುತ್ತಲೆ ಹೋಗುವರು. ಈ ಅಮಾನುಷ ಕೊಲೆ ಮತ್ತು ಇತರ ಪುಂಡಾಟಿಕೆಗಳಿಗೆ ಸೊಪ್ಪು ಹಾಕದೆ ಇದು ಅನಿರ್ದಿಷ್ಟ ಕಾಲದ ವರೆಗೆ ಸಾಗುವದು. ಈ ಅವಮಾನಕರ ಕಾಯಿದೆಯನ್ನು ಸೈರಿಸುವ ಮನಸ್ಸು ಅವರಿಗೆ ಳ್ಳಷ್ಟೂ ಇಲ್ಲ.

ಹಿಂದೀ ಸರಕಾರದ ಮಲತಾಯಿ ಪ್ರೇಮ

ಸಾವಿರಗಟ್ಲೆ ಹಿಂದೀಯರನ್ನು ಸರ್ವನಾಶ ಸಾವುಗಳಿಗೆ ಗುರಿಮಾಡಬಹುದಾದ ಈ ಭಯಾನಕ ಪರಿಸ್ಥಿತಿಯನ್ನು ಎದುರಿಸಲು ಹಿಂದುಸ್ತಾನ ಸರಕಾರದವರು ಮಾಡಿದ್ದು ಅತ್ಯಲ್ಪ. ಈ ಮಲತಾಯಿ ಪ್ರೇಮದ ಪರಿಣಾಮವಾಗಿಯೆ ದಕ್ಷಿಣ ಅಫ್ರಿಕೆಯ ವರ್ಣದ್ವೇಷದಿಂದ ಉನ್ಮತ್ತರಾದ ಬಿಳಿಯರಿಗ ಹಿಂದೀ ನಿವಾಸಿಗಳನ್ನು ಅಸ್ಪೃಶ್ಯರಂತೆ ನಡೆಸಿಕೊಳ್ಳಲು ಸಹಾಯವಾಗಿದೆ. ದಕ್ಷಿಣ ಅಫ್ರಿಕೆಯೊಡನಿದ್ದ ವ್ಯಾಪಾರ ಒಪ್ಪಂದವನ್ನು

(೬ ನೆ ಪುಟಕ್ಕೆ)

ಮುಂಬಯಿ ಮಾರಾಟ ಕರ

೧೦,೦೦೦ಕ್ಕಿಂತ ಹೆಚ್ಚು ವ್ಯವಹಾರವಿದ್ದವರೆಲ್ಲ ಹೆಸರು ರಜಿಸ್ಟರ ಮಾಡಿಸಬೇಕು

ಯಾವ ಯಾವ ಪದಾರ್ಥಗಳ ಮೇಲೆ ಮಾರಾಟ ಕರವಿಲ್ಲ?

ಮುಂಬಯಿ ಸರಕಾರದವರು ಹೇರಿದ ಮಾರಾಟ ಕರ ಕಾಯಿದೆಯಲ್ಲಿಯ ಮುಖ್ಯ ಮುದ್ದೆಗಳಂತಿವೆ.

ವಿಶಿಷ್ಟ ಶಬ್ದಗಳ ವ್ಯಾಖ್ಯೆ

ಗುಡ್ಸ (ಸರಕು) ಎಂದರೆ ದಿವಾಣಿ ಸ್ವರೂಪದ ಯಾವದೊಂದು ದಾವೆಯಲ್ಲಿ ಕಾಯದೇಬದ್ಧ ರೀತಿಯಿಂದ ಸಿದ್ಧಪಡಿಸಲಿಕ್ಕೆ ಬರುವ ಹಕ್ಕು ಸಂಬಂಧ ಶೇಅರಗಳು, ಸ್ಟಾಕ, ಸೆಕ್ಯುರಿಟಿಗಳನ್ನು ಬಿಟ್ಟು ಉಳಿದೆಲ್ಲ ಬಗೆಯ ಜಂಗಮ ಅಸ್ತಿ. ಇದರಲ್ಲಿ ಸ್ಥಾವರ ಅಸ್ತಿಯ ದುರಸ್ತಿಗಾಗಿ ಸುಧಾರಣೆಗಾಗಿ, ಸುಸಜ್ಜತೆಗಾಗಿ ಮತ್ತು ಕಟ್ಟುವದರ ಸಲುವಾಗಿ ಉಪಯೋಗಿಸಲು ಬರುವ ಇಲ್ಲವೆ ಬರದಿರುವ ಎಲ್ಲ ಬಗೆಯ ಸರಕುಗಳು ವಸ್ತುಗಳು ಮತ್ತು ಪದಾರ್ಥಗಳ ಸೇರ್ಪಡೆ ಇದರಲ್ಲಿ ಅಗುವದು.

ಮಾರಾಟ— ಪ್ರತ್ಯಕ್ಷವಾಗಿ ಹಣಕೊಟ್ಟು ಇಲ್ಲವೆ ಮುಂದೆ ಯಾವಾಗಾದರೂ ಕೊಡುವ ಇಚ್ಛೆಯಿಂದ ಇಲ್ಲವೆ ಉಳಿದ ಯೋಗ್ಯ ಬೆಲೆ ತೆಗೆದುಕೊಂಡು ಮೇಲಿನ ಸರಕು ಶಬ್ದದ ವ್ಯಾಖ್ಯೆಯಲ್ಲಿ ಸಮಾವಿಷ್ಟವಾದ ಪದಾರ್ಥಗಳ ಮಾರಾಟ ಇಲ್ಲವೆ ಒಡೆತನ ಹಕ್ಕಿನ ವರ್ಗೀಕರಣ. ಇದರಲ್ಲಿ ಒತ್ತಿ, ಹೊಣೆ, ತಾಬೆ ಮೊದಲಾದ ಸ್ವರೂಪದ ವ್ಯವಹಾರವನ್ನು ಬಿಟ್ಟುಗೊಟ್ಟು ಕಾಂಟ್ರ್ಯಾಕ್ಟದ ಕೆಲಸದಲ್ಲಿ ಆದ ಸರಕಿನ ಮಾರಾಟ ಇಲ್ಲವೆ ಒಡೆತನ ಹಕ್ಕಿನ ವರ್ಗೀಕರಣ ಇದರ ಸೇರ್ಪಡೆಯು ಅಗುವದು.

ಕಾಂಟ್ರ್ಯಾಕ್ಟ:— ಪ್ರತ್ಯಕ್ಷವಾಗಿ ಸುರತಿ ಹಣ ಇಲ್ಲವೆ ಮುಂದೆ ಕೊಡುವ ಕರಾರಿನಿಂದ ಅಥವಾ ಯೋಗ್ಯ ಬೆಲೆ ಸ್ವೀಕರಿಸಿ ಕಟ್ಟಡ ರಸ್ತೆ, ಪೂಲು ಮೊದಲಾದಂಥ ಸ್ಥಾವರ ಅಸ್ತಿಯ ದುರಸ್ತಿಗಾಗಿ ಸುಧಾರಣೆಗಾಗಿ ಇಲ್ಲವೆ ಸುಸಜ್ಜತೆಗಾಗಿ ಮತ್ತು ಕಟ್ಟುವದರ ಸಲುವಾಗಿ ಮಾಡಿಕೊಂಡ ಇಲ್ಲವೆ ಮಾಡಿಕೊಳ್ಳಲಿರುವ ಕರಾರ ವ್ಯವಹಾರ.

ಮಾರುವವ:— ಅಡತಿ ಇಲ್ಲವೆ ಉಳಿದ ಅರ್ಥಿಕ ಲಾಭ ದೊರಕಿಸುವದಕ್ಕಾಗಿ ಮುಂಬಯಿ ಪ್ರಾಂತದಲ್ಲಿ ಸರಕು ಮಾರಾಟ ಮಾಡುವ ಮನುಷ್ಯ. ಇದರಲ್ಲಿ ಸದಸ್ಯರಿಗೆ ಸರಕು ಮಾರಾಟ ಇಲ್ಲವೆ ಪೂರೈಕೆ ಮಾಡುವ ಮಂಡಳ ಸಂಘಗಳು ಇಲ್ಲವೆ ಅಡತಿಗಳು ಇದರಲ್ಲಿ ಸಮಾವೇಶವಾಗುವವು.

ರಜಿಸ್ಟರ್ಡ ಮಾರಾಟಗಾರ:— ೧೯೪೬ ನೇ ಇಸ್ವಿಯ ಮುಂಬಯಿ ಸರಕಾರದ ಮಾರಾಟಕರದ ಕಾಯದೆಯನ್ವಯ ರಜಿಸ್ಟರ ಮಾಡಿಕೊಂಡ ಮಾರಾಟಗಾರ.

ವರ್ಷ:— ಸರಕಾರ ಲೆಕ್ಕದ ವರ್ಷ— ಎಪ್ರಿಲ ೧ ರಿಂದ ಮುಂದಿನ ಮಾರ್ಚ ೩೧ ರ ವರೆಗೆ ೧೨ ತಿಂಗಳು.

ಮಾರಾಟದ ಬೆಲೆ:— ಮಾರಾಟಗಾರನಿಗೆ ಕೆಳಗಿನಂತೆ ದೊರೆವ ಇಲ್ಲವೆ ದೊರೆಯಬೇಕಾದ ಬೆಲೆ ಇಲ್ಲವೆ ಮೌಲ್ಯ.

ವಸ್ತು ಪೂರೈಕೆ ಇಲ್ಲವೆ ಮಾರಾಟದಲ್ಲಿ ಬಾಡಿಗೆ, ಡಿಲೆವರಿ ಮತ್ತು ಅದನ್ನು ಆ ಸ್ಥಳದಲ್ಲಿ ಕೂಡಿಸಿ ಕೊಡುವದಕ್ಕಾಗಿ ಆದ ಎಲ್ಲ ವೆಚ್ಚ; ಒಂದು ವೇಳೆ ಇದನ್ನು ಸ್ವತಂತ್ರ ರೀತಿಯಿಂದ ವಸೂಲ ಮಾಡಿದ್ದರೆ ಇದನ್ನು ಕಡಮೆ ಮಾಡಿ ಮತ್ತು ಪದಾರ್ಥಗಳನ್ನು ಮಾರಾಟ ಮಾಡುವಾಗ ಇಲ್ಲವೆ ಅದಕ್ಕೂ ಮೊದಲು ವ್ಯಾಪಾರಸ್ಥನು ಆ ಬಗ್ಗೆ ಮಾಡಿದ ಇತರ ಖರ್ಚು ಹಿಡಿದು ಆಯಾ ಉದ್ಯೋಗದಲ್ಲಿಯ ನೀತಿ ನಿಯಮಗಳಿಗನುಸಾರವಾಗಿ ಪೂರೈಸಿದ ಇಲ್ಲವೆ ಮಾರಾಟ ಮಾಡಿದ ಸರಕುಗಳಿಗಾಗಿ ರೋಖ ಕಸರು ತೆಗೆದು ಉಳಿದದ್ದು ಸಿಕ್ಕುವ ಮತ್ತು ಸಿಕ್ಕಬೇಕಾದ ಬೆಲೆ ಇಲ್ಲವೆ ಮೌಲ್ಯ.

(ಬ) ಈ ಕಾಯಿದೆಯನ್ವಯ ಗೊತ್ತುಪಡಿಸಿದ ಪ್ರಮಾಣದಲ್ಲಿ ಸರಕು ಮತ್ತು ಕೂಲಿ ಪ್ರಮಾಣವನ್ನು ಗಮನಿಸಿ ಕಂಟ್ರ್ಯಾಕ್ಟದಲ್ಲಿ ಕೂಲಿ ವಜಾ ಮಾಡಿ ಉಳಿದ ಕಂಟ್ರ್ಯಾಕ್ಟ ಕೆಲಸದಲ್ಲಿ ಸಿಕ್ಕುವ ಮತ್ತು ಸಿಕ್ಕಬೇಕಾದ ಬೆಲೆ ಇಲ್ಲವೆ ಮೌಲ್ಯ.

ಲ) ಟರ್ನಓವರ:— ವಸ್ತು ಪೂರೈಕೆ, ಮಾರಾಟ ಮಾಡುವದು ಇಲ್ಲವೆ ಕಂಟ್ರ್ಯಾಕ್ಟರನ ಕೆಲಸದಲ್ಲಿ ಸಿಕ್ಕುವ ಇಲ್ಲವೆ ಸಿಕ್ಕಬೇಕಾದಂಥ ಒಂದು ವಿಶಿಷ್ಟ ಕಾಲಾವಧಿಯಲ್ಲಿಯ ಮಾರಾಟದ ಬೆಲೆಯು ಒಟ್ಟು ಹಣ.

ಮೇಲೆ ವಿವರಿಸಿದ ವ್ಯಾಖ್ಯೆಯ ಅಧಾರದಿಂದ ಕಾಯದೆಯನ್ನು ಮಾಡುವಾಗ ೧) ಪದಾರ್ಥಗಳ ಮಾರಾಟ ಬೆಲೆಯ ಮೇಲೆ ಕರ ಕೊಡಬೇಕಾದುದು ೨) ಒಂದು ವಸ್ತುವಿನ ಮಾರಾಟದ ಮೇಲೆ ಕರ ಕೊಡಬೇಕಾಗಿದೆ ಮತ್ತು ೩) ಈ ಕರವನ್ನು ರಜಿಸ್ಟರ ಮಾಡಿದ ವ್ಯಾಪಾರಸ್ಥರೆ ತುಂಬ ತಕ್ಕದ್ದು ಎಂಬ ಮೂರು ಮಹತ್ವದ ಸೂತ್ರಗಳನ್ನು ಲಕ್ಷಿಸಲಾಗಿದೆ. ಇದರ ಮೇಲಿಂದ ಕಾಯದೆಯೆಂತು ಜಾರಿಯಲ್ಲಿ ಬರುವದೆಂಬದನ್ನು ಗಮನಿಸಲು ಬಹಳ ಸಹಾಯವಾಗುವದು.

ರಜಿಸ್ಟರ ಮಾಡಿಸುವುದೆಂತು?

ಈ ಕಾಯದೆಯನ್ವಯ ಯಾವ ಮಾರಾಟಗಾರನ ಒಟ್ಟು ಮಾರಾಟದ ಹಣ ೧೯೪೫ ಮಾರ್ಚ ೩೧ ಕ್ಕೆ ಮುಗಿದ ವರ್ಷದಲ್ಲಿ ೧೦ ಸಾವಿರ ರೂಪಾಯಿಗಳ ಮೇಲಾಗಿದೆಯೊ ಅಂಥ ಪ್ರತಿಯೊಬ್ಬ ವ್ಯಾಪಾರಸ್ಥನು ರಜಿಸ್ಟರ ಮಾಡಿಸಿಕೊಳ್ಳಲು ಅರ್ಜಿ ಮಾಡತಕ್ಕದ್ದು. ಈ ಕರಾಕರಣೆಗೆ ಬಾರದಿದ್ದಂಥ ವ್ಯಾಪಾರಿಗಳು ಕೂಡ ರಜಿಸ್ಟರ ಮಾಡಿಸಲಿಕ್ಕೆ ಬೇಕು. ೧೯೪೬ ನೇ ಅಕ್ಟೋಬರ ೧ ರಿಂದ ಆದ ಮಾರಾಟ ವ್ಯವಹಾರದ ಮೇಲೆ ಅವರು ಕರ ಕೊಡಬೇಕಾಗುವದು. ಅದಕ್ಕೂ ಮೊದಲಿನ ವ್ಯವಹಾರದ ಮೇಲೆ ಕರವನ್ನು ಕೊಡಬೇಕಾದುದಿಲ್ಲ.

೧೯೪೫ ನೇ ಇಸ್ವಿಯ ಮಾರ್ಚ ೩೧ ಕ್ಕೆ ಮುಗಿಯುವ ೧೨ ತಿಂಗಳಲ್ಲಿ ಯಾವ ವ್ಯಾಪಾರಸ್ಥನ ವ್ಯಾಪಾರ ೧೦ ಸಾವಿರ ರೂಪಾಯಿಗಳಿಗಿಂತ ಕಡಮೆಯಾಗಿದೆಯೊ ಅಂಥವನು ಮತ್ತು ಯಾವನು ಅನಂತರ ಮಾರಾಟ ವ್ಯವಹಾರ ಮಾಡಲು ಪ್ರಾರಂಭಿಸಿರುವನೋ ಅಂಥವನು ಮತ್ತು ಇನ್ನು ಮುಂದೆ ಯಾರು ವ್ಯವಸಾಯ ಮಾಡಬಯಸುವರೊ ಅವರು ಇವರೆಲ್ಲ ಯಾವ ವರ್ಷದಲ್ಲಿ ಒಟ್ಟು ವ್ಯಾಪಾರ ಬೆಲೆ ೧೦ ಸಾವಿರಕ್ಕಿಂತ ಹೆಚ್ಚು ಅಗುವದೊ ಅಂದಿನಿಂದ ಒಂದು ತಿಂಗಳೊಳಗಾಗಿ ರಜಿಸ್ಟರ ಮಾಡಿಸಲು ಅರ್ಜಿ ಮಾಡತಕ್ಕದ್ದು. ಮತ್ತು ಅಂದಿನಿಂದ ಮೂರು ತಿಂಗಳ ನಂತರ ಅವನ ಮಾರಾಟ ವ್ಯವಹಾರದ ಮೇಲೆ ಕರ ಕೊಡಬೇಕಾಗುವದು. ಆದರೆ ಮೊದಲಿನ ವ್ಯವಹಾರದ ಮೇಲೆ ಕರ ಕೊಡಬೇಕಿಲ್ಲ.

ರಜಿಸ್ಟರ ಮಾಡಿಸದಿದ್ದರೆ?

ಈ ಮೇಲೆ ಹೇಳಿದ ರೀತಿಯಲ್ಲಿ ಯಾವನು ರಜಿಸ್ಟರ ಮಾಡಿಸಲೇಬೇಕೋ ಅಂಥವನು ರಜಿಸ್ಟರ ಮಾಡಿಸದಿದ್ದರೆ ಅಪರಾಧ ಮಾಡಿದಂತಾಗುವದು. ಆದರೆ ೧೦ ಸಾವಿರಕ್ಕಿಂತ ಕಡಮೆ ವ್ಯವಹಾರವಿದ್ದವರು ರಜಿಸ್ಟರ ಮಾಡಿಸದೆ ವ್ಯವಹಾರ ನಡೆಸಬಹುದು.

ಪ್ರತಿಯೊಬ್ಬನು ಆಯಾ ವಿಭಾಗದಲ್ಲಿಯ ಸೇಲ್ಸ ಟ್ಯಾಕ್ಸ ಅಫೀಸರರ ಕಡೆಗೆ ಅರ್ಜಿ ನಮೂನೆಯಲ್ಲಿ ಅರ್ಜಿ ಮಾಡತಕ್ಕದ್ದು. ಒಬ್ಬನೇ ವ್ಯಾಪಾರಸ್ಥನ ವ್ಯಾಪಾರ ಬೇರೆ ಬೇರೆ ಕಡೆಗಳಲ್ಲಿ ಇದ್ದರೆ ಮತ್ತು ಅಯಾ ಸ್ಥಳಗಳಲ್ಲಿ ಕೂಡಿ ವಾರ್ಷಿಕ ವ್ಯವಹಾರ ೧೦ ಸಾವಿರ ರೂಪಾಯಿಗಿಂತ ಹೆಚ್ಚು ಆದರೆ ಆ ಎಲ್ಲ ಸ್ಥಳಗಳಿಗಾಗಿ ರಜಿಸ್ಟರ ಅರ್ಜಿಯನ್ನು ಸ್ವತಂತ್ರವಾಗಿ ಮಾಡತಕ್ಕದ್ದು. ಪ್ರತಿಯೊಬ್ಬ ವ್ಯಾಪಾರಸ್ಥನ ವ್ಯಾಪಾರವು ಆಯಾ ಸ್ಥಳಗಳಲ್ಲಿ ೧೦ ಸಾವಿರ ರೂ. ಗಿಂತ ಹೆಚ್ಚು ಅಗಬೇಕೆಂಬ ನಿಯಮವಿಲ್ಲ.

ಕರ ವಸೂಲಿಯೆಂತು?

ಗಿರಾಕಿಗಳಿಂದ ಕರದ ಹಣವನ್ನು ವಸೂಲ ಮಾಡಲು ಕಾಯಿದೆಯಿಂದ ಏನೂ ಅಡ್ಡಿಯಿಲ್ಲ. ಆದರೆ ಮಾರಾಟದ ವ್ಯವಹಾರದ ಮೇಲೆ ಸರಕಾರಕ್ಕೆ ಕರಕೊಡಲು ವ್ಯಾಪಾರಸ್ಥರೆ ಹೊಣೆಗಾರರು. ಯಾವ ಮಾಲಿನ ಪೂರೈಕೆ ಪೇಟೆಯಲ್ಲಿಯ ಬೇಡಿಕೆಗಿಂತ ಕಡಿಮೆಯಿದೆಯೊ ಆ ಸರಕಿನ ವ್ಯಾಪಾರದ ಮೇಲೆ ಬೀಳುವ ಕರವನ್ನು ಗಿರಾಕಿಗಳಿಂದ ತೆಗೆದುಕೊಳ್ಳಲು ಬರುವದು. ಏಕೆಂದರೆ ಗಿರಾಕಿಗಳು ಆ ಹೊಣೆ ಸಹಿಸಿ ಮಾಲು ತೆಗೆದುಕೊಳ್ಳುವರು. ಆದರೆ ಯಾವ ಸರಕು ಪೇಟೆಯಲ್ಲಿಯ ಬೇಡಿಕೆಗಿಂತ ಹೆಚ್ಚಿದೆಯೊ ಆ ಮಾಲಿನ ಮೇಲೆ ಗಿರಾಕಿಗಳನ್ನು ಕೇಳಿದರೂ ಅವರು ಕರ ಕೊಡಲಾರರು. ಏಕೆಂದರೆ ಕರ ಕೊಡದೆ ಇದ್ದರೂ ಅವರಿಗೆ ಪೇಟೆಯಲ್ಲಿ ಆ ಪದಾರ್ಥ ಸಿಕ್ಕೇ ತೀರುವದು.

ರಜಿಸ್ಟರ ಮಾಡಿಸಿದ ಪ್ರತಿಯೊಬ್ಬ ವ್ಯಾಪಾರಸ್ಥನು ಜೂನ ೩೦, ಸಪ್ಟಂಬರ ೩೦, ಡಿಸೆಂಬರ ೩೧ ಮತ್ತು ಮಾರ್ಚ ೩೧ ಕ್ಕೆ ಮುಗಿಯುವ ಮೂರು ತಿಂಗಳುಗಳಲ್ಲಿ ಮಾಡಿದ ಮಾಲ ಮಾರಾಟದ ವ್ಯವಹಾರದ ಮಾರಾಟದ ಬೆಲೆಯ ಇಲ್ಲವೆ ವ್ಯವಹಾರದ ಲೆಕ್ಕವನ್ನು ಆಯಾ ಮೂರು ತಿಂಗಳ ಮುಗಿದ ಬಳಿಕ ಒಂದು ತಿಂಗಳಲ್ಲಿ ನಮೂನೆ ನಂಬರ ೬ ರಂತೆ ತಮ್ಮ ವಿಭಾಗದಲ್ಲಿಯ ಸೇಲ್ಸ ಟ್ಯಾಕ್ಸ ಅಫೀಸರರ ಕಡೆಗೆ ಕಳಿಸತಕ್ಕದ್ದು. ಮತ್ತು ಆಯಾ ಲೆಕ್ಕದ ಪಟ್ಟಿಯೊಡನೆ ಯಾವ ಮಾರಾಟ ವ್ಯವಹಾರದ ಮೇಲೆ ಕರ ಕೊಡಬೇಕಾಗಿದೆ ಅವನು ಸ್ವತಃ ಸರಕಾರದ ಬೊಕ್ಕಸದಲ್ಲಿ ಹಣ ತುಂಬಿ ಚಲನವನ್ನು ಆ ಲೆಕ್ಕದ ಸಂಗಡನೆ ಕಳಿಸಬೇಕು. ಸೇಲ್ಸಟ್ಯಾಕ್ಸ ಅಫೀಸರರಿಗೆ ಕರದ ಹಣವನ್ನು ಸ್ವತಃ ತೆಗೆದುಕೊಳ್ಳಲು ಬರುವದಿಲ್ಲ. ಸರಕಾರದ ಬೊಕ್ಕಸದಲ್ಲಿಯೆ ಅದನ್ನು ತುಂಬಬೇಕು.

ಯಾವ ವಸ್ತುಗಳ ಮೇಲೆ ಕರವಿಲ್ಲ

೧) ಎಲ್ಲ ಬಗೆಯ ಅಕ್ಕಿ ಬೇಳೆ, ಖಾದ್ಯ ಧಾನ್ಯ, ೨) ಹಿಟ್ಟು, ಅಟಾ, ಮೈದಾ ಸಜ್ಜಿಗೆ, ತವಡು, ೩) ರೊಟ್ಟಿ, ೪) ಮಾಂಸ, ೫) ಮೀನ, ೬) ತಾಜಾ ತತ್ತಿ, ೭) ಕೋಳಿ ಮತ್ತು ಉಳಿದ ದನಗಳು ೮) ಔಷಧೋಪಯೋಗಿ ವನಸ್ಪತಿಗಳನ್ನು ಬಿಟ್ಟು ಉಳಿದ ತಾಜಾ ಮತ್ತು ಒಣಗಿದ ಪಲ್ಲೆ, ೯) ತಾಜಾ ಮತ್ತು ಒಣಗಿದ ಫಲಗಳು, ೧೦) ಬೇಯಿಸಿದ ಅನ್ನ ಮತ್ತು ಖಾದ್ಯ ಪದಾರ್ಥ ಮಾರುವ ಖಾನಾವಳಿ ಕ್ಲಬ್ಬು, ಹೋಟೆಲಗಳಲ್ಲಿ ಮಾರುತಿರುವ ಆದರೆ ಒಂದು ಸಮಯದ ಊಟದ ದರ ೮ ಅಣೆಗಿಂತ ಹೆಚ್ಚಿಲ್ಲವೊ ಅಂಥ ಕೇವಲ ಬೇಯಿಸಿದ ಅನ್ನ ಮತ್ತು ಖಾದ್ಯ ಪದಾರ್ಥ, ೧೧) ಬೆಲ್ಲ, ಸಕ್ಕರೆ, ಕಾಕವಿ, ೧೨) ಉಪ್ಪು, ೧೩) ಸಾಸವಿ, ಹುಣಿಶಣ್ಣು, ಮೆಣಸಿನಕಾಯಿ, ೧೪) ತಾಜಾ ಹಾಲು, ಅಟ್ಟಿಸಿದ ಹಾಲು, ಹಾಲಿನ ಪುಡಿ, ಸಣ್ಣ ಹುಡುಗರ ಉಳಿದ ಅನ್ನ, ೧೫) ಸರಕಾರದವರು ಗೊತ್ತುಪಡಿಸುವ ತರಹದ ಮತ್ತು ದರದ ಬಟ್ಟೆಗಳು, ೧೬) ಚಿಮಣಿಎಣ್ಣೆ, ೧೭) ಹತ್ತಿಕಾಳು, ಮೇವು ಮತ್ತು ದನಗಳ ಇತರ ಅಹಾರ ಪದಾರ್ಥ, ೧೮) ಗೊಬ್ಬರ, ೧೯) ಕ್ವಿನಾಯಿನ್, ೨೦) ಕೋಲಗ್ಯಾಸ ಕೆಲ ಕರಾರಗಳ ಮೇಲೆ, ೨೧) ತಂಬಾಕು ಮತ್ತು ತಂಬಾಕದ ಎಲ್ಲ ಪದಾರ್ಥ ಮತ್ತು ಪ್ರಕಾರಗಳು, ೨೨) ಕಡ್ಡಿಪೆಟ್ಟಿಗೆ, ೨೩) ಬಂಗಾರ ಬೆಳ್ಳಿ ಮತ್ತು ಅವುಗಳ ನಾಣ್ಯಗಳು, ೨೪) ಮುಂಬಯಿ ಅಫು ಮತ್ತು ಮುಂಬಯಿ ಅಬಕಾರಿ ಕಾಯದೆಯ ೧೮೭೮ರನ್ವಯ ಯಾವ ದರ ಮೇಲೆ ಕರವಿದೆಯೇ ಆ ಎಲ್ಲ ಪದಾರ್ಥ ಪೆಟ್ರೋಲ ಮತ್ತು ಮೋಟರ ನಡೆಸುವದಕ್ಕಾಗಿ ಬೇಕಾಗುವ ಇತರ ಎಲ್ಲ ದ್ರವ ಪದಾರ್ಥಗಳು ಅವುಗಳ ಮಿಶ್ರಣ, ೨೬) ನೀರು, ೨೭) ಮುಸರು ಮಜ್ಜಿಗೆ, ೨೮) ಅರಿಷಣ ಒಳ್ಳೆಣ್ಣೆ ಮತ್ತು ಎಳ್ಳೆಣ್ಣೆ, ೨೯) ಅಡಿಕೆ, ೩೦) ಕೈನೂಲಿನ ಇಲ್ಲವೆ ಗಿರಣಿ ನೂಲಿನಿಂದ ಕೈಮಗ್ಗಗಳಲ್ಲಿ ತಯಾರಾದ ಬಟ್ಟೆಗಳು, ೩೧) ೬ ರೂಪಾಯಿಗಿಂತ ಹೆಚ್ಚು ಬೆಲೆ ಇಲ್ಲದ ಕಂಬಳಿ, ೩೨) ಉರುವಲ ಮತ್ತು ಇದ್ದಲಿ, ೩೩) ಹಿಂಡಿ ಮತ್ತು ಇತರ ಗೊಬ್ಬರ, ೩೪) ಕೈಯಿಂದ ಇಲ್ಲವೆ ದನಗಳ ಸಹಾಯದಿಂದ ನಡೆವ ಹೊಲಗಳಿಗೆ ಬೇಕಾದ ಉಪಕರಣಗಳು, ೩೫ ಶಾಲಾ ಖಾತೆಯ ಅಧಿಕಾರಿಗಳು ಗೊತ್ತುಪಡಿಸಿದ ಪಠ್ಯ ಪುಸ್ತಕ, ಪಾಟಿ, ಪೆನ್ಸಿಲ, ಖಡು ಮತ್ತು ಇತರ ಬಣ್ಣದ ಪೆನ್ಸಿಲ್ಲುಗಳು, ವಹಿಗಳು, ಡ್ರಾಯಿಂಗ ಪುಸ್ತಕಗಳು, ವಿದ್ಯಾರ್ಥಿಗಳಿಗೆಮಾರಲ್ಪಡುವ ಇಂಚ ಪಟ್ಟಿಗಳು, ೩೬) ಸ್ಟಾಂಪವೆಂಡರರು ಮಾರುವ ಸ್ಟ್ಯಾಂಪುಗಳು. ಈ ಮಾಲುಗಳ ಮೇಲೆ ಮಾರಾಟ ಕರವನ್ನು ಹೇರಬಾರದೆಂದು ನಿರ್ಣಯಿಸಲಾಗಿದೆ.

ಇವಲ್ಲದೆ ಸಾಮಾನುಗಳನ್ನು ಒಯ್ಯುವಾಗ (ಬಾಡಿಗೆ) ಇನ್ನೊಬ್ಬರಿಗೆ ಅದನ್ನು ಒಪ್ಪಿಸಿ ಕೊಡುವಾಗ (ಡಿಲಿವರಿ) ಮತ್ತು ಯಾವದೊಂದು ಯಂತ್ರ ಮುಂತಾದ್ದನ್ನು ಕೂಡಿಸಿ ಕೊಡುವಾಗ ತಗಲುವ ವೆಚ್ಚ ಕಾಂಟ್ರ್ಯಾಕ್ಟದಲ್ಲಿ ತಗಲಿದ ಮತ್ತು ಕ್ವಾಯದೆಯಿಂದ ಕೊಡುವದರಲ್ಲಿ ಬರುವ ವೆಚ್ಚ, ಒಬ್ಬ ವ್ಯಾಪಾರಿಯು ಮತ್ತೊಬ್ಬರ ರಜಿಸ್ಟರಕ್ಕಾಗಿ ಹಾಕಿದ ಬೆಲೆ ಮುಂಬಯಿ ಪ್ರಾಂತದ ಹೊರಗೆ ಕಳಿಸುವ, ಮಾಲಿನ ಮೊದಲಾದವುಗಳ ವ್ಯವಹಾರದಲ್ಲಿ ವರ್ಷದ ಕೊನೆಯಲ್ಲಿ ಒಟ್ಟು ವ್ಯವಹಾರದಲ್ಲಿ ನೂರಕ್ಕೆ [illegible] ರಷ್ಟು ಬಿಟ್ಟು ಉಳಿದೆಲ್ಲ ಹಣದ ಮೇಲೆ ಕರ ಕೊಡಬೇಕಾಗುವದು.

ಕರ ಮಾಫವಿದ್ದ ಸಾಮಾನಗಳ ವ್ಯವಹಾರ ಮಾಡುವವರೂ ರಜಿಸ್ಟರ ಮಾಡಿಸಲಿಕ್ಕೆ ಬೇಕು. ಅನಂತರ ತಾವು ಕೇವಲ ಕರಮಾಫವಿದ್ದ ವಸ್ತುಗಳ ಮಾರಾಟವನ್ನೆ ಮಾಡುತ್ತೇವೆಂದು ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡಬೇಕು. ಹಾಗೆ ಸೇಲ್ಸಟ್ಯಾಕ್ಸ ಕಮೀಶನರರಿಗೆ ಮನವರಿಕೆಯಾದರೆ ಅವರು ನಿಯಮ ೨೦ ರಂತೆ ಇಂಥ ವ್ಯಾಪಾರಿಗಳು ನಮೂನೆ ೬ ರ ನ್ವಯ ೩ ತಿಂಗಳ ಲೆಕ್ಕ ಕಳಿಸುವ ಅವಶ್ಯಕತೆಯಿಲ್ಲೆಂದು ವಿಧಿಸಬಹುದು, ಅದೊಂದು ವರ್ಷದ ಮಟ್ಟಿಗೆ ಮಾತ್ರ. ಪ್ರತಿ ವರ್ಷ ವರ್ಷ ಮುಗಿದ ನಂತರ ಒಂದು ತಿಂಗಳ ಇಂಥ ದಾಖಲೆಯನ್ನು ಪಡೆಯಲು ಆ ವ್ಯಾಪಾರಿಯು ಮತ್ತೆ ಅರ್ಜಿ ಮಾಡಿಕೊಳ್ಳಬೇಕು. ಪ್ರತಿ ವರ್ಷ ಇದೇ ಕ್ರಮ ನಡೆಯತಕ್ಕದ್ದು.

ಎರಡು ಸಲ ಕರ ಬೀಳತಕ್ಕದ್ದಲ್ಲ

ಪ್ರತ್ಯಕ್ಷವಾಗಿ ಗಿರಾಕಿಗಳಿಗೆ ವಸ್ತುಗಳನ್ನು ಮಾರುವಾಗಲೆ ಕರ ಬೀಳತಕ್ಕದ್ದು. ಉಳಿದ ಕಡೆ ಕರ ಬೀಳದಂತೆ ವ್ಯವಸ್ಥೆ ಮಾಡಲಾಗಿದೆ. ಒಬ್ಬ ರಜಿಸ್ಟರ್ಡ ವ್ಯಾಪಾರಿಯು ಮತ್ತೊಬ್ಬ ರಜಿಸ್ಟರ್ಡ ವ್ಯಾಪಾರಿಗೆ ಮಾಲು ಕೊಡುವಾಗ ತಿರುಗಿ ಮಾರುವದಕ್ಕಾಗಿ ಮಾಲು ಕೊಟ್ಟದೆಂದು ಶರಾ ಬರೆಯತಕ್ಕದ್ದು. ಇಂಥ ವ್ಯಾಪಾರಿಗಳ ಯಾದಿಯನ್ನೆಲ್ಲ ಸರಕಾರದವರು ಪ್ರಸಿದ್ಧಿಸುವರು. ಯಾರ ವ್ಯವಹಾರವು ವರ್ಷಕ್ಕೆ ೧೦ ಸಾವಿರ ರೂಪಾಯಿಗಳಿಗಿಂತ ಕಡಿಮೆ ಇದೆಯೋ ಮತ್ತು ಯಾವನು ರಜಿಸ್ಟರ ಮಾಡಿಸಿದ ದಾಖಲೆಯನ್ನು ಪಡೆದಿಲ್ಲವೊ ಅಂಥ ವ್ಯಾಪಾರಿಯು ಗಿರಾಕಿಯೆಂದೇ ತಿಳಿಯತಕ್ಕದ್ದು.

ಮುಂಬಯಿ ಪ್ರಾಂತದ ಹೊರಗೆ ಹೋಗುವ ಮಾಲಿಗೆ ಕರ ಕೊಡಬೇಕಿಲ್ಲ. ಲೆಕ್ಕದ ಪಟ್ಟಿಯಲ್ಲಿ ಮಾರಾಟವನ್ನು ವಜಾ ತೋರಿಸಬೇಕು.

ವ್ಯವಹಾರದ ಲೆಕ್ಕವನ್ನು ಸ್ಪಷ್ಟವಾಗಿ ಮೇಲೆ ವಿಧಿಸಿದ ಎಲ್ಲ ವಿಷಯವನ್ನೊಳಗೊಳ್ಳುವಂತೆ ಇಡಬೇಕು. ದೇಶೀ ಪದ್ಧತಿಯಿಂದ ಅದನ್ನಿಟ್ಟರೂ ನಡೆಯುವದು.

ಒಮ್ಮೆ ಮಾಡಿಸಿದ ರಜಿಸ್ಟರದಲ್ಲಿ ಅವಶ್ಯಕ ಬದಲಾವಣೆಗಾಗಿ ಅರ್ಜಿ ಮಾಡಿಕೊಳ್ಳಬಹುದು. ವಿಚಾರಣೆ ಮಾಡಿ ಅವಶ್ಯಕ ವ್ಯವಸ್ಥೆ ಮಾಡಲಾಗುವದು.

ಬರಗಾಲ ಪರಿಹಾರ

ಮುಂಬಯಿ ಪ್ರಾಂತದ ದಕ್ಷಿಣ ಭಾಗದಲ್ಲಿ ಮಳೆಯಾಗದ್ದರಿಂದ ಪರಿಸ್ಥಿತಿ ದಿನ ದಿನಕ್ಕೆ ಭೀಕರವಾಗಹತ್ತಿದೆ. ವಿಜಾಪುರ ಜಿಲ್ಹೆಯ ದಕ್ಷಿಣ ಭಾಗ, ಅಥಣಿ ತಾಲೂಕು ಹೆಚ್ಚು ನಿಕೃಷ್ಟ ಪರಿಸ್ಥಿತಿಯಲ್ಲಿದೆ. ಮಳೆಯಾಗದ್ದರಿಂದ ಮುಂಗಾರಿ ಬೆಳೆ ಒಣಗಹತ್ತಿವೆ. ಕುಡಿವ ನೀರಿನ ಅರಬು ಎಲ್ಲೆಡೆಯುಂಟಾಗಿದೆ. ವಿಜಾಪುರ ಜಿಲ್ಹಾ ಬರಗಾಲ ಪರಿಹಾರ ಸಮಿತಿಯ ಶ್ರೀ ಹಬ್ಬು ಮತ್ತು ಸಿದ್ಧಾಂತಿಯವರು ಬರಗಾಲ ಭಾಗದಲ್ಲಿ ಸಂಚರಿಸಿ ಬಂದ ನಂತರ ಹೊರಡಿಸಿದ ಪ್ರಕಟನೆಯಲ್ಲಿ ಪರಿಸ್ಥಿತಿ ಬಹಳ ನಿರಾಶಾಜನಕವಾಗಿದೆಂದೂ ಇನ್ನೊಂದು ವಾರದಲ್ಲಿ ಮಳೆಯಾಗದಿದ್ದರೆ ಬೆಳೆಯೆಲ್ಲ ಕಮರಿ ಹೋಗಿ ಇನ್ನಷ್ಟು ದುಃಸ್ಥಿತಿಯುಂಟಾಗುವದೆಂದೂ ಅಭಿಪ್ರಾಯಪಟ್ಟಿರುವರು. ಬರಗಾಲ ಕಾಮಗಿರಿಗಳನ್ನು ಹಲವೆಡೆ ನಿಲ್ಲಿಸಿಬಿಟ್ಟದ್ದರಿಂದ ಜನ ಬಾಯಿ ಬಾಯಿ ಬಡಕೊಳ್ಳಹತ್ತಿರುವರೆಂದೂ ಅದುದರಿಂದ ಕೂಡಲೆ ಆ ಕಾಮಗಿರಿಗಳನ್ನು ಪ್ರಾರಂಭಿಸಬೇಕೆಂದೂ ಕೇಳಿಕೊಂಡಿದ್ದಾರೆ. ಬೆಳಗಾವಿ ಧಾರವಾಡ ಜಿಲ್ಹೆಗಳ ಕೆಲ ಪ್ರದೇಶದಲ್ಲಿಯೂ ಸಾಕಷ್ಟು ಮಳೆಯಾಗಿಲ್ಲ. ಮಳೆಯ ಹಾದಿಯನ್ನೇ ಜನ ನೋಡುತಿರುವರು. ಸರಕಾರದವರೂ ಬರಗಾಲ ಗ್ರಸ್ತರಿಗೆ ಸಹಾಯ ಸಲ್ಲಿಸಲಣಿಯಾಗಿರುವರು. ಅಗ್ಗದರದಿಂದ ಕಾಳನ್ನು ಹಂಚುವದಕ್ಕಾಗಿ ಮತ್ತು ಗರ್ಭಿಣಿಯರಿಗೂ ಚಿಕ್ಕಮಕ್ಕಳಿಗೂ ಪುಕ್ಕಟೆ ಹಾಲು ಹಂಚುವುದಕ್ಕಾಗಿ ಪೂರಕ ಹಣ ಮಂಜೂರ ಮಾಡಿಸಿಕೊಂಡಿರುವರು. ಬರಗಾಲ ಪರಿಹಾರ ಕಾರ್ಯ ಸಮಾಧಾನಕರ ಮತ್ತು ಶಿಸ್ತಿನಿಂದ ಸಾಗತಕ್ಕದ್ದು. ಸರಕಾರದ ದ್ರಾವಿಡೀ ಪ್ರಾಣಾಯಾಮ ಮಾರ್ಗದಿಂದ ಈ ಕೆಲಸ ನಡೆದರೆ ಅನೇಕರು ಅಹುತಿಯಾಗಬಹುದು. ಅದುದರಿಂದ ಸರಕಾರದವರು ಮತ್ತು ಸಾರ್ವಜನಿಕರು ಹಾಗು ಉದಾರ ಧನಿಕರು ಬರಗಾಲಗ್ರಸ್ತರ ಬವಣೆಯನ್ನು ಹಿಂಗಿಸಬೇಕೆಂದು ಅಗ್ರಹಪಡಿಸುತ್ತೇವೆ.

ಉತ್ತರಕನ್ನಡದ ಅಭಿವೃದ್ಧಿ

ಉತ್ತರ ಕನ್ನಡ ಜಿಲ್ಹೆ ಅರಣ್ಯ ಸಂಪತ್ತಿನ ಬೀಡಾಗಿದ್ದರೂ ಈ ವರೆಗೆ ಅದನ್ನು ಸರಕಾರದವರು ಅಲಕ್ಷಿಸಿ ಬಿಟ್ಟದ್ದರಿಂದ ಅದು ಕೇವಲ ಚಳಿಜ್ವರದ ಬೀಡಾಗಿ ನಿರ್ಜನ ಪ್ರದೇಶವಾಗಿ ಪರಿಣಮಿಸಿದೆ. ಇದೀಗ ಲೋಕಪ್ರಿಯ ಮಂತ್ರಿಗಳು ಅಧಿಕಾರ ವಹಿಸಿಕೊಂಡದ್ದರಿಂದ ಉತ್ತರ ಕನ್ನಡದ ಅಭಿವೃದ್ಧಿಗಾಗಿ ಹೆಣಗಬೇಕೆಂದು ಒತ್ತಾಯಪಡಿಸಲಾಗುತ್ತದೆ. ಆ ಜಿಲ್ಹೆಯ ಮುಸಲ್ಮಾನ ಪ್ರತಿನಿಧಿ ಶ್ರೀ ಜಿ ಎಚ್ ಶಮಸುದ್ದೀನರು ಜಿಲ್ಹೆಯಲ್ಲಿಯ ದೊಡ್ಡ ಪ್ರಮಾಣದ ಉದ್ಯೋಗ ವ್ಯವಸಾಯಗಳನ್ನು ಸ್ಥಾಪಿಸುವ ಶಕ್ಯಾಶಕ್ಯತೆಗಳನ್ನು ವಿಚಾರ ಮಾಡುವುದಕ್ಕಾಗಿ ತಜ್ಞ ಸಮಿತಿಯೊಂದನ್ನು ನೇಮಿಸಬೇಕೆಂದು ಮುಂಬಯಿ ಶಾಸನ ಸಭೆಯಲ್ಲಿ ಗೊತ್ತುವಳಿ ತಂದಿದ್ದರು. ಮುಂಬಯಿ ಸರಕಾರದವರು ಇಡೀ ಪ್ರಾಂತದ ಉದ್ಯೋಗಾಭಿವೃದ್ಧಿಯ ಮತ್ತು ಪುನರ್ಘಟನೆಯ ವಿಚಾರ ನಡೆಸಿದ್ದರಿಂದ ಮೇಲಿನ ಗೊತ್ತುವಳಿಗೆ ಬೆಂಬಲ ದೊರೆಯಲಿಲ್ಲ. ಅಲ್ಲದೆ ಈ ಗೊತ್ತುವಳಿಯಲ್ಲಿ ದೊಡ್ಡ ಪ್ರಮಾಣದ ಉದ್ಯೋಗಗಳ ವಿಷಯ ಮಾತ್ರವಿದ್ದು ಹಳ್ಳಿಗರ ಜೀವಾಳದಂತಿದ್ದ ಸಣ್ಣ ಸಣ್ಣ ಕೈಗಾರಿಕೆಗಳನ್ನು ಇದರಲ್ಲಿ ಸೇರಿಸದಿದ್ದುದೂ ಕಾಂಗ್ರೆಸ್ಸಿನ ಮನ್ನಣೆ ಪಡೆಯದಿರಲು ಕಾರಣವಾಯಿತು. ಇಷ್ಟರಿಂದ ಕಾಂಗ್ರೆಸ್ಸು ಉತ್ತರ ಕನ್ನಡ ಜಿಲ್ಹೆಯ ಉದ್ಯೋಗಾಭಿವೃದ್ಧಿಯನ್ನು ಅಲಕ್ಷಿಸುತಿದೆಂದು ಮಾತ್ರ ಯಾರೂ ತಿಳಿಯಕೂಡದು. ಹಿಂದಿನ ಸರಕಾರವು ಈಗಾಗಲೆ ಪ್ರಾಂತದಲ್ಲಿಯ ಅನೇಕಾನೇಕ ಉದ್ಯೋಗಗಳ ಶಕ್ಯಾಶಕ್ಯತೆಗಳನ್ನೂ ಬೆಳವಣಿಗೆಯ ಮಾರ್ಗಗಳನ್ನೂ ಕಂಡು ಹಿಡಿದು ವರದಿ ಮಾಡಲು ತಜ್ಞರ ಸಮಿತಿಯೊಂದನ್ನು ನೇಮಿಸಿದ್ದು ಅದೀಗಾಗಲೆ ಏಳು ಉಪ ಸಮಿತಿಗಳಲ್ಲಿ ಪರಿವರ್ತನಹೊಂದಿ ಒಂದು ವರ್ಷದಿಂದ ಕಾರ್ಯ ನಡೆಸಿ ಇಷ್ಟರಲ್ಲಿಯೆ ವರದಿ ಒಪ್ಪಿಸಲಿದೆ. ಅದರ ವರದಿ ಬಂದ ನಂತರ ಸರಕಾರ ಮುಂದಿನ ಕಾರ್ಯ ಕೈಕೊಳ್ಳಲಿದೆಯೆಂದು ತಿಳಿಯುತ್ತದೆ. ಈಗಿನ ಅರ್ಥಿಕ ಮಂತ್ರಿಗಳಾದ ಶ್ರೀ ವೈಕುಂಠಲಾಲರಿಗೆ ಉತ್ತರ ಕನ್ನಡ ಜಿಲ್ಹೆಯ ಪರಿಚಯ ಪೂರ್ಣವಿದೆ. ಈಗಾಗಲೆ ಅಲ್ಲಿ ಶ್ರೀ ಕಲ್ಲಾಪುರರ ನೇತೃತ್ವದಲ್ಲಿ ನಡೆದ ಗ್ರಾಮೋದ್ಯೋಗ ಕಾರ್ಯದ ಪರಿಚಯವೂ ಅವರಿಗಿದೆ. ಅವರು ಇನ್ನು ಮುಂದೆ ಇದಕ್ಕೂ ಹೆಚ್ಚು ಗಮನವನ್ನು ಜಿಲ್ಹೆಯ ಉದ್ಯೋಗಾಭಿವೃದ್ಧಿಯತ್ತ ಕೊಡುವರೆಂದು ನಂಬುತ್ತೇವೆ.

ಸಂಪಾದಕೀಯ ✻ ✻ ✻ ✻ ✻ ✻ ✻ ✻ ✻

ಟೀಕೆ-ಟಿಪ್ಪಣಿಗಳು

ಶಿಕ್ಷಣ ಪರಿಷತ್ತು

ಹಿಂದುಸ್ತಾನದ ಶಿಕ್ಷಣ ಪದ್ಧತಿಯು ಪರಕೀಯರಿಂದ ತಮ್ಮ ಕಲ್ಯಾಣ ದೃಷ್ಟಿಯಿಂದಲೆ ಜಾರಿಯಲ್ಲಿ ತರಲ್ಪಟ್ಟದ್ದರಿಂದ ಅದು ಸದೋಷವಾಗಿದೆಂದು ಎಲ್ಲರೂ ಒಪ್ಪುವರು. ಈಗ ಭಾರತೀಯರಲ್ಲಿ ಜಾಗ್ರತಿಯಾಗಿದ್ದು ಶಿಕ್ಷಣದ ಪುನರ್ಘಟನೆ ಮಾಡಿ ನಮಗೆ ಒಗ್ಗುವಂಥ ಶಿಕ್ಷಣ ಪದ್ಧತಿಯನ್ನು ಜಾರಿಯಲ್ಲಿ ತರಬೇಕೆಂಬ ಕೂಗು ಎಲ್ಲೆಲ್ಲಿಯೂ ಕೇಳಬರುತ್ತದೆ. ಇದನ್ನು ತಿಳಿದೆ ಮಹಾತ್ಮಾ ಗಾಂಧಿಯವರ ಪ್ರೇರಣೆಯಿಂದ ಡಾ. ಝಾಕೀರ ಹುಸೇನ ಸಮಿತಿಯವರು ಮೂಲ ಶಿಕ್ಷಣ ಯೋಜನೆಯನ್ನು ಸಿದ್ಧಪಡಿಸಿದರು. ಕೇಂದ್ರ ಸರಕಾರದ ಶಿಕ್ಷಣ ಸಲಹೆ ಸಮಿತಿಯೂ ವರದಿಯನ್ನೊಪ್ಪಿಸಿದೆ. ಮೂಲ ಶಿಕ್ಷಣವು ಬಹಳ ಕಡಿಮೆ ವೆಚ್ಚದ್ದಿದ್ದು ಕೈಗಾರಿಕೆ ಮೂಲಕ ಸಾಗುವುದರಿಂದ ಹೆಚ್ಚು ಉಪಯುಕ್ತವಾಗಿದೆ. ಇದರ ಪ್ರಯೋಗವನ್ನೂ ಆಯಾ ಪ್ರಾಂತಿಕ ಸರಕಾರಗಳು ನಡೆಸಿವೆ. ಒಂದು ಬಗೆಯ ಪೂರ್ವಗ್ರಹದೂಷಿತ ಭಾವನೆಯಿಂದ ಯಾವದೊಂದು ಯೋಜನೆಯನ್ನು ಕಾರ್ಯಕಾರಿ ಮಾಡಬಯಸಿದರೆ ಅದೆಂದಿಗೂ ಯಶಸ್ವಿಯಾಗದು. ಅಂತಃಕರಣಪೂರ್ವಕವಾಗಿ ಮತ್ತು ಸದ್ಭಾವನೆಗಳಿಂದ ಪ್ರಯೋಗವನ್ನು ಯಶಸ್ವಿ ಮಾಡಲು ಪ್ರವೃತ್ತರಾಗುವದೊಳಿತು. ಈ ಶಿಕ್ಷಣದ ವಿಷಯವನ್ನೆ ಕೂಲಂಕಷವಾಗಿ ವಿಚಾರ ಮಾಡಲು ಮುಂಬೈ ಮುಖ್ಯ ಮತ್ತು ಶಿಕ್ಷಣ ಮಂತ್ರಿಗಳು ಇದೇ ೩೦—೩೧ ಕ್ಕೆ ಪುಣೆಯಲ್ಲಿ ಶಿಕ್ಷಣ ಮಂತ್ರಿಗಳ ಮತ್ತು ತಜ್ಞರ ಪರಿಷತ್ತನ್ನು ಕರೆದಿರುವರು. ಮಹಾತ್ಮಾ ಗಾಂಧಿಯವರು ಇದರ ಪ್ರಾರಂಭೋತ್ಸವ ಮಾಡುವರು. ಈ ಪರಿಷತ್ತಿನಲ್ಲಿ ಶಿಕ್ಷಣದ ಪುನರ್ಘಟನೆಯ ಬಗ್ಗೆ ವಿಚಾರವಾಗಿ ಸಾಮಾನ್ಯವಾಗಿ ಒಂದೇ ಬಗೆಯ ಯೋಜನೆಯನ್ನು ಕೈಕೊಳ್ಳುವುದು ಅವಶ್ಯವಾಗಿದೆ. ಸ್ಥಾನಿಕ ಪರಿಸ್ಥಿತಿಗನುಸಾರವಾಗಿ ಸ್ವಲ್ಪ ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು. ಶಿಕ್ಷಣದ ಕಾರ್ಯದಲ್ಲಿ ಮತಭೇದವಿರಬಾರದು, ಇರಕೂಡದು. ಸಾಮಾನ್ಯ ಶಿಕ್ಷಣದಲ್ಲಿ ಧರ್ಮ ಸಂಸ್ಕೃತಿಗಳಿಗವಕಾಶವಿಲ್ಲ. ಅಂದ ಬಳಿಕ ಜಾತೀಯತೆಯ ಪ್ರಶ್ನೆಯೂ ಬರಲಾರದು. ಅದುದರಿಂದ ಎಲ್ಲ ಪ್ರಾಂತಗಳ ಶಿಕ್ಷಣ ಮಂತ್ರಿಗಳು ಮತ್ತು ತಜ್ಞರು ಈ ಪರಿಷತ್ತಿಗೆ ಹೋಗಿ ಅದರಲ್ಲಿ ನಿಶ್ಚಿತ ಯೋಜನೆ ಸಿದ್ಧಪಡಿಸಿ ಆಯಾ ಪ್ರಾಂತಗಳ ಶಿಕ್ಷಣದ ಪ್ರಗತಿ ಸಾಧಿಸಬೇಕೆಂದು ಸೂಚಿಸುತ್ತೇವೆ.

ಹೈದ್ರಾಬಾದ ಸುಧಾರಣೆಗಳು

ಹೈದರಾಬಾದದ ನಿಜಾಮ ಸಾಹೇಬರು ತಮ್ಮ ಸಂಸ್ಥಾನದಲ್ಲಿಯ ರಾಜಕೀಯ ಸುಧಾರಣೆಗಳನ್ನು ಸಾರಿದ್ದು ಅವುಗಳ ರೂಪರೇಷೆಗಳನ್ನು ಬೇರೆಡೆ ಕೊಟ್ಟದ್ದೇವೆ. ಈ ಸುಧಾರಣೆಗಳು ಅತ್ಯಂತ ಪ್ರತಿಗಾಮಿಯಾಗಿವೆ. ಜಾತೀಯತೆಯ ವಿಷವು ಅವುಗಳಲ್ಲಿ ತುಂಬಿದೆ. ವ್ಯವಸಾಯಿಕ ಮತದಾರ ಸಂಘಗಳನ್ನೇರ್ಪಡಿಸಿದ್ದರಿಂದ ಅಡಳಿತದ ಸೂತ್ರಗಳು ಕೇವಲ ಮೇಲಿನ ವರ್ಗದವರ ಕೈಯಲ್ಲಿಯು ಳಿವುದರಿಂದ ಜನಸಾಮಾನ್ಯರ ಕೈಯಲ್ಲಿ ಯಾವದೇ ಬಗೆಯ ಅಧಿಕಾರ ಸೂತ್ರಗಳುಳಿಯುವುದಿಲ್ಲ. ಇದಲ್ಲದೆ ಸಂಸ್ಥಾನದಲ್ಲಿ ಕೇವಲ ನೂರಕ್ಕೆ ೧೨ ರಷ್ಟಿದ್ದ ಮುಸಲ್ಮಾನರಿಗೆ ಶಾಸನಸಭೆಯಲ್ಲಿ ಹಿಂದುಗಳಷ್ಟೆ ಪ್ರಾತಿನಿಧ್ಯ ಕೊಡಲಾಗಿದೆ. ಇಷ್ಟೇ ಅಲ್ಲದೆ ಕ್ರಾನ ಅಸ್ತಿಗಳ ಪ್ರತಿನಿಧಿಗಳೆಂದು ನಿಜಾಮ ಸಾಹೇಬರು ಕೇವಲ ಮುಸಲ್ಮಾನರನ್ನೆ ನೇಮಿಸುವರೆಂದು ಗುಪ್ತ ಅಭಿವಚನ ಕೊಟ್ಟದ್ದಾರೆ. ಇದಲ್ಲದೆ ಕಾರ್ಯಕಾರಿ ಮಂಡಳದಲ್ಲಿರುವ ೧೧ ಸ್ಥಳಗಳಲ್ಲಿ ೯ ಜನ ಮುಸಲ್ಮಾನರೆ ಇರುವರು. ಇದನ್ನೆಲ್ಲ ನೋಡಿದರೆ ಶಾಸನ ಸಭೆಯಲ್ಲಿ ಮುಸಲ್ಮಾನರ ಸಂಪೂರ್ಣ ಬಹುಮತ ಯಾವಾಗಲೂ ಉಳಿಯುವಂತೆ ನೋಡಿಕೊಳ್ಳಲಾಗಿದೆಂದು ಗೊತ್ತಾಗುವದು. ನೂರಕ್ಕೆ೧೨ ರಷ್ಟಿರುವ ಮುಸಲ್ಮಾನರ ಕೈಯಲ್ಲಿ ಉಳಿದವರೆಲ್ಲ ನವೆಯಬೇಕು! ಇದೆಲ್ಲಿಯ ನ್ಯಾಯ!! ಎಲ್ಲ ಜಾತಿ ಜನಾಂಗದವರನ್ನು ಸಮಭಾವದಿಂದ ನೋಡಲಾಗುವುದೆಂದು ಆಶ್ವಾಸನ ಕೊಡುವ ನಿಜಾಮ ಸಾಹೇಬರು ಕೃತಿಯಲ್ಲಿ ಮಾತ್ರ ಮುಸಲ್ಮಾನರಿಗೆ ಎಲ್ಲ ಬಗೆಯ ಅಧಿಕಾರವನ್ನು ಕೊಟ್ಟಿರುವರು. ಮಜಲಿಸ್ ಇತ್ತೇಹಾದುಲ್ ಮುಸಲ್ಮೀನ ಸಂಸ್ಥೆಯ ಅಧ್ಯಕ್ಷರಿಗೆ ನಿಜಾಮ ಸಾಹೇಬರು ೧೯೪೩ ರಷ್ಟು ಹಿಂದೆಯೆ ಈ ಬಗೆಯ ಅಶ್ವಾಸನವನ್ನು ಕೊಟ್ಟದ್ದರಂತೆ. ಸರಕಾರದವರು ಸುಧಾರಣೆಗಳನ್ನು ಜಾಹೀರಪಡಿಸುವ ಮೊದಲೆ ಆ ಅಧ್ಯಕ್ಷರು, ಬಹುಶಃ ಅಲ್ಲಿಗೆ ಹೋಗಿದ್ದ ಜಿನ್ನಾ ಸಾಹೇಬರ ಪ್ರೇರಣೆಯಿಂದ ಅವನ್ನೂ ಜಾಹೀರ ಮಾಡಿಬಿಟ್ಟರು. ರಹಸ್ಯದಲ್ಲಿ ಕೊಟ್ಟಆಶ್ವಾಸನವನ್ನು ಇಂತು ಬೈಲಿಗೆಳೆದದ್ದಕ್ಕಾಗಿ ನಿಜಾಮ ಸಾಹೇಬರು ವಿಷಾದ ಪ್ರದರ್ಶಿಸಿದ್ದಾರೆ. ಈ ಸಂಘವು ನಿಜಾಮ ಸಾಹೇಬರನ್ನೂ ಯಾವ ರೀತಿ ಅಲಕ್ಷಿಸುತಿದೆಂಬುದು ಇದರಿಂದ ಗೊತ್ತಾಗುವದು. ಇಂಥ ಪ್ರತಿಗಾಮಿ ಸುಧಾರಣೆಗಳನ್ನು ಮುಸಲ್ಮಾನೇತರರು ಅದೆಂತು ಸ್ವೀಕರಿಸಬೇಕು? ಅದುದರಿಂದ ನಿಜಾಮ ಸಾಹೇಬರು ಇಂತಹ ಪ್ರತಿಗಾಮಿ ಸ್ವರೂಪದ ಸುಧಾರಣೆಗಳನ್ನು ಜಾರಿಯಲ್ಲಿ ತರಬಯಸದೆ ಘಟನೆಯನ್ನು ರಚಿಸಿಕೊಳ್ಳಲು ಪ್ರಜಾ ಪ್ರಮುಖರ ಸಮಿತಿಯನ್ನು ನೇಮಿಸಿ ಪ್ರಜಾನುರಾಗಕ್ಕೆ ಪಾತ್ರರಾಗಬೇಕೆಂದು ಕೇಳಿಕೊಳ್ಳುತ್ತೇವೆ.

ದಲಿತ ವರ್ಗದ ಸತ್ಯಾಗ್ರಹ (?)

ಡಾ. ಅಂಬೇಡಕರರ ಅನುಯಾಯಿಗಳಾದ ದಲಿತ ವರ್ಗದವರು ಕಾಂಗ್ರೆಸ ಸರಕಾರಗಳ ವಿರುದ್ಧ ನಿರೋಧನವನ್ನು ಪ್ರಾರಂಭಿಸಿರುವರು. ಬ್ರಿಟಿಶ್ ಮಂತ್ರಿತ್ರಯರು ತಮಗೆ ಮಾಡಿದ ಅನ್ಯಾಯದ ಪರಿಮಾರ್ಜನೆಗಾಗಿ ಈ ದಲಿತ ವರ್ಗದವರು ಮುಂಬಯಿ ಮದ್ರಾಸ, ಯುಕ್ತಪ್ರಾಂತ ಮಧ್ಯಪ್ರಾಂತ ಮೊದಲಾದ ಕಾಂಗ್ರೆಸ ಮಂತ್ರಿಮಂಡಲಗಳಿದ್ದ ಪ್ರಾಂತಗಳ ಶಾಸನಸಭೆಗಳ ಮುಂದೆ ಸತ್ಯಾಗ್ರಹ (?)ವನ್ನು ಹೂಡಿರುವರು. ಇದಕ್ಕಾಗಿ ನೂರಾರು ಜನರು ಸೆರೆಮನೆ ಸೇರಿರುವರು. ಕಾಂಗ್ರೆಸ್ಸು ದಲಿತ ವರ್ಗದವರ ಸಲುವಾಗಿ ಏನೂ ಮಾಡಿಲ್ಲೆಂದು ಮುಂತಾಗಿ ಅವರ ಹೇಳಿಕೆ ಚುನಾವಣೆಗಳಲ್ಲಿ ಕಾಂಗ್ರೆಸ ಹರಿಜನರು ಅರಿಸಿ ಬಂದದ್ದು ಕೇವಲ ಹಿಂದುಗಳ ಮತದಿಂದಲೆ. ಪ್ರಾಥಮಿಕ ಚುನಾವಣೆಗಳಲ್ಲಿ ಅಂಬೇಡಕರ ಪಕ್ಷದವರೆ ಬಹುಸಂಖ್ಯಾಕರಾಗಿ ಅರಿಸಿ ಬಂದಿದ್ದರೆಂದೂ ಅವರು ಹೇಳುತಿರುವರು. ನಿರ್ವಿಕಾರ ಮತ್ತು ನಿಷ್ಪಕ್ಷಪಾತ ದೃಷ್ಟಿಯಿಂದ ಇವೆಲ್ಲ ಅರೋಪಗಳನ್ನು ವಿಚಾರಿಸಿದ್ದಾದರೆ ಇವೆಲ್ಲ ನಿರಾಧಾರವೆಂದು ಕಂಡು ಬರದಿರಲಾರವು. ಬ್ರಿಟಿಶರು ಅನ್ಯಾಯ ಮಾಡಿದ್ದರೆ ಕಾಂಗ್ರೆಸ ಸರಕಾರಗಳ ವಿರುದ್ಧ ಸತ್ಯಾಗ್ರಹಹೂಡುವುದು ಸತ್ಯಾಗ್ರಹವೇ ಅಲ್ಲ, ಇದೊಂದು ಬಗೆಯ ದುರಾಗ್ರಹ. ಮುಸಲ್ಮಾನ ಪ್ರಾಂತಗಳ ವಿರುದ್ಧ ತಾವು ಸತ್ಯಾಗ್ರಹ ಹೂಡುವುದಿಲ್ಲವಂತೆ! ಅದೇಕೆ!! ಅವರು ಕ್ರೂರ ದಬ್ಬಾಳಿಕೆ ನಡೆಸಬಹುದೆಂಬ ಬೆದರಿಕೆಯೇ? ಇನ್ನು ಹರಿಜನ ಉದ್ಧಾರ ಕಾರ್ಯವೇನಾದರೂ ಸಾಧ್ಯವಾಗಿದ್ದರೆ ಅದು ಕಾಂಗ್ರೆಸ್ಸಿನ ಮತ್ತು ಮಹಾತ್ಮಾ ಗಾಂಧಿಯವರ ಸತತ ಪ್ರೋತ್ಸಾಹ ಮತ್ತು ಪ್ರಯತ್ನದಿಂದ ಎಂಬುದು ನಿರ್ವಿವಾದ. ಕಾಂಗ್ರೆಸ್ಸು ತನ್ನ ವಿಧಾಯಕ ಕಾರ್ಯಕ್ರಮದಲ್ಲಿ ಅಸ್ಪೃಶ್ಯತಾ ನಿವಾರಣೆಗೆ ಮಹತ್ವ ಸ್ಥಾನ ಕೊಟ್ಟಿರದಿದ್ದರೆ ಅಸ್ಪೃಶ್ಯೋದ್ಧಾರ ಚಳವಳಿ ಈಗಿನಷ್ಟು ಎಂದೂ ಮುಂದೊರೆಯುತಿದ್ದಿಲ್ಲ. ಈ ಮಾತನ್ನು ಎಲ್ಲರೂ ಒಪ್ಪತಕ್ಕದ್ದಾಗಿದೆ. ಅಂಬೇಡಕರ ಪ್ರಭೃತಿಗಳೂ ಇದನ್ನು ಅಲ್ಲಗಳೆಯಲಾರರು. ಇನ್ನು ಚುನಾವಣೆಯಲ್ಲಿ ತಮಗೆ ಹರಿಜನರ ಬೆಂಬಲ ಸಿಕ್ಕಿದೆಂಬ ಶಿವರಾಜರ ಹೇಳಿಕೆಯನ್ನು ಶ್ರೀ ಪಿಳ್ಳೆಯವರು ಅಂಕಿ ಸಂಖ್ಯೆಗಳನ್ನು ಕೊಟ್ಟು ಖಂಡಿಸಿದ್ದಾರೆ. ಮದ್ರಾಸಿನಲ್ಲಿಯ ೩೦ ಸ್ಥಳಗಳಲ್ಲಿ ೨೭ ಸ್ಥಳಗಳಿಗೆ ಕಾಂಗ್ರೆಸ್ ಹರಿಜನರು ಕೇವಲ ಹರಿಜನರ ಮತಗಳಿಂದಲೆ ಅರಿಸಿ ಬಂದಿರುವರೆಂಬದನ್ನು ಪಿಳ್ಳೆಯವರು ಸಾಧಾರ ಸಿದ್ಧಮಾಡಿರುವರು. ಸಾಮಾಜಿಕ ಸುಧಾರಣೆಗಳು ಒಂದೇ ದಿನದಲ್ಲಿ ಸಾಧ್ಯವಾಗಲಾರದೆಂಬುದನ್ನು ಮನದಂದು ಅಂಬೇಡಕರರು ತಾಳ್ಮೆಯಿಂದ ಮುಂದರಿಯಬೇಕು.

ಹಿಂದುಸ್ತಾನದ ಸಮಸ್ಯೆ

ಹಿಂದುಸ್ತಾನದ ಸಮಸ್ಯೆಯನ್ನು ಕುರಿತು ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಕೂಲಂಕಷ ಚರ್ಚೆ ನಡೆಯಿತು. ಬ್ರಿಟಿಶ ರಾಯಭಾರದವರು ಅತ್ಮನಿವೇದನ ಮಾಡಿಕೊಂಡರು, ಟೀಕೆಗಳಿಗೆ ಉತ್ತರ ಕೊಟ್ಟರು. ಅವರೊಪ್ಪಿಸಿದ ವರದಿ ಉದ್ಬೋಧಕವಾಗಿದೆ. ಕಾಂಗ್ರೆಸ ಮತ್ತು ಲೀಗಗಳ ಸ್ವರೂಪವನ್ನು ಕುರಿತು ಸರ್ ಸ್ಟಾಫರ್ಡ ಕ್ರಿಪ್ಸರು ಹೇಳಿದ್ದು ಮನನೀಯವಾಗಿದೆ. ಕಾಂಗ್ರೆಸ್ಸು ಜಾತೀಯ ಸಂಸ್ಥೆಯಲ್ಲೆಂದೂ ಅವರು ನಿಃಸಂದೇಹವಾಗಿ ಹೇಳಿದರು. ಮುಸ್ಲಿಂರ ಪ್ರತಿನಿಧಿಗಳನ್ನಾರಿಸುವದು ಲೀಗದ ಗುತ್ತಿಗೆಯಲ್ಲೆಂಬುದನ್ನು ಅವರಿಗೆ ಸ್ಪಷ್ಟವಾಗಿ ಹೇಳಿದುದನ್ನು ಸರ್ ಸಾಹೇಬರು ಹೇಳಿದರು. ನಡುಗಾಲ ಸರಕಾರ ರಚನೆಯಾಗದಿರುವದಕ್ಕೆ ಜಿನ್ನಾ ಸಾಹೇಬರ ಹಟಮಾರಿತನವೇ ಕಾರಣವೆಂದು ಭಾರತ ಮಂತ್ರಿಗಳು ಲಾರ್ಡ್ಸ ಸಭೆಯಲ್ಲಿ ಸ್ಪಷ್ಟಪಡಿಸಿದರು. ಆದರೆ ಇಷ್ಟೆಲ್ಲ ಹೇಳುವ ಬ್ರಿಟಿಶ ಮುತ್ಸದ್ದಿಗಳು ಜಿನ್ನಾ ಸಾಹೇಬರ ಹಟಮಾರಿತನಕ್ಕೆ ಬಲಿಬೀಳದೆ ತಮ್ಮ ಯೋಜನೆಯನ್ನು ಹಾಗೆಯೆ ಮುಂದೆ ಸಾಗಿಸಿದ್ದರೆ ಈಗಿನ ಪರಿಸ್ಥಿತಿಯು ಬರುತಿರಲಿಲ್ಲ. ನಡುಗಾಲ ಸರಕಾರ ರಚನೆಯಾಗಿ ಬಿಡುತಿತ್ತು. ಆದರೆ ಬ್ರಿಟಿಶರು ಅಷ್ಟೊಂದು ಧೈರ್ಯದಿಂದ ಮುಂದಡಿಯಿಡದ್ದರಿಂದ ಅವರ ಮಾತಿನಲ್ಲಿ ಹಿಂದೀ ಜನತೆಗೆ ವಿಶ್ವಾಸವಿಲ್ಲದಂತಾಗಿದೆ. ಬ್ರಿಟಿಶ ಸರಕಾರದವರು ಇದೆಲ್ಲವನ್ನು ಕೇವಲ ಫಾರ್ಸಿನಂತೆ ನಟಿಸಿ ಮರಳಿ ಹೋಗಿ ಹಿಂದುಸ್ತಾನವನ್ನು ಕೇವಲ ಅಧಿಕಾರಿಗಳ ಅಡಳಿತಕ್ಕೊಪ್ಪಿಸಿಬಿಟ್ಟರೆಂದು ಜನತೆ ಅಭಿಪ್ರಾಯ ಪಟ್ಟರೆ ಸರಕಾರ ಸಮಂಜಸ ಉತ್ತರ ಕೊಡಲರಿಯದು. ಅಧಿಕಾರ ಬಿಟ್ಟುಗೊಡುವ ಅಸೆಯೂ ಬ್ರಿಟಿಶರಿಗಿಲ್ಲೆಂದು ಅರೋಪಿಸಿದರೂ ಸರಕಾರ ಉತ್ತರ ಕೊಡಲಾರದು. ಅದೇನೇ ಇದ್ದರೂ ಇನ್ನು ಮುಂದಾದರೂ ಬ್ರಿಟಿಶ ಸರಕಾರದವರು ಧೈರ್ಯದಿಂದ ಮುಂದಡಿಯಿಟ್ಟರೆ ಹಿಂದುಸ್ತಾನ ಸಮಸ್ಯೆ ತಂತಾನೆ ಬಗೆಹರಿಯಬಲ್ಲದು.

ಘಟನಾ ಸಮಿತಿ

ಬ್ರಿಟಿಶ್ ಹಿಂದುಸ್ತಾನದಿಂದ ಅಗತಕ್ಕ ಘಟನಾ ಸಮಿತಿಯ ಚುನಾವಣೆ ಇದೀಗ ಮುಗಿದಿದೆ. ಇದರ ವಿವರಗಳನ್ನೂ ಅರಿಸಿಬಂದವರ ಹೆಸರುಗಳನ್ನೂ ಇದೇ ಸಂಚಿಕೆಯಲ್ಲಿ ಬೇರೆ ಕಡೆ ಕೊಟ್ಟದ್ದೇವೆ. ಅರಿಸಿ ಬಂದವರ ಅಂಕಿಗಳನ್ನು ನೋಡಿದರೆ ಕಾಂಗ್ರೆಸ್ಸ ಪಕ್ಷಕ್ಕೆ ನಿಚ್ಚಳ ಬಹುಮತ ದೊರಕಿದೆಂಬುದು ಗೊತ್ತಾಗುವದು ೨೯೫ ಸ್ಥಳಗಳಲ್ಲಿ ೨೦೫ ಸ್ಥಳಗಳು ಕಾಂಗ್ರೆಸ್ಸಿಗೆ ಸಿಕ್ಕಿವೆ. ಬ ಗುಂಪಿನಲ್ಲಿ ಲೀಗದ ಬಹುಮತವಾಗಿದ್ದರೆ ಕ ಗುಂಪಿನಲ್ಲಿ ಲೀಗ ಮತ್ತು ಲೀಗೇತರರ ಸಮಬಲವಾಗಿದೆ. ಇನ್ನು ಸಂಸ್ಥಾನ ಪ್ರತಿನಿಧಿಗಳ ಅಯ್ಕೆ ನಂತರ ಘಟನಾ ಸಮಿತಿಯ ಕಾರ್ಯ ಪ್ರಾರಂಭವಾಗಬಹುದು. ಕಾಂಗ್ರೆಸ್ಸು ಘಟನಾ ಸಮಿತಿಯಲ್ಲಿ ಸೇರಬಯಸಿದಾಗ ಯಾವ ಉದ್ದೇಶವನ್ನಿಟ್ಟುಕೊಂಡಿದೆಂಬದನ್ನು ಕಾಂಗ್ರೆಸ್ ವರಿಷ್ಠರು ಅನೇಕ ಸಲ ಹೇಳಿದ್ದಾರೆ. ಘಟನಾ ಸಮಿತಿಯು ಸಾರ್ವಭೌಮ ಸ್ವರೂಪದ್ದೆಂದು ಕಾಂಗ್ರೆಸ್ಸು ಅಭಿಪ್ರಾಯಪಟ್ಟಿದೆ. ಪ್ರಾಂತಗಳ ಗುಂಪೀಕರಣದ ಪ್ರಶ್ನೆ ಇಲ್ಲವೆ ಬ್ರಿಟಿಶ್ ಮಂತ್ರಿತ್ರಯರ ಯೋಜನೆಯನ್ನು ಅದು ಬದಲಿಸಬಲ್ಲದೆಂದೂ ಕಾಂಗ್ರೆಸ್ಸಿನ ಅಭಿಪ್ರಾಯ. ಈ ಅಂಶದ ಸಂಬಂಧದಲ್ಲಿ ಭಾರತ ಮಂತ್ರಿಗಳು ನೇರವಾದ ಉತ್ತರ ಕೊಡಬಯಸದೆ ಸಂದಿಗ್ಧ ಉತ್ತರ ಕೊಟ್ಟರು. ಅದರಿಂದಲೇ ಮುಂದಿನ ಕಾರ್ಯ ಕೆಟ್ಟಿತು. ಘಟನಾ ಸಮಿತಿಯ ಸೂತ್ರಗಳನ್ನು ಕೂಡ ಸರಕಾರದವರು ಸಂಪೂರ್ಣವಾಗಿ ಜನತೆಯ ಕೈಯಲ್ಲಿ ಕೊಡಬಯಸದೆ ತಮ್ಮ ಕೈಯಲ್ಲಿಟ್ಟುಕೊಳ್ಳಬಯಸಿದೆಂದೂ ಕಾಂಗ್ರೆಸ್ಸಿಗರು ಸಂಶಯಗೊಂಡರು. ಅಂತೆಯೇ ಘಟನಾ ಸಮಿತಿ ಸ್ವಾತಂತ್ರ್ಯವನ್ನು ತರಬಲ್ಲದೆಂಬ ಭ್ರಮೆ ಯಾವ ಕಾಂಗ್ರೆಸ್ಸಿಗನಿಗೂ ಇಲ್ಲ. ಈ ಸಮಿತಿಯ ಮುಖಾಂತರ ಹಿಂದುಸ್ತಾನದ ಘಟನೆ ಸಿದ್ಧವಾದರೆ ಸಾಕೆಂದು ಕಾಂಗ್ರೆಸ್ಸು ಉದ್ದೇಶವನ್ನಿಟ್ಟುಕೊಂಡಿದೆ. ಇದಿಷ್ಟು ಸಾಧ್ಯವಾದರೆ ಕಾಂಗ್ರೆಸ್ಸು ಘಟನಾ ಸಮಿತಿಯಲ್ಲಿ ಸೇರಿದ್ದು ಸಾರ್ಥಕವಾಗಬಹುದು.

ಹಿಂದುಸ್ತಾನ ಘಟನಾ ಸಮಿತಿ

ಬೇರೆ ಬೇರೆ ಪ್ರಾಂತಗಳ ಪ್ರತಿನಿಧಿಗಳು

ಕಾಂಗ್ರೆಸಿಗೆ ನಿಚ್ಚಳ ಬಹುಮತ

ಘಟನಾ ಸಮಿತಿಯ ಚುನಾವಣೆಗಳು ೨೪ ನೇ ತಾರೀಖಿಗೆ ಮುಗಿದು ಎಲ್ಲ ಪ್ರಾಂತಗಳ ಹೆಸರುಗಳು ಪ್ರಸಿದ್ಧವಾಗಿವೆ. ಇನ್ನು ಸಂಸ್ಥಾನ ಪ್ರತಿನಿಧಿಗಳ ಆಯ್ಕೆಯುಷ್ಟು ಆಗುವುದುಳಿದಿದೆ. ಹಿಂದೀ ಸಂಸ್ಥಾನ ಪ್ರತಿನಿಧಿಗಳನ್ನೊಳಗೊಂಡು ಈ ಸಮಿತಿಯಲ್ಲಿ ೩೮೯ ಸ್ಥಳಗಳಿದ್ದು ಕಾಂಗ್ರೆಸ್ಸು ೨೦೮ ಸ್ಥಳಗಳನ್ನು ಸಂಪಾದಿಸಿದೆ. ಅಂದರೆ ನಿಚ್ಚಳ ಬಹುಮತ ಕಾಂಗ್ರೆಸ್ಸಿಗೆ ದೊರೆತಿದೆ. ಮುಸ್ಲಿಂ ಲೀಗಿಗೆ ೭೩, ಸ್ವತಂತ್ರ (ಸಾಮಾನ್ಯ) ೮, ಸ್ವತಂತ್ರ (ಮುಸಲ್ಮಾನ) ೩. ಶೇಖರ ೪ ಸ್ಥಳಗಳ ಚುನಾವಣೆ ಮತ್ತು ಸಂಸ್ಥಾನಗಳ ೯೩ ಸ್ಥಳಗಳ ಚುನಾವಣೆಯಿನ್ನೂ ಆಗಲಿದೆ.

ಬ ಗುಂಪಿನಲ್ಲಿ ಲೀಗಿನ ೧೯ ಪ್ರತಿನಿಧಿಗಳು ಆರಿಸಿ ಬಂದು ಅದಕ್ಕೆ ನಿಚ್ಚಳ ಬಹುಮತ ಸಿಕ್ಕಿದೆ. ಕಾಂಗ್ರೆಸ್ಸಿಗೆ ೧೧ ಸ್ಥಳ ಸಿಕ್ಕಿದ್ದು ಇನ್ನುಳಿದ ಎರಡು ಸ್ಥಳಗಳು ಸಮ್ಮಿಶ್ರ ಪಕ್ಷದ ಒಬ್ಬ ಸದಸ್ಯನಿಗೂ ಬಲುಚಿಸ್ತಾನದ ಸದಸ್ಯನಿಗೂ ದೊರೆತಿವೆ. ಕ ಗುಂಪಿನಲ್ಲಿ ಲೀಗಿನ ೩೫ ಸದಸ್ಯರು ಕಾಂಗ್ರೆಸ್ಸಿನ ೩೨ ಸದಸ್ಯರಿದ್ದು ಮೂವರು ಸ್ವತಂತ್ರರಿರುವರು. ಅದರ ಭವಿತವ್ಯ ಈ ಮೂವರನ್ನೆ ಅವಲಂಬಿಸುವದು. ಇನ್ನು ಅ ಗುಂಪಿನಲ್ಲಿ ೧೬೫ ಕಾಂಗ್ರೆಸ್ಸಿಗರೂ ೧೯ ಲೀಗಿನವರೂ ೬ ಸ್ವತಂತ್ರರೂ ಇರುವರು.

ಘಟನಾ ಸಮಿತಿಯಲ್ಲಿ ಘಟನಾ ಶಾಸ್ತ್ರ ನಿಪುಣರೂ ಕಾಯದೆ ಪಂಡಿತರೂ ಇದ್ದು ಮಹಾತ್ಮಾ ಗಾಂಧಿಯವರು ಸಲಹೆಗಾರರೆಂದು ಹೊರಗುಳಿದಿರುವರು. ಸಪ್ಟೆಂಬರದಲ್ಲಿ ಅಧಿವೇಶನ ಪ್ರಾರಂಭವಾಗಬಹುದು. ಆಯಾ ಪ್ರಾಂತಗಳಿಂದ ಘಟನಾ ಸಮಿತಿಗೆ ಆರಿಸಿ ಬಂದವರ ಹೆಸರುಗಳನ್ನು ಪ್ರಾಂತವಾರ ಕೆಳಗೆ ಕೊಡಲಾಗಿದೆ.

ಅ ಗುಂಪು

ಮುಂಬಯಿ (೨೧)

ಕಾಂಗ್ರೆಸ್ಸಿಗೆ ಎಲ್ಲ ಸ್ಥಳ ದೊರೆತಿವೆ.

ಸಾಮಾನ್ಯ (೧೯)

೧) ಕೆ ಎಂ ಮುನಶಿ ೨) ಶಂಕರರಾವ ದೇವ ೩ ಕನ್ನಯ್ಯಾಲಾಲ ದೇಸಾಯಿ ೪) ಆರ್ ಆರ್ ದಿವಾಕರ ೫) ರಾ. ಆಲ್ಬನ್ ಡಿಸೌಜಾ ೬) ಎಸ್ ವಿ ಗಾಡಗೀಳ ೭) ಬಿ ಎಂ ಗುಪ್ತೆ ೮) ಕೆ ಎಂ ಜೇಧೆ ೯) ಬಿ ಜಿ ಖೇರ ೧೦) ಎಸ್ ಎಸ್ ಮಸಾನಿ ೧೧) ಶ್ರೀಮತಿ ಹಂಸಾ ಮೇಹ್ತಾ ೧೨) ಜೆ ಎಂ ನಲವಡೆ ೧೩) ಎಸ್ ನಿಜಲಿಂಗಪ್ಪ ೧೪) ಸರದಾರ ವಲ್ಲಭಭಾಯಿ ಪಟೇಲ ೧೫) ಎಸ್ ಕೆ ಪಾಟೀಲ ೧೬) ಎಂ ಆರ್ ಮಸಾನಿ ೧೭) ಎಚ್ ವಿ ಪಾಟ್ಸಕರ ೧೮] ಶಾಂತಿಲಾಲ ಶಹಾ ೧೯) ಖಂಡೂಭಾಯಿ ದೇಸಾಯಿ

ಮುಸಲ್ಮಾನ (೨)

೧) ಐ ಐ ಚುಂದ್ರಿಗಾರ ೨) ಅಬ್ದುಲಖಾದರ ಶೇಖ

ಮದ್ರಾಸ (೪೯)

ಕಾಂಗ್ರೆಸ್ಸಿಗೆ ಎಲ್ಲ ಸ್ಥಳ ದೊರೆತಿವೆ.

ಸಾಮಾನ್ಯ (೪೫)

೧) ರಾಜಗೋಪಾಳಾಚಾರ್ಯ ೨) ಎನ್ ಗೋಪಾಲಸ್ವಾಮಿ ಅಯ್ಯಂಗಾರ ೩) ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ ೪) ಡಾ. ಪಟ್ಟಾಭಿ ಸೀತಾರಾಮಯ್ಯ ೫) ಕೆ ಸಂತಾನಂ ೬) ಬಿ ಶಿವರಾವ ೭) ಶ್ರೀನಿವಾಸ ಮಲ್ಯ ೮) ಶ್ರೀಮತಿ ಅಮ್ಮುಸ್ವಾಮಿನಾಥನ್ ೯) ಎಸ್ ಎಚ್ ಪ್ರೀಟರ ೧೦) ಓ ವಿ ಅಲಗೇಶನ್ ೧೧) ಚಂದ್ರಮೌಲಿ ೧೨) ಜೆರೋನ ಡಿಸೌಜಾ ೧೩) ಬಿ ಗೋಪಾಳರೆಡ್ಡಿ ೧೪) ಡಿ ಗೋವಿಂದದಾಸ ೧೫) ಪಿ ಕಕ್ಕನ್ ೧೬) ಕೆ ಕಾಮರಾಜನಾಡರ ೧೭) ಎಲ್ ಕೃಷ್ಣಸ್ವಾಮಿ ಭಾರತಿ ೧೮) ಪಿ ಕುನ್ಹಿರಾಮನ್ ೧೯) ಕೆ ಮಾಧವ ಮೆನನ್ ೨೦) ಪಿ ಆಯ ಮುನಿಸ್ವಾಮಿ ಪಿಳ್ಳೆ ೨೧) ಕುಮಾರ ರಾಜಾ ಸರ್ ಮುಥಿಯಾ ಚೆಟ್ಟಿಯಾರ ೨೨) ವಿ ನಾಡಿಮುಥು ಪಿಳ್ಳೆ ೨೩) ಎಸ್ ನಾಗಪ್ಪ ೨೪) ಪಿ. ಎಲ್ ನರಸಿಂಹರಾಜು ೨೫) ಸಿ ಪರುಮಲಸ್ವಾಮಿ ರೆಡ್ಡಿ ೨೬) ಟಿ ಪ್ರಕಾಶಂ ೨೭) ಟಿ ಎ ರಾಮಲಿಂಗಂ ಚೆಟ್ಟಿಯಾರ ೨೮) ರಾಮನಾಥ ಗೋಯೆಂಕಾ ೨೯) ಓ ಪಿ ರಾಮಸ್ವಾಮಿ ರೆಡ್ಡಿ ೩೦) ಪ್ರೊ ಎನ್ ರಂಗಾ ೩೧) ಎನ್ ಸಂಜೀವರೆಡ್ಡಿ ೩೨) ಎಚ್ ಸೀತಾರಾಮರೆಡ್ಡಿ ೩೩) ಎಂ ಸಿ ವೀರಬಾಹು ೩೪) ಕಾಲಾ ವೆಂಕಟರಾವ ೩೫) ಡಾ ಪಿ ಸುಬ್ಬರಾಯನ್ ೩೬) ಬೊಬ್ಬಲಿ ರಾಜರು ೩೭) ಡಾ ವಿ ಸುಬ್ರಹ್ಮಣ್ಯಂ ೩೮) ಸಿ ಸುಬ್ರಹ್ಮಣ್ಯಂ ೩೯) ಪಿ ಎಂ ವೇಲಾಯುಧಸಾಣ ೪೦) ವಿ ಸಿ ಕೇಶವರಾವ ೪೧) ಡಾ ಟಿ ಜೆ ಎಂ ವಿಲ್ಸನ್ ೪೨) ಟಿ ಟಿ ಕೃಷ್ಣಮಾಚಾರಿ ೪೩) ಶ್ರೀಮತಿ ದುರ್ಗಾಬಾಯಿ ೪೪) ಎಂ ಅನಂತಶಯನಂ ಅಯ್ಯಂಗಾರ ೪೫) ಶ್ರೀಮತಿ ದಾಕ್ಷಾಯಣಿ ವೇಲಾಯುಧಂ

ಮುಸಲ್ಮಾನ (೪)

೧) ಅಬ್ದುಲ್ ಸತ್ತಾರ ಹಾಜಿ ಇಸ್ತಾಕಸೇಟ ಹಾಜಿ ೨) ಕೆಟಿ ಎಂ ಅಹಮ್ಮದ ಇಬ್ರಾಹಿಮಸಾಹೇಬ ೩) ಮಹಮ್ಮದ ಅಲ್ಲಿ ಬೇಗ ೪) ಬಿ. ಪೋಕರ.

ಸಂಯುಕ್ತಪ್ರಾಂತ (೫೫)

ಸಾಮಾನ್ಯ (೪೭)

೧) ಪಂಡಿತ ಜವಾಹರಲಾಲ ನೆಹರು ೨) ಬಾಬೂ ಪುರುಷೋತ್ತಮದಾಸ ಟಂಡನ್ ೩) ಪಂಡಿತ ಗೋವಿಂದ ವಲ್ಲಭಪಂತ ೪ ಸರ್ ಎಸ್ ರಾಧಾಕೃಷ್ಣನ್ ೫) ಆಚಾರ್ಯ ಜೆ ಬಿ ಕೃಪಲಾನಿ ೬ ಪಂ. ಶ್ರೀಕೃಷ್ಣದತ್ತ ಪಾಲೀವಾಲ ೭) ಸರದಾರ ಜೋಗೇಂದ್ರಸಿಂಗ ೮) ಧರ್ಮದಾಸ ೯) ಶ್ರೀಮತಿ ಸುಚೇತಾ ಕೃಪಲಾನಿ ೧೦) ವಿಜಯಲಕ್ಷ್ಮಿ ಪಂಡಿತ ೧೧) ಪೂರ್ಣಿಮಾ ಬ್ಯಾನರ್ಜಿ ೧೨) ಕಮಲಾ ಚೌಧರಿ ೧೩) ದಯಾಲದಾಸ ಭಗತ ೧೪) ಧರ್ಮಪ್ರಕಾಶ ೧೫) ಮಸೂರಿಯುದಾಸ ೧೬) ಸುಂದರಲಾಲ ೧೭) ಭಗವಾನದಾಸ ೧೮) ಪ್ರಾಗೀಲಾಲ ೧೯) ದಾಮೋದರ ಸ್ವರೂಪ ೨೦) ಗೋವಿಂದ ಮಾಲವಿಯಾ ೨೧) ಶ್ರೀಪ್ರಕಾಶ ೨೨) ಬಾಳಕೃಷ್ಣ ಶರ್ಮ ೨೩) ಮೋಹನಲಾಲ ಸಕ್ಸೇನಾ ೨೪) ರಾಮಚಂದ್ರ ಗುಪ್ತ ೨೫) ಮಹೇಶ್ವರ ದಯಾಳ ೨೬) ಹರಗೋವಿಂದ ಪಂತ ೨೭) ಆಚಾರ್ಯ ಜುಗಲ್ ಕಿಶೋರ ೨೮) ಹರಿಹರನಾಥ ಶಾಸ್ತ್ರಿ ೨೯) ಶಿವನಲಾಲ ಸಕ್ಸೇನಾ ೩೦) ಪ್ರೊ ಕೈಲಾಸನಾಥ ಕಾಟ್ಜು ೩೧) ಅಜಿತ್ ಪ್ರಸಾದ ಜೈನ ೩೨) ವಿಶ್ವಂಭರ ದಯಾಳ ತ್ರಿಪಾಠಿ ೩೩) ಫಿರೋಜ ಗಾಂಧಿ ೩೪) ಕಮಲಾಪತಿ ತಿವಾರಿ ೩೫) ಆರ್ ವಿ ಧುಳೇಕರ ೩೬) ಅಲ್ಗುರಾಯಿ ಶಾಸ್ತ್ರಿ ೩೭) ಫೂಲಸಿಂಗ ೩೮) ವೆಂಕಟೇಶ ನಾರಾಯಣ ತಿವಾರಿ ೩೯) ಗೋಪಿನಾಥ ಶ್ರೀವಾಸ್ತವ ೪೦) ಗೋಪಾಳ ನರೇ ೪೧) ಬನ್ಸೀಧರ ಮಿಶ್ರ ೪೨) ಖುರಶೇ ದಲಾಲ ೪೩) ಜಸಪತರಾಯ ಕಪೂರ ೪೪) ಪಂಡಿತ ಎಚ್ ಎನ್ ಕುಂಜರು ೪೫) ರಾಜಾ ಜಗನ್ನಾಥ ಬಕ್ಷಸಿಂಗ ೪೬) ಸರ್ ಜ್ವಾಲಾಪ್ರಸಾದ ಶ್ರೀವಾಸ್ತವ ೪೭) ಸರ್ ಪದ್ಮಪ್ರತ ಸಿಂಘಾಣಿ (ಇವರಲ್ಲಿ ೪೪ ಕಾಂಗ್ರೆಸ ಪ್ರತಿನಿಧಿಗಳಿದ್ದು ಕೊನೆಯ ಮೂವರು ಸ್ವತಂತ್ರರೆನಿಂತು ಆರಿಸಿಬಂದಿರುವರು.

ಮುಸಲ್ಮಾನ (೮)

೧) ಚೌಧರಿ ಖಾಲಿ ಖುಜಮಾನ ೨) ನವಾಬ ಮಹಮ್ಮದ ಇಸ್ಮಾಯಿಲಖಾನ ೩) ಮ ಕು ಅಮೀರ ಹೈದರಖಾನ ೪) ಬೇಗಮ ಅಜಾಜ ರಸೂಲ ೫) ಎಸ್ ಎಂ ರಿಝುವನುಲ್ಲಾ ೬) ಅಜೀಜ ಅಹಮ್ಮದ ೭) ಮೋಲಾನಾ ಹಜರತ ಮೋಹಾನಿ ಮತ್ತು ೮) ರಫಿ ಅಹಮ್ಮದ ಕಿದ್ವಾಯಿ (ಮೊದಲಿನ ೭ ಜನ ಲೀಗದವರಿದ್ದು ಕೊನೆಯವರು ಕಾಂಗ್ರೆಸ್ಸಿನವರು.)

ಮಧ್ಯಪ್ರಾಂತ (೧೭)

ಸಾಮಾನ್ಯ (೧೬)

೧) ರಾಜಕುಮಾರ ಅಮೃತಕೌರ ೨) ಪಂಡಿತ ರವಿಶಂಕರ ಶುಕ್ಲ ೩) ಠಾಕೂರ ಚೇದಿಲಾಲ ೪) ಗುರು ಅಗಮದಾಸ ೫) .ಬಿ ಎ ,ಮಂಡಲೋಯಿ ೬) ವಿ. ಆರ್. ಕಾಳಪ್ಪಾ ೭) ಶೇಟ ಗೋವಿಂದ ದಾಸ ೮) ಡಾ. ಸರ್ ಹರಿಸಿಂಗ ಗೌರ ೯) ಆರ್ ಕೆ ಸಿಧ್ವಾ ೧೦) ಎಚ್ ಜಿ ಖಾಂಡೇಕರ ೧೧) ಎಸ್ ಟಿ ಧರ್ಮಾಧಿಕಾರಿ ೧೨) ಎಚ್ ವಿ ಕಾಮತ ೧೩) ಸಿ ಈ ಗಿಬ್ಬನ್ಸ ೧೪) ಬ್ರಜಲಾಲ ಬಿಯಾಣಿ ೧೫) ಎಲ್ ಎಚ್ ಭಾಟಕರ ೧೬) ಡಾ. ಪಂಜಾಬರಾವ ದೇಶಮುಖ.

ಮುಸಲ್ಮಾನ (೧) ೧ ಕರೀಮುದ್ದೀನ (ಮುಸ್ಲಿಂ ಲೀಗ)

ಓಡಿಸಾ (೯)

ಸಾಮಾನ್ಯ ೯

೧) ಹರಿಕೃಷ್ಣ ಮೆಹತಾಬ ೨) ಬೋಧಾರಾಮ ದುಬೆ ೩) ರಾಜಕೃಷ್ಣ ಬೋಸ ೪) ಶಂತನು ಕುಮಾರ ದಾಸ ೫) ಲಕ್ಷ್ಮೀನಾರಾಯಣ ಸಾಹು ೬) ವಿಶ್ವನಾಥ ದಾಸ ೭) ಭುವನಾನಂದ ದಾಸ ೮) ನಂದಕಿಶೋರದಾಸ ೯) ಶ್ರೀಮತಿ ಮಾಲತಿ ಚೌಧರಿ.

ಬಿಹಾರ (೩೬)

ಸಾಮಾನ್ಯ ೩೧

೧) ಬಾಬುರಾಜೇಂದ್ರ ಪ್ರಸಾದ ೨) ಭಗವತ ಪ್ರಸಾದ ೩) ಅನುಗ್ರಹ ನಾರಾಯಣಸಿಂಹ ೪) ಡಾ. ರಘುನಂದನ ಪ್ರಸಾದ ೫) ಜಗಜೀವನರಾಮ ೬) ಫುಲನ:ಪ್ರಸಾದ ವರ್ಮಾ ೭) ಮಹೇಶಪ್ರಸಾದ ಸಿಂಹ ೮) ಸಾರಂಗಧರ ಸಿಂಗ ೯) ರಾಮೇಶ್ವರ ಪ್ರಸಾದ ಸಿಂಹ ೧೦) ದೇವೇಂದ್ರನಾಥ ಸಾಮಂತ ೧೧) ಅಮಿಯಾಕುಮಾರ ಘೋಷ ೧೨) ಸತ್ಯನಾರಾಯಣಸಿಂಹ ೧೩) ಕಮಲೇಶ್ವರಿ ಪ್ರಸಾದ ಯಾದವ ೧೪) ದೀಪನಾರಾಯಣಸಿಂಹ ೧೫) ರಾಮನಾರಾಯಣಸಿಂಹ ೧೬) ಗುಪ್ತನಾಥ ಸಿಂಗ ೧೭) ಗೌರೀಶ ನಾರಾಯಣಲಾಲ ೧೮) ಶ್ರೀಕೃಷ್ಣ ಸಿಂಹ ೧೯) ಭೋನಿಷ್ಠ ಸಹಾರಾ ೨೦) ವ್ರಜೇಶ್ವರ ಪ್ರಸಾದ ೨೧) ಚಂದ್ರಿಕಾರಾಮ ೨೨) ರಾಯಬಹಾದ್ದೂರ ನಾರಾಯಣ ಮೆಹತಾ ೨೩) ದೇಶಬಂಧು ಗುಪ್ತ ೨೪) ಬನಾರಸಿ ಪ್ರಸಾದ ೨೫) ಡಾ. ಪಿ ಕೆ ಸೇನ ೨೬) ಸರೋಜಿನಿ ನಾಯಡು ೨೭) ಡಾ. ಸಚ್ಚಿದಾನಂದ ಸಿಂಹ ೨೮) ಆದುವಂಸ ಸಹಾಯ ೨೯) ಮಹಾರಾಜಾಧಿರಾಜ ದರಭಂಗಾ ೩೦) ರಾಯಬಹಾದ್ದೂರ ಶ್ಯಾಮ ನಂದನ ಸಹಾಯ ೩೧) ಜಯಪಾಲಸಿಂಗ (ಕೊನೆಯ ಮೂವರು ಸ್ವತಂತ್ರರು)

ಮುಸಲ್ಮಾನ ೫

೧) ಹುಸೇನ ಇಮಾಮ ೨) ಲತೀಫರ ರಹಮಾನ ೩) ಪಾಜಮುಲ್ ಹುಸೇನ ೪) ಸಯ್ಯದ ಜಾಫರ ಇಮಾಮ ೫) ಮಹಮ್ಮದ ತಾಹೀರ (ಎಲ್ಲರೂ ಲೀಗ ಪ್ರತಿನಿಧಿಗಳು)

ಕೊಡಗು [೧]

೧) ಪೂನಚ್ಚಾ

'ಬ' ಗುಂಪು

ಪಂಜಾಬ ೨೮

ಸಾಮಾನ್ಯ ೮

೧) ರಾ. ಬ. ಚೌಧರಿ ಸುರಜಮಲ ೨) ಡಾ. ಗೋಪೀಚಂದ ಭಾರ್ಗವ ೩) ಪಂ. ಶ್ರೀರಾಮ ಶರ್ಮಾ ೪, ಸರ್ ಟೇಕಚಂದ ೫) ಸರದಾರ ಪೃಥ್ವೀಸಿಂಗ ಅಝಾದ ೬) ದಿವಾಣ ಚಮಣಲಾಲ ೭) ಮೆಹರಚಂದ ಖನ್ನಾ ೮) ಚೌಧರಿ ಹರಿಭಾಜರಾಮ. [ಪ್ರೊ. ಕೆ. ಟಿ. ಶಹಾ ಇವರ ಹೆಸರನ್ನು ಕಾಂಗ್ರೆಸ್ಸಿನವರು ಹಿಂತೆಗೆದುಕೊಂಡರು.

ಮುಸಲ್ಮಾನ ೧೬

೧] ಮಹಮ್ಮದಅಲ್ಲಿ ಜಿನ್ನಾ ೨] ಸರದಾರ ಅಬ್ದುಲರಾಬ ನಿಶತಾರ ೩] ಮಮದೋತ ನವಾಬ ೪] ಮಿಯಾ ಮಹಮ್ಮದ ಮಮತಾಜ ದೌಲತಾನಾ ೫] ಸರ್ ಫಿರೋಜಖಾನ ನೂನ ೬] ರಾಜಾ ಗಜನಫರ ಅಲ್ಲೀಖಾನ ೭] ಪ್ರೊ. ಅಬುಬಾಕಿ ಅಹಮ್ಮದ ಹಕೀಮ ೮] ಮಹಮ್ಮದ ಇಫ್ತಿಕರುದ್ದೀನ ೯] ಚೌಧರಿ ಮಹಮ್ಮದ ಹಸನ ೧೦] ಖಾ. ಬ. ಶೇಖ ಕರಮರಅಲ್ಲಿ ೧೧] ಬೇಗಮ ಶಹಾನವಾಜ ೧೨] ಗುಲಾಮ, ಭೀಕನಾರಂಗ ೧೩] ಖಾ. ಬ. ಚೌಧರಿ ನಾಝಿರ ಅಹಮ್ಮದಖಾನ ೧೪]ಡಾ. ಮಲಿಕ ಉಮರ ಹಯಾತ ೧೫] ಸಯ್ಯದ ಅಮಜಾದಅಲ್ಲಿ ೧೬] ನವಾಬ ಸರ್ ಮುಜಫರ ಅಲ್ಲೀಖಾನ ಕ್ವಿಜಲಬಾಶ. (ಇವರಲ್ಲಿ ಒಬ್ಬರು ಯೂನಿಯನಿಸ್ಟರು)

ಶೇಖರ ನಾಲ್ಕು ಸ್ಥಳಗಳಿಗೆ ಚುನಾವಣೆಯಾಗಿರುವದಿಲ್ಲ.

ಸರಹದ್ದ ೩

ಮುಸಲ್ಮಾನ ೩

೧] ಖಾನಅಬ್ದುಲ್ ಗಫರಖಾನ ೨] ಮೌಲಾನಾ ಅಬುಲ್ ಕಲಂ ಅಝಾದ ೩] ಸರದಾರ ಬಹಾದ್ದೂರ ಖಾನ (ಕೊನೆಯವರು ಮುಸ್ಲಿಂಲೀಗಿನವರು.)

ಸಿಂಧ ೪

ಸಾಮಾನ್ಯ ೧

೧] ಶ್ರೀ ಜಯರಾಮದಾಸ ದೌಲತರಾಮ.

ಮುಸಲ್ಮಾನ ೩

೧] ಎಂ. ಎಚ್. ಗಜದರ ೨] ಖಾ. ಬ. ಖುರೋ ೩] ಪೀರಜಾದ ಅಬ್ದುಸ್ ಸತಾರ. (ಮೂವರು ಲೀಗದವರು.)

ಬಲುಚಿಸ್ತಾನ ೧

ಮುಸಲ್ಮಾನ ೧

೧) ನವಾಬ ಅಹಮ್ಮದಖಾನ ಜೋಗರಝಾಯಿ

ಕ ಗುಂಪು

ಬಂಗಾಲ ೬೦

ಸಾಮಾನ್ಯ ೨೭

೧] ಶರಚ್ಚಂದ್ರ ಬೋಸ ೨] ಡಾ. ಪ್ರಫುಲ್ಲ ಘೋಷ ೩] ಸುರೇಂದ್ರ ಮೋಹನ ಘೋಷ ೪] ಕಿರಣ ಶಂಕರ ರಾಯ ೫] ಲೀಲಾ ರಾಯ ೬] ಜ್ಞಾನ ಮುಜುಮದಾರ ೭] ರಾಜಕುಮಾರ ಚಕ್ರವರ್ತಿ ೮] ಅರುಣ ಗುಹಾ ೯] ಡಾ. ಸುರೇಶ ಬ್ಯಾನರ್ಜಿ ೧೦] ಧೀರೇಂದ್ರನಾಥ ದತ್ತ ೧೧] ಸತ್ಯರಂಜನ ಬಕ್ಷಿ ೧೨] ಪ್ರಫುಲ್ಲ ಸೇನ ೧೩] ಪ್ರಿಯರಂಜನ ಸೇನ ೧೪] ಹೇಮಚಂದ್ರ ನಸ್ಕರ ೧೫] ರಾಧಾನಾಥ ದಾಸ ೧೬] ಅಶುತೋಷ ಮಲಿಕ ೧೭] ಧನಂಜಯ ರಾಯ ೧೮] ಪಿ. ಆರ್. ಠಾಕೂರ ೧೯] ಪಿ. ಡಿ. ರಾಯಕೂಟ ೨೦] ಫ್ರ್ಯಾಂಕ ಅಂಥನಿ ೨೧] ಡಾ. ಎಚ್. ಸಿ. ಮೂಕರ್ಜಿ ೨೨] ದುಂಬರಸಿಂಗ ಗುರಂಗ ೨೩] ಡಾ. ಶ್ಯಾಮಪ್ರಸಾದ ಮೂಕರ್ಜಿ ೨೪] ಮಹಾರಾಜಾಧಿರಾಜ ಬಹಾದ್ದೂರ ಬರದ್ವಾನ ೨೫] ಡಿ. ಪಿ. ಖೈತಾನ ೨೬] ಡಾ. ಬಿ. ಆರ್. ಅಂಬೇಡಕರ ೨೭] ಡಾ. ಸೋಮನಾಥ ಲಾಹಿರಿ. (ಡಾ. ಅಂಬೇಡಕರರು ದಲಿತವರ್ಗದ ಮುಖಂಡರು. ಡಾ. ಲಾಹಿರಿಯವರು ಕಮ್ಯುನಿಸ್ಟರು ಉಳಿದವರೆಲ್ಲ ಕಾಂಗ್ರೆಸ ಪ್ರತಿನಿಧಿಗಳು

ಮುಸಲ್ಮಾನ (೩೩)

೧] ನವಾಬಜಾದಾ ಲಿಯಾಕತ ಅಲ್ಲೀಖಾನ ೨] ಎಚ್ ಎಸ್ ಸುರ್ಹವರ್ದಿ ೩] ಖಾಜಾ ಸರ್ ನಾಜೀಮುದ್ದೀನ ೪] ಎಂ ಎಚ್ ಇಸ್ಪಹಾನಿ ೫] ಕೆ ಶಹಾಯುದ್ದೀನ ೬] ಅಬ್ದುಲ್ ಹಾಶಿಮ ೭] ರಫೀಬುದ್ದೀನ ಅಹಸನ ೮] ಖಾ ಬ ಅಬ್ದುಲ್ ಮಸೂದ ಅಬ್ದುಲ್ ಹಮೀದ ೯] ಫಜಲುಲ್ ರಹಿಮಾನ ೧೦]ಮುಜಬುರ ರಹಿಮಾನಖಾನ ೧೧] ಅಬುಲ್ ಕಾಸಿಮಖಾನ ೧೨] ಖಾ ಬ ಇಬ್ರಾಹಿಮಖಾನ

೧೪ ನೇ ಪುಟ ನೋಡಿರಿ

ಅಂತರ್ ರಾಷ್ಟ್ರೀಯ

ಮಿತ್ರರಲ್ಲಿ ಒಡಕು

ಈಚೆಗೆ ಪ್ಯಾರೀಸಿನಲ್ಲಿ ಸೇರಿದ ವಿದೇಶ ಮಂತ್ರಿಗಳ ಪರಿಷತ್ತು ಯುರೋಪಿಯನ್ ರಾಷ್ಟ್ರಗಳ ಶಾಂತಿ ಪರಿಷತ್ತನ್ನು ಸೇರಿಸಲು ನಿರ್ಧರಿಸುವಷ್ಟು ಐಕಮತ್ಯಕ್ಕೆ ಬಂದರೂ ಆ ಐಕಮತ್ಯ ಪ್ರಶಸ್ತವಾದುದಲ್ಲವೆಂಬ ಸಂಶಯಕ್ಕೆ ದಿನ ಹೋದಂತೆ ಪುಷ್ಟಿ ದೊರೆಯುತ್ತಿದೆ. ಅಮೇರಿಕನ್ ವಿದೇಶ ಮಂತ್ರಿ ಬಾಯರ್ನ್ಸರು ಪರಿಷತ್ತಿನಿಂದ ಮರಳಿದ ವರೇ ರಶಿಯನ್ ಧೋರಣೆಯನ್ನು ಕುರಿತು ಮುಚ್ಚುಮರೆಯಿಲ್ಲದೆ ಕೆಲ ಮಾತುಗಳನ್ನಾಡಿದರು. ಜರ್ಮನಿಯ ನಿಶ್ಶಸ್ತ್ರೀಕರಣದ ಧೋರಣೆಯ ವಿಷಯದಲ್ಲಿ ರಶಿಯನ್ ವಿದೇಶಮಂತ್ರಿ ವಹಿಸಿದ ನಿಲುವೆಯಿಂದ ಜರ್ಮನ್ ಯುದ್ಧ ಪ್ರಿಯತೆಯನ್ನು ಪಾಶ್ಚಿಮಾತ್ಯ ರಾಷ್ಟ್ರಗಳಿಗೂ ರಶಿಯಕ್ಕೂ ಇರುವ ಮತಭೇದದಲ್ಲಿ ಪಣವಾಗಿ ಉಪಯೋಗಿಸುವದೇ ಅವನ ಇಚ್ಛೆಯಾಗಿದೆಯೆಂದು ಸ್ಪಷ್ಟವಾಗುತ್ತದೆ, ಎಂಬುದಾಗಿ ಅವರು ಆರೋಪಿಸಿದರು. ಅಲ್ಲದೆ, ತಮ್ಮ ಧೋರಣೆಯಿಂದ ರಶಿಯನ್ನರು ಮಿತ್ರರಾಷ್ಟ್ರಗಳ ಜನರಲ್ಲಿ ಎಂಥ ದ್ವೇಷವನ್ನು ಹುಟ್ಟಿಸುತಿರುವರೆಂಬುದು ಅವರಿಗೆ ಗೊತ್ತಿಲ್ಲ ಎಂದೂ ಎಚ್ಚರಿಕೆ ಕೊಟ್ಟಿದ್ದಾರೆ. ಅತ್ತ ರಶಿಯದಲ್ಲಿಯೂ ಆಂಗ್ಲೋ-ಅಮೇರಿಕನ್ ಧೋರಣೆಯೆಲ್ಲ ರಶಿಯಾದ ಮೇಲೆ ಏರಿ ಹೋಗುವ ಸಿದ್ಧತೆಯ ದ್ಯೋತಕವೆಂಬ ಶಂಕೆ ಹಬ್ಬತೊಡಗಿದೆ. ಮೊನ್ನೆ ಮೊನ್ನೆ ಮಾಸ್ಕೋದಿಂದ ಮರಳಿದ ಹಿಂದೀ ಕಮ್ಯುನಿಸ್ಟ ಶ್ರೀ ಡಾಂಗೆಯವರೂ ಈ ಮಾತನ್ನು ಬೆಂಬಲಿಸಿದ್ದಾರೆ. ಇಂಗ್ಲಂಡಿಗಿಂತಲೂ ಅಮೇರಿಕೆಯೆ ಹೆಚ್ಚು ರಶಿಯನ್ ವಿರೋಧಿಯಾಗಿದೆಯೆಂದೂ ಅದುದರಿಂದ ಈ ಪ್ರತಿಗಾಮಿ ರಾಷ್ಟ್ರದೊಡನೆ ತಾವು ಬೇಗನೆ ಯುದ್ಧಕ್ಕಿಳಿಯಬೇಕಾಗುವದೆಂದೂ ರಶಿಯನ್ನರು ಭಾವಿಸಿದ್ದಾರಂತೆ. ಇದಕ್ಕಾಗಿ ರಶಿಯನ್ ಸೇನೆಯಲ್ಲಿ ಶಿಸ್ತನ್ನು ಬಿಗಿಗೊಳಿಸುವ ಎತ್ತಿಗಡೆ ಪ್ರಾರಂಭವಾಗಿಬಿಟ್ಟಿದೆ. ತುರ್ಕಿಯ ನೇತೃತ್ವದಲ್ಲಿ ಅರಬ ರಾಷ್ಟ್ರಗಳ ರಶಿಯನ್ ವಿರೋಧ ಗುಂಪನ್ನು ರಚಿಸುವ ಪ್ರಯತ್ನಕ್ಕೆ ಉತ್ತರವಾಗಿ ಆ ರಾಷ್ಟ್ರಗಳಲ್ಲಿ ಬಡವರ ಬಗ್ಗರನ್ನು ಆಳುವವರ ವಿರುದ್ಧ ಎತ್ತಿ ನಿಲ್ಲಿಸುವ ತೀವ್ರ ಪ್ರಯತ್ನಗಳೂ ಸಾಗಿವೆ. ಹೀಗೆ ಪ್ಯಾರೀಸಿನಲ್ಲಿ ಆದ ಒಮ್ಮತ ಬರಿ ಸ್ಮರಣೆ ಮುಗಿದ ಮೇಲಿನ ಉದಾಸೀನ ಒಪ್ಪಂದವಿರಬೇಕೆಂದೂ ಪ್ರಬಲ ರಾಷ್ಟ್ರಗಳು ಇನ್ನೊಮ್ಮೆ ಶಕ್ತಿ ಪರೀಕ್ಷೆಯ ಸಿದ್ಧತೆ ನಡೆಸಿವೆಯೆಂದೂ ಅರ್ಥಹೊರಡುತ್ತದೆ.

ಕಮ್ಯುನಿಸ್ಟ ವಿರೋಧಿ ಸತ್ರ

ಅರಬ ರಾಷ್ಟ್ರಗಳಲ್ಲಿ-ಬ್ರಿಟಿಶರ ಪ್ರಭಾವಕ್ಕೊಳಗಾದ ಪ್ರದೇಶವಿದು— ಕಮ್ಯುನಿಸ್ಟ ವಿರೋಧಿ ಸತ್ರ ಆರಂಭವಾಗಿರುವ ಮಾತು ಕಳೆದ ವಾರ ಇಲ್ಲಿ ಪ್ರಸ್ತಾಪಿಸಲ್ಪಟ್ಟಿತ್ತು. ಆ ಸತ್ರ ಇನ್ನೂ ಪ್ರಬಲವಾಗಿ ಸಾಗಿದೆ. ಇಜಿಪ್ತದಲ್ಲಿ ನಡೆದಿರುವ ಅತ್ಯಾಚಾರಗಳೆಲ್ಲ ವಿದೇಶೀಯರಿಂದ ಉದ್ರೇಕಿಸಲ್ಪಟ್ಟ ಕಮ್ಯುನಿಸ್ಟ ಕೈವಾಡವೆಂದು ಮುಖ್ಯ ಮಂತ್ರಿ ಸಿದ್ದಿಕಿ ಪಾಶಾ ಹೇಳಿದ್ದಾರೆ. ತಮ್ಮ ದೇಶದಲ್ಲಿ ನಡೆದ ಬಡಬಗ್ಗರ ಚಳವಳಿಯನ್ನು ಹತ್ತಿಕ್ಕಲು ಇಜಿಪ್ಶನ್ ಪ್ರತಿಗಾಮಿಗಳಿಗೆ ಅವು "ಕಮ್ಯುನಿಸ್ಟ ಉದ್ರಿಕ್ತ" ವೆಂದು ಪಟ್ಟಿ ಹಚ್ಚಲು ಬಹಳ ಸುಖವಾಗಿದೆ. ಕೆನಡಾದಲ್ಲಿರುವ ರಶಿಯನ್ ರಾಯಭಾರ ಗೃಹ ಆ ದೇಶದಲ್ಲಿ ರಶಿಯನ್ನರು ರಚಿಸಿದ ಬೇಹುಗಾರ ಬಲೆಯ ಕೇಂದ್ರವಾಗಿದೆಯೆಂಬ ಅಭಿಪ್ರಾಯ ವ್ಯಕ್ತಗೊಳಿಸುವ ವರದಿಯೊಂದು ಸರಕಾರದವರು ನೇಮಿಸಿದ ವಿಚಾರಣಾ ಸಮಿತಿಯಿಂದ ಹೊರಡಿಸಲ್ಪಟ್ಟಿದೆ. ಇದಾದರೂ ಬ್ರಿಟಿಶ ಸಾಮ್ರಾಜ್ಯದಲ್ಲಿ ನಡೆದ ರಶಿಯನ್ ವಿರೋಧಿ ಪ್ರಚಾರದ ಇನ್ನೊಂದು ಅಂಗವಾಗಿದೆ. ಇರಾಣದ ಬ್ರಿಟಿಶ ಒಡೆತನದ ಎಣ್ಣೆ ಗಣಿಗಳ ಕೂಲಿಕಾರರು ಕಳೆದ ವಾರ ಪ್ರಚಂಡ ಸಂಪು ಹೂಡಿದರು. ಆ ಸಮಯ ನಡೆದ ತಿಕ್ಕಾಟದಲ್ಲಿ ಅನೇಕ ಜನರು ಸತ್ತರು. ಇದು ರಶಿಯನ್ ಪಕ್ಷಪಾತಿ ತುದೇ ಪಕ್ಷದವರ ಕೈವಾಡವೆಂದೂ ಇದರಲ್ಲಿ ರಶಿಯನ್ನರ ಕೈಯಿದೆಯೆಂದೂ ಬಹಿರಂಗವಾಗಿ ಆರೋಪಿಸಲಾಗಿದೆ. ಇವೆಲ್ಲ ದೀರ್ಘಶಾಂತಿಯ ಆಶಾದಾಯಕ ಲಕ್ಷಣಗಳಲ್ಲ.

ಇಟಲಿಯ ಶಾಂತಿ ಒಪ್ಪಂದ

ಪ್ಯಾರೀಸಿನಲ್ಲಿ ವಿದೇಶ ಮಂತ್ರಿಗಳು ಒಪ್ಪಿದ ಇಟಾಲಿಯನ್ ಶಾಂತಿ ಒಪ್ಪಂದದ ಕೆಲ ವಿವರಗಳು ಹೊರಬಿದ್ದಿವೆ. ಅದರ ಮುಖ್ಯಾಂಶಗಳು ಹೀಗಿವೆ.

ಇಟಲಿಯ ಸೈನ್ಯದ ಪರಮಾವಧಿ ಸಂಖ್ಯೆಯನ್ನು ೨,೫೦,೦೦೦ ಕ್ಕೂ ೨೦೦ ಟ್ಯಾಂಕುಗಳಿಗೂ ಇಳಿಸಲಾಗಿದೆ.

ಜಗತ್ತಿನ ಅತಿ ಪ್ರಬಲ ನೌಕಾಶಕ್ತಿಗಳಲ್ಲೊಂದಾಗಿದ್ದ ಅದರ ನೌಕಾ ಬಲ ಎರಡು ೧೨॥ ಇಂಚಿನ ಯುದ್ಧ ಹಡಗು, ನಾಲ್ಕು ೬ ಇಂಚಿನ ಕ್ರೂಜರು, ೪ ವಿನಾಶಿಕೆಗಳು, ೧೬ ಸುರಂಗ ಹಡುಗುಗಳು ಇಷ್ಟಕ್ಕಿಂತ ಹೆಚ್ಚಾಗಿರಕೂಡದು.

ಅದರ ವಿಮಾನ ಬಲ ೨೦೦ ಹೋರಾಟದ ಮತ್ತು ೧೫೦ ಸಾರಿಗೆ ಮತ್ತು ಇತರ ವಿಮಾನಗಳಿಗೆ ಸೀಮಿತವಾಗಿರಬೇಕು.

ಪಾಂಟೆಲಾರಿಯಾ, ಲಾಂಪಡೂಸಾ, ಲಿಂಡ್ಸಾ, ಲಾಂಪ್ಯೋನ, ಪಿಯಾಂಡಾದ್ವೀಪಗಳನ್ನು ಸೈನ್ಯವಿರಹಿತಗೊಳಿಸಬೇಕು. ಅಲ್ಬೇನಿಯಾ ಇಥಿಯೋಪಿಯಾಗಳ ಸ್ವಾತಂತ್ರ್ಯವನ್ನು ಇಟಲಿ ಮನ್ನಿಸಬೇಕು ಇತ್ಯಾದಿ.

ತುರ್ಕಿಯ ಚುನಾವಣೆಗಳು

ಈವರೆಗೆ ಏಕಪಕ್ಷದ ರಾಜ್ಯತಂತ್ರಕ್ಕೊಳಪಟ್ಟಿದ್ದ ತುರ್ಕಿಗೆ ರಾಷ್ಟ್ರೀಯ ಗಂಡಾಂತರದ ಭೀತಿ ಬಂದುದರಿಂದ ಹೆಚ್ಚಿನ ಒಗ್ಗಟ್ಟು ಸಾಧಿಸುವ ಅವಶ್ಯಕತೆ ಬಿದ್ದು ಇತರ ರಾಜಕೀಯ ಪಕ್ಷಗಳ ಉದಯಕ್ಕೆ ಅಪ್ಪಣೆ ಕೊಡಬೇಕಾಗಿಬಂತು. ಹೀಗೆ ಹಲವು ಪಕ್ಷಗಳಿಗೆ ಹೋರಾಡಲವಕಾಶವುಳ್ಳ ಮೊಟ್ಟಮೊದಲನೆ ಚುನಾವಣೆ ಈ ವಾರ ತುರ್ಕಿಯಲ್ಲಿ ಜರಗಿತು. ನಿರೀಕ್ಷಿಸಿದಂತೆ ಸರಕಾರಿ (ರಿಪಬ್ಲಿಕನ್) ಪಕ್ಷಕ್ಕೆ ೬೩ ಪ್ರಾಂತಗಳಲ್ಲಿ ಬೆಂಬಲ ದೊರೆತಿದೆ. ೪೬೫ ಸ್ಥಾನಗಳುಳ್ಳ ಹೊಸ ಶಾಸನ ಸಭೆಯಲ್ಲಿ ೩೯೫ ಸ್ಥಾನಗಳು ಈಗಾಗಲೆ ಅದಕ್ಕೆ ದೊರೆತಿವೆ. ವಿರೋಧಿ ಪಕ್ಷಗಳಲ್ಲಿ ಅತಿದೊಡ್ಡದಾದ ಪ್ರಜಾತಂತ್ರ ಪಕ್ಷಕ್ಕೆ ೬೬ ಸ್ಥಾನಗಳು ದೊರೆತಿವೆ. ಹೊಸ ಅನನುಭವಿಗಳಿಗೆ ಇಷ್ಟು ಯಶಸ್ಸು ದೊರೆತದ್ದು ಚಿಕ್ಕ ಮಾತಲ್ಲ. ಸ್ವತಂತ್ರರಿಗೆ ೪ ಸ್ಥಾನ.

ಜೆರೂಸಲೆಂ ದುರಂತ

ಪಾಲಿಸ್ತಾನದ ಯಹೂದ್ಯರ ಗುಪ್ತ ಸೇನೆ ಈ ವರೆಗೆ ತಾನು ನಡೆಸಿದ ಅತ್ಯಾಚಾರಗಳನ್ನೆಲ್ಲ ಮರೆಮಾಡುವ ಭಯಾನಕ ವಿಧ್ವಂಸವೊಂದನ್ನು ತಾ. ೨೨ ಕ್ಕೆ ಸಾಧಿಸಿತು. ಜೆರೂಸಲೆಂದಲ್ಲಿ ಬ್ರಿಟಿಶ ಸರಕಾರ ಮತ್ತು ಸೈನ್ಯದ ಸನ್ನಿಧಿ ಕೇಂದ್ರವುಳ್ಳ ೫ ಅಂತಸ್ತಿನ ಕಿಂಗ್ ಡೇವಿಡ ಹಾಟೆಲ ಎಂಬ ಭವ್ಯ ಕಟ್ಟಡದಲ್ಲಿ ಯಹೂದ್ಯ ಕ್ರಾಂತಿಕಾರರು ಒಮ್ಮಿಂದೊಮ್ಮೆ ಸಶಸ್ತ್ರರಾಗಿ ನುಗ್ಗಿ ಬಾಂಬುಗಳನ್ನು ನಟ್ಟು ಹೋದರು. ಬಾಂಬುಗಳು ಸ್ಫೋಟಗೊಂಡು ಆ ಇಡಿ ಕಟ್ಟಡ ಕುಸಿದು ಬಿದ್ದುದರಿಂದ ೫೦ ಜನರು ಮರಣ ಹೊಂದಿದರು. ೪೫ ಜನರಿಗೆ ಗಾಯವಾಗಿದೆ. ಮರಣ ಹೊಂದಿದವರಲ್ಲಿ ಪಾಲಿಸ್ತಾನದ ಪೋಸ್ಟಮಾಸ್ತರ ಜನರಲ್ಲರೇ ಮೊದಲಾದ ಉಚ್ಚ ಅಧಿಕಾರಿಗಳಿರುವರು. ಮಹತ್ವದ ಕಾಗದ ಪತ್ರಗಳು ನಾಶಗೊಂಡಿವೆ. ಈ ಪ್ರಚಂಡ ವಿಧ್ವಂಸ ಕಾರ್ಯದಿಂದ ಪಾಲಿಸ್ತಾನದಲ್ಲಿ ಮಾತ್ರವಲ್ಲ ಇಂಗ್ಲಂಡಿನಲ್ಲಿ ಕೂಡ ಉದ್ವೇಗ ಹಬ್ಬಿದೆ. ಯಹೂದ್ಯ ಕ್ರಾಂತಿಕಾರರು ಮೊದಲೆ ಆ ಕಟ್ಟಡವನ್ನು ಹಾರಿಸಿಬಿಡುವದಾಗಿ ಎಚ್ಚರಿಕೆ ಕೊಟ್ಟಿದ್ದರು. ಆದರೆ ಬ್ರಿಟಿಶರು ಅದನ್ನು ಲೆಕ್ಕಿಸಲಿಲ್ಲವಾಗಿ ಈ ದುರಂತಕ್ಕೆ ಅವರೇ ಕಾರಣರೆಂದು ಕ್ರಾಂತಿಕಾರರು ಸಾರುತ್ತಾರೆ.

ಯಹೂದ್ಯರ ಅತ್ಯಾಚಾರ ತಡೆಯಲು ಕ್ರಮ ಕೈಕೊಳ್ಳದಿದ್ದರೆ ಅರಬರಿಗೆ ಆತ್ಮರಕ್ಷಣೆ ಮಾಡಿಕೊಳ್ಳುವ ವ್ಯವಸ್ಥೆ ನೀವೇ ಮಾಡಿಕೊಳ್ಳಿರೆಂದು ಕರೆ ಕೊಡಬೇಕಾಗುವದಾಗಿ ಅರಬ ವರಿಷ್ಠ ಸಮಿತಿ ಬ್ರಿಟಿಶರಿಗೆ ತಿಳಿಸಿದೆ. ಇಜಿಪ್ತು ಪಾಲಿಸ್ತಾನದ ಆಡಳಿತ ವ್ಯವಸ್ಥೆಯನ್ನು ಬದಲಿಸಬೇಕೆಂದು ಸಂಯುಕ್ತರಾಷ್ಟ್ರಗಳಿಗೆ ಮೊರೆಯಿಟ್ಟಿದೆ.

ಡಚ್‌ರಾಣಿಯ ಹಳೆ ರಾಗ

ಡಚ್ ಈಸ್ಟ ಇಂಡೀಜ ದ್ವೀಪಗಳ ಹೊರವಲಯದ ಆಡಳಿತೆಯನ್ನು ಬ್ರಿಟಿಶರು ಡಚ್ಚರಿಗೆ ಬಿಟ್ಟುಕೊಟ್ಟಂದಿನಿಂದ ಇಂಡೋನೇಶಿಯಾಕ್ಕೆ ಸ್ವಾತಂತ್ರ್ಯಕೊಡುವ ವಿಷಯದಲ್ಲಿ ಡಚ್ಚರ ಅನಿಚ್ಛೆ ಹೆಚ್ಚು ಹೆಚ್ಚು ಸ್ಪಷ್ಟವಾಗತೊಡಗಿದೆ. ಅವರು ಬರಿ ಸಂದರ್ಭ ಸಾಧಿಸುವ ಉದ್ದೇಶದಿಂದ ಕಾಲಹರಣ ಮಾಡುತಿದ್ದಾರೆ. ಡಾ. ವಾನ್ ಮೂಕರು ಇಂಡೋನೇಶಿಯನ್ ಪ್ರಜಾತಂತ್ರವಾದಿಗಳೊಡನೆ ನಡೆಸಿದ ಮಾತುಕತೆಗಳು ಫಲಕಾರಿಯಾಗದಿದ್ದ ಇಂಡೊನೇಶಿಯನ್ ಸರಕಾರದವರು ಮೂರು ಕರಾರುಗಳನ್ನು ಮಾತುಕತೆಗೆ ಮೂಲಾಧಾರವೆಂದು ಮುಂದೊತ್ತಿದರು. ಒಂದು, ಸದ್ಯದ ಇಂಡೊನೇಶಿಯನ್ ಸರಕಾರವನ್ನು ಮನ್ನಿಸುವದು, ಎರಡು, ಇಂಡೊನೇಶಿಯಾದ ಎಲ್ಲ ಭಾಗಗಳನ್ನು ಸೇರಿಸಿ ಪ್ರಜಾರಾಜ್ಯ ಸ್ಥಾಪಿಸುವದು, ಮೂರು, ಇಂಡೊನೇಶಿಯಾವನ್ನು ಡಚ್ ಸಾಮ್ರಾಜ್ಯದ ಭಾಗವೆಂದು ಭಾವಿಸತಕ್ಕದ್ದಲ್ಲ. ಈ ಕರಾರುಗಳ ಬಗ್ಗೆ ಡಚ್ಚರ ಪ್ರತಿಕ್ರಿಯೆ ಮೊನ್ನೆ ಡಚ್ ರಾಣಿ ವಿಲ್ಹೆಲ್ಮಿನಾಳ ಪಾರ್ಲಮೆಂಟ ಭಾಷಣದಲ್ಲಿ ವ್ಯಕ್ತವಾಯಿತು. ಡಾ. ವಾನ್ ಮೂಕರು ಇಂಡೊನೇಶಿಯಾವನ್ನು ಜಾವಾ, ಸುಮಾತ್ರಾ, ಸೆಲೆಬಸ್, ಬೋರ್ನಿಯೋಗಳ ಸಂಯುಕ್ತ ರಾಜ್ಯವಾಗಿ ಮಾಡಬೇಕೆಂದು ಒಂದು ಕರೆ ಸೂಚಿಸಿರುವಾಗಲೆ ರಾಣಿ ವಿಲ್ಹೆಲ್ಮಿನಾಳು ಡಚ್ ಸಾಮ್ರಾಜ್ಯಾಂತರ್ಗತವಾದ ಸ್ವಾತಂತ್ರ್ಯವನ್ನು ಮುಂದೆ ಒಂದು ದಿನ ಕೊಡಲಾಗುವದೆಂಬ ಹಳೆಯ ಹಾಡನ್ನೆ ಹಾಡಿದ್ದಾಳೆ. ಇದಕ್ಕಾಗಿ ಇಂಡೊನೇಶಿಯನ್ ಮತ್ತು ಡಚ್ ಪ್ರತಿನಿಧಿ ಸಂಯುಕ್ತ ಸಭೆಯೊಂದನ್ನು ಕೂಡಿಸಲಾಗುವದೆಂದು ಆಕೆ ಹೇಳಿದಳು. ಇದೆಲ್ಲ ಹೊತ್ತು ಕಳೆಯುವ ಆಟ. ಇಂಡೊನೇಶಿಯನ್ನರ ವಿರುದ್ಧ ಜಪಾನಿಯರನ್ನು ಉಪಯೋಗಿಸಲು ಕೂಡ ಆಂಗ್ಲೋ ಡಚ್ಚರು ಹೇಸುತ್ತಿಲ್ಲ. ಇನ್ನು ಹೀಗೆ ಮಾಡಿದರೆ ಮಧ್ಯ ಜಾವಾದಲ್ಲಿರುವ ಮಿತ್ರ ಕೈದಿಗಳನ್ನು ಸುರಕ್ಷಿತವಾಗಿ ತಂದೊಪ್ಪಿಸುವ ಜೊಣೆಯನ್ನು ತಾವು ಪಾಲಿಸಲಾರೆವೆಂದು ಇಂಡೊನೇಶಿಯನ್ನರು ಎಚ್ಚರಿಸಿದ್ದಾರೆ.

* * *

ಬೋಲಿವಿಯಾದಲ್ಲಿ (ದ. ಅಮೇರಿಕೆ) ಜನರು ವಿಶ್ವವಿದ್ಯಾಲಯ ಅಧ್ಯಾಪಕ ವಿದ್ಯಾರ್ಥಿಗಳ ಮುಂದಾಳುತನದಲ್ಲಿ ಕ್ರಾಂತಿಯೆಬ್ಬಿಸಿ ಅಧ್ಯಕ್ಷ ಗುಲಬರ್ಟೋ ವಿಲ್ಲಾ ರೊಯೆಲ್ಲರನ್ನು ಹಿಡಿದುಕೊಂಡು ಎಳೆದೆಳೆದು ಬಾರಿ ದೀಪದ ಕಂಬಗಳ ಮೇಲೆ ಗಲ್ಲಿಗೇರಿಸಿ ಸೇಡು ತೀರಿಸಿಕೊಂಡಿದ್ದಾರೆ. ಅಧ್ಯಕ್ಷ ರೊಯೆಲ್ಲರು ೧೯೪೪ ರಲ್ಲಿ ಒಳಸಂಚಿನ ಮುಖಾಂತರ ಮಿಲಿಟರಿ ಅಧಿಕಾರಿಗಳ ಸಹಾಯದಿಂದ ಅಧಿಕಾರವನ್ನು ಕಸಿದುಕೊಂಡಿದ್ದರು.

ನಿಜಾಮ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳು

ಅಲ್ಪಸಂಖ್ಯಾಕ ಮುಸ್ಲಿಮರಿಗೆ ಶಾಸನ ಸಭೆಯಲ್ಲಿ ಬಹುಮತ !

ಮುಸ್ಲಿಮರಿಗೆ ನಿಜಾಮರ ಗುಪ್ತ ಆಶ್ವಾಸನ

ಹೈದರಾಬಾದದ ನಿಜಾಮರ ಸರಕಾರ ತನ್ನ ಸಂಸ್ಥಾನದಲ್ಲಿ ಸದ್ಯವೇ ಪ್ರಾರಂಭವಾಗಲಿರುವ ಹೊಸ ಘಟನಾತ್ಮಕ ಸುಧಾರಣೆಗಳ ರೂಪರೇಷೆಗಳನ್ನು ವಿವರಿಸುವ ಪ್ರಕಟನೆಯೊಂದನ್ನು ಹೊರಡಿಸಿದೆ.

೧೯೪೪ ರಲ್ಲಿಯೇ ಸಿದ್ಧಗೊಳಿಸಲ್ಪಟ್ಟದ್ದು "ಯುದ್ಧದ ಕಾರಣದಿಂದ ತಡೆ ಹಿಡಿಯಲ್ಪಟ್ಟಿದ್ದ" ಈ ಸುಧಾರಣೆಗಳ ಮೇರೆಗೆ ನಾಳೆ ಅಕ್ಟೋಬರದಲ್ಲಿ ಚುನಾವಣೆಗಳು ಜರಗಿ ಶಾಸನ ಸಭೆಯೊಂದು ರಚಿಸಲ್ಪಡುವದು. ಅದರಲ್ಲಿ ಲೋಕ ನಿಯುಕ್ತ ಸದಸ್ಯರ ಬಹುಮತವಿರುವದು. (೧೩೨ರಲ್ಲಿ ೭೬) ಆದರೆ ಶಾಸನ ಸಭೆಯಲ್ಲಿ ಮುಸ್ಲಿಮರದೇ ಬಹುಮತ ವಿರುವಂತೆ ವ್ಯವಸ್ಥೆ ಮಾಡಲಾಗಿದೆ. ಮುಸ್ಲಿಮರ ಜನಸಂಖ್ಯೆ ಸಂಸ್ಥಾನದಲ್ಲಿ ಕೇವಲ ನೂರಕ್ಕೆ ೧೨ ಇರುವದೆಂದು ಇಲ್ಲಿ ಹೇಳುವದು ಅಪ್ರಸ್ತುತವಾಗದು.

ಕಾರ್ಯಕಾರಿ ಮಂಡಲಕ್ಕೆ ಲೋಕನಿಯುಕ್ತ ಸಭಾಸದರಿಂದ ಒಬ್ಬ ಹಿಂದೂ ಒಬ್ಬ ಮುಸ್ಲಿಂ ಹೀಗೆ ಇಬ್ಬರನ್ನು ನೇಮಿಸಿಕೊಳ್ಳಲಾಗುವದೆಂದೂ ಸಾರಲಾಗಿದೆ.

ನಿಜಾಮರೂ ಒಂದು ಫರ್ಮಾನ್ ಹೊರಡಿಸಿ ಸಂಸ್ಥಾನದ ಪ್ರಜೆಗಳು ಈ ಸುಧಾರಣೆಗಳನ್ನು ಆನಂದದಿಂದ ಸ್ವೀಕರಿಸಬೇಕೆಂದೂ ಎಲ್ಲ ಜಾತಿ—ವೃತ್ತಿ—ಪಂಗಡಗಳೂ ಸೌಹಾರ್ದದಿಂದ ವರ್ತಿಸಬೇಕೆಂದೂ ಆಶಿಸಿದ್ದಾರೆ.

ಶಾಸನ ಸಭೆ

ಹೊಸ ಶಾಸನ ಸಭೆಯಲ್ಲಿ ೧೩೨ ಸದಸ್ಯರಿದ್ದು ಅವರಲ್ಲಿ ೭೬ ಜನ ಲೋಕನಿಯುಕ್ತರು, ೪೩ ಜನ ನಾಮಕರಣ ಸದಸ್ಯರು ಮತ್ತು ೧೩ ಜನ ನೇಮಿಸಿದ ಸದಸ್ಯರು ಇರುವರು. ಲೋಕನಿಯುಕ್ತ ಮತ್ತು ನಾಮಕರಣ ಸೇರಿ ೧೧೯ ಸದಸ್ಯರಲ್ಲಿ ೫೮ ಮುಸ್ಲಿಂ ೫೮, ಹಿಂದೂ,೨ ಕ್ರಿಶ್ಚಿಯನ್, ೧ ಪಾರ್ಸಿ ಇರುವರು.

೭೬ ಲೋಕನಿಯುಕ್ತರನ್ನು ವೃತ್ತಿಗನುಸರಿಸಿ ಆರಿಸಲಾಗುವದು. ಅರ್ಥಾತ್ ಅವರಲ್ಲಿ

ರೈತರು	೩೨
ಜಮೀನ್ದಾರರು ಮತ್ತು ಬಾಡಿಗೆದಾರರು	೨೦
ಸಂಸ್ಥಾನದ ಜಹಾಗಿರುಗಳು	೪
ಕೂಲಿಕಾರರು	೪
ವಾಣಿಜ್ಯ, ಉದ್ಯೋಗ, ಬ್ಯಾಂಕಿಂಗ, ವಕೀಲರು, ಸ್ಥಾನಿಕಸಂಸ್ಥೆ, ವೈದ್ಯರು, ಪದವೀಧರರು, ಮಾತದಾರರು (ಪ್ರತಿ ವರ್ಗಕ್ಕೆ ೨ ರಂತೆ	೧೬
	೭೬

೪೩ ನಾಮಕರಣ ಸದಸ್ಯರಲ್ಲಿ ನವಾಬ ಜಂಗ ಬಹಾದುರ, ದಿ. ಮಹಾರಾಜಾ ಕೃಷ್ಣಪ್ರಸಾದ ಮತ್ತು ೩ ಪೈಘೂಸ ಈ ೫ ಜಹಾಗಿರುಗಳಿಗೆ ೫ ಸ್ಥಳಗಳನ್ನು ಕೊಟ್ಟು ಉಳಿದವುಗಳಲ್ಲಿ ಅರ್ಧದಷ್ಟನ್ನು ಮಹಿಳೆಯರು, ಪತ್ರಿಕೋದ್ಯಮಿಗಳು, ವಿಶ್ವವಿದ್ಯಾಲಯ, ದಲಿತ, ಲಿಂಗಾಯತ, ಕ್ರಿಶ್ಚಿಯನ್, ಸೀಖ, ಸಹಕಾರಿ ಸಂಘಗಳು ಇವರಲ್ಲಿ ಹಂಚಲಾಗುವದು.

ಮತದಾನ

ಸುಧಾರಣೆಗಳಲ್ಲಿ ಸಂಯುಕ್ತ ಮತದಾನ ಮತ್ತು ಹಿಂದೂ ಮುಸ್ಲಿಂ ಸಮಪ್ರಾತಿನಿಧ್ಯದ ತತ್ವಗಳು ಅಡಕವಾಗಿವೆ. ಹೀಗೆ ಎಲ್ಲ ಸಮಾಜದವರೂ ಮತದಾನ ಮಾಡಲು ಅರ್ಹರಾಗಿದ್ದರೂ ಹಿಂದೂ ಮುಸ್ಲಿಮರು ಮಾತ್ರ ಆಯ್ಕೆಗೆ ನಿಲ್ಲಲು ಅರ್ಹರಾಗುತ್ತಾರೆ.

ವರ್ಷಕ್ಕೆ ೧೦೦ ರೂಪಾಯಿ ಭೂಕಂದಾಯ ಅಥವಾ ಗೇಣಿ ಕೊಡುವ ಪ್ರತಿ ರೈತರಿಗೂ ಮತಾಧಿಕಾರವುಂಟು. ಹಾಗೆಯೆ ತಿಂಗಳಿಗೆ ೫ ರೂಪಾಯಿ ಬಾಡಿಗೆ ಬರುವ ಭೂಮಿ ಅಥವಾ ಕಟ್ಟಡದ ಒಡೆಯರಿಗೂ ಅಂಥವುಗಳಲ್ಲಿ ವಾಸಿಸುವವರಿಗೂ ಮತಾಧಿಕಾರ ಬರುವದು

ಸಂಯುಕ್ತ ಮತದಾನ ಪದ್ಧತಿಯಿಂದಲೇ ಚುನಾವಣೆಗಳಾಗುವವಾದರೂ ತನ್ನ ಜಾತಿಯ ಮತದಾರರಲ್ಲಿ ೧೦೦ ರಲ್ಲಿ ೫೧ ರಷ್ಟು ಮತ ದೊರಕಿಸಿದ ಆಯಾ ಜಾತಿಯ ಹುರಿಯಾಳೇ ಉಳಿದ ಜಾತಿಯವರು ಅವನಿಗೆ ಹಾಕಿದ ಮತಗಳೇಷ್ಟೇ ಇರಲಿ, ಆರಿಸಿ ಬರುತ್ತಾನೆ. ಯಾವ ಹುರಿಯಾಳಿಗೂ ಸ್ವಜಾತಿಯ ನೂರಕ್ಕೆ ೫೧ರಷ್ಟು ಮತ ದೊರಕಿರದಿದ್ದರೆ ತನ್ನ ಜಾತಿಯ ಅತಿಹೆಚ್ಚು ಮತ ಪಡೆದವರಿಬ್ಬರಲ್ಲಿ ಒಟ್ಟು ಎಲ್ಲ ಜಾತಿಯ ಮತಗಳಲ್ಲಿ ಅಧಿಕ ಸಂಖ್ಯೆಯನ್ನು ದೊರಕಿಸಿದವನೇ ಆರಿಸಿ ಬರುತ್ತಾನೆ.

೭೬ ಲೋಕನಿಯುಕ್ತರಲ್ಲಿ ರೈತರಲ್ಲಿ ಜಮೀನ್ದಾರರ ೫೨ ಸ್ಥಾನಗಳಿಗೆ ಪ್ರಾದೇಶಿಕ ಮತದಾರ ಸಂಘಗಳಿಂದಲೂ ಉಳಿದವುಗಳಿಗೆ ವೃತ್ತಿವಾರು ಮತದಾರ ಸಂಘಗಳಿಂದಲೂ ಆಯ್ಕೆ ಜರಗುವದು.

(೧೩ ನೇ ಪುಟ ನೋಡಿರಿ)

ಸ್ಮಟ್ಸರ ವರ್ಣದ್ವೇಷ

೧ ನೇ ಪುಟದಿಂದ ಮುಂದರಿದುದು

ಕೊನೆಗೊಳಿಸಿ ಅಲ್ಲಿಂದ ತಮ್ಮ ಹಾಯಕಮಿಶನರರನ್ನು ಹಿಂದೆ ಕರೆಸಿಕೊಂಡ ಮಾತ್ರಕ್ಕೆ ತನ್ನ ಪಾಲಿನ ಕರ್ತವ್ಯ ತೀರಿತೆಂದು ಹಿಂದುಸ್ತಾನ ಸರಕಾರ ಭಾವಿಸುತಿದ್ದರೆ ಅದು ಬಹಳ ದೊಡ್ಡ ತಪ್ಪು ಮಾಡಿದೆ.

ಹಿಂದುಸ್ತಾನ ಸರಕಾರ, ಮುಖ್ಯವಾಗಿ ಅದರ ವಿದೇಶಿ ಸ್ವರೂಪದ ಕಾರಣದಿಂದಲೇ, ದಕ್ಷಿಣ ಅಫ್ರಿಕೆಯಲ್ಲಿನ ನಮ್ಮ ಜನರಿಗೆ ರಕ್ಷಣೆ ಕೊಡುವ ಕರ್ತವ್ಯದಲ್ಲಿ ಅಯಶಸ್ವಿಯಾಗಿದೆ. ಈ ಹೊಣೆಯನ್ನು ಯಾವ ಸರಕಾರವೂ ತಪ್ಪಿಸಿಕೊಳ್ಳಲಾರದು. ಆದರೆ ವಿದ್ಯಮಾನಗಳನ್ನು ನೋಡಿಯೂ ಕಣ್ಮುಚ್ಚಿಕೊಳ್ಳುವ ಸರಕಾರಕ್ಕೆ ಯಾರೇನು ಹೇಳಬಲ್ಲರು? ಈ ವಿಷನ್ನಾವಸ್ಥೆಯಲ್ಲಿ ತಮಗೆ ಸಾಧ್ಯವಾದ ಅತ್ಯುಗ್ರ ಉಪಾಯಗಳನ್ನು ಕೈಕೊಳ್ಳಲು ತಪ್ಪುವ ಸರಕಾರ ಕರ್ತವ್ಯಚ್ಯುತವೇ ಸರಿ. ೩೨ ವರ್ಷಗಳ ಕೆಳಗೆ ಲಾರ್ಡ ಹಾರ್ಡಿಂಜರಿಂದ ಸ್ವಯಂಸ್ಫೂರ್ತವಾಗಿ ಬಂದಂತೆ ಈ ಬಾರಿ ವಾಯಿಸರಾಯರಿಂದ ಒಂದೇ ನಿಷೇಧವಾಕ್ಯವಾದರೂ ಹೊರಟಿಲ್ಲ. ಇದೀಗ ವಿಚಿತ್ರ.

ಯುಕ್ತರಾಷ್ಟ್ರಗಳು ನಿರ್ಣಯಿಸುವವು

ಹೇಗೇ ಇದ್ದರೂ ಈಪ್ರಶ್ನೆ ನಾಳೆ ಸೆಪ್ಟೆಂಬರದಲ್ಲಿ ಯುಕ್ತರಾಷ್ಟ್ರಗಳ ಸಂಘದ ಮುಂದೆ ಬರುವದೆಂದು ತಿಳಿಯುತ್ತದೆ. ಸೆಪ್ಟೆಂಬರ ಅಧಿವೇಶನದ ಪ್ರಾಥಮಿಕ ವಿಷಯ ಸೂಚಿಕೆಯಲ್ಲಿ ಇದು ಸೇರಿಸಲ್ಪಟ್ಟಿದೆ. ಜಾಗತಿಕ ಸಂಸ್ಥೆಯ ತೀರ್ಮಾನವನ್ನು ಹಿಂದುಸ್ತಾನ ಆತುರದಿಂದ ನಿರೀಕ್ಷಿಸುವದು.

ದಕ್ಷಿಣಾಫ್ರಿಕೆಯ ಹಿಂದೀ ಕಾಂಗ್ರೆಸ್ಸು ಅಲ್ಲಿ ಹೂಡಿರುವ ಈ ಸತ್ಯಾಗ್ರಹದಲ್ಲಿ ಹಿಂದುಸ್ತಾನದ ತಾನು ನಾಗರಿಕ ರಾಷ್ಟ್ರವೆಂಬ ಸ್ವಾಭಿಮಾನ, ಆತ್ಮಗೌರವಗಳೆಂಬ ಅಮೂಲ್ಯ ವಸ್ತುಗಳು ಪಣಕ್ಕೆಬಿದ್ದಿವೆ. ಟ್ರಾನ್ಸವಾಲ, ನಾತಾಳ ಅಥವಾ ದಕ್ಷಿಣ ಅಫ್ರಿಕೆಯ ಯಾವುದೇ ಭಾಗ ತಮ್ಮ ಗುತ್ತಿಗೆಯೆಂದು ಭಾವಿಸುವ ಹಕ್ಕು ಬಿಳಿಯರಿಗಿಲ್ಲ. ಈ ಹಟ ವರ್ಣದುರಭಿಮಾನದ ಪರಮಾವಧಿಯೆನಿಸುವದು. ಅದು ಮೂರನೆ ಮಹಾಯುದ್ಧದ ಬೀಜಾರೋಪಣ ಮಾಡುವಲ್ಲಿ ಸಂಶಯವಿಲ್ಲ.

ಏಶಿಯಾಕ್ಕೇ ಆಹ್ವಾನ

ಘೆಟ್ಟೋ ಕಾಯಿದೆಯನ್ನು ಮಾಡಿ ಜನರಲ್ ಸ್ಮಟ್ಸರು ಹಿಂದುಸ್ತಾನಕ್ಕೆಮಾತ್ರವಲ್ಲ ಏಶಿಯಾಕ್ಕೇ ಆಹ್ವಾನ ಕೊಟ್ಟಿದ್ದಾರೆ. ಅದನ್ನು ಸ್ವೀಕರಿಸುವದು ಪ್ರತಿಯೊಬ್ಬ ಹಿಂದೀಯನ, ಅವನು ದಕ್ಷಿಣ ಅಫ್ರಿಕೆಯಲ್ಲಿರಲಿ ಹಿಂದುಸ್ತಾನದಲ್ಲಿರಲಿ, ಕರ್ತವ್ಯವಾಗಿದೆ. ಸ್ಮಟ್ಸರನ್ನು ಇಷ್ಟು ಅವಿವೇಕಿಯನ್ನಾಗಿಯೂ ಉದ್ಧತನನ್ನಾಗಿಯೂ ಮಾಡಿದುದೇನು? ತಮ್ಮ ಮುಖ್ಯ ಮಂತ್ರಿಪದ ಹೋದೀತೆಂಬ ಭಯವೋ, ಇಲ್ಲ, ವಿಜಯೋನ್ಮಾದದಲ್ಲಿ ಈ ದೇಶ ಸಂಪೂರ್ಣ ನಿರ್ಭಯವಾಗಿದೆಯೆಂಬ ಭ್ರಾಂತಿಯೋ? ೪೦ ಕೋಟಿ ಜನರುಳ್ಳ ರಾಷ್ಟ್ರವನ್ನು ಛಲಿಸುವ ಧೈರ್ಯ ಅವರಿಗೆ ಎತರಿಂದಲೂ ಬಂದಿರಲಿ ಸ್ಮಟ್ಸರಂಥವರಿಗೆ ಇದು ಶೋಭಿಸುವದಿಲ್ಲ. ವರ್ಣಭ್ರಾಂತಿಯಲ್ಲಿ ಅವರು ಹಿಟ್ಲರನನ್ನು ಅನುಕರಿಸಿದ್ದಾರೆ. ಇತಿಹಾಸದಲ್ಲಿ ಇದಕ್ಕೆ ಬೇರಾವ ಸಾದೃಶ್ಯವೂ ದೊರೆಯುವದು ಕಠಿಣ.

ದಕ್ಷಿಣ ಅಫ್ರಿಕೆಯ ಹಿಂದೀ ನಿವಾಸಿಗಳು ಸಹಾಯಕ್ಕಾಗಿ ಮಾತೃಭೂಮಿಯ ಮುಖ ನೋಡುತಿದ್ದಾರೆ. ಹಿಂದುಸ್ತಾನವೆಲ್ಲ ದಕ್ಷಿಣ ಅಫ್ರಿಕೆಯಲ್ಲಿರುವ ತನ್ನ ದೇಶಬಾಂಧವರಿಗೊದಗಿದ ಪೀಡೆಗಾಗಿ ಸಂಕಟಪಡುತ್ತಿದೆ. ಆದರೆ ಬರಿ ದುಃಖ ಅಥವಾ ಕ್ಷೋಭದಿಂದ ಅಲ್ಲಿಯ ಹಿಂದೀಯರಿಗೆ ನಿಜವಾದ ಪ್ರಯೋಜನವಾಗದು. ವಿದೇಶಿ ಆಳಿಕೆಗೊಳಗಾದ ಒಂದು ದೇಶದ ಮಕ್ಕಳು ವಿದೇಶಗಳಲ್ಲಿ ಸಾಧುವಾದ ನಡೆವಳಿಯನ್ನು ಅಪೇಕ್ಷಿಸುವದು ಸಾಧ್ಯವಿಲ್ಲ. ಮಹಾತ್ಮಾ ಗಾಂಧಿಯವರು ದಕ್ಷಿಣ ಅಫ್ರಿಕೆಯಲ್ಲಿ ಹೋರಾಟ ನಡೆಸಿದಾಗ ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ದೊರೆಯದೆ ಇದು ಬಗೆಹರಿಯಲಾರದೆಂದು ಮನಗಂಡರು. ಅದಕ್ಕಾಗಿಯೆ ಅವರು ಸ್ವದೇಶಕ್ಕೆ ಮರಳಿ ಸ್ವಾತಂತ್ರ್ಯ ಸಾಧನೆಯ ಕಾರ್ಯದಲ್ಲಿ ಆಸಕ್ತರಾದರು.

ಕ ರ್ನಾ ಟ ಕ

ಧಾರವಾಡ

ಅಮರಗೋಳದ ಇನಾಮದಾರ ಲಿಂಗೊ ತಮ್ಮಾಜಿ ದೇಸಾಯಿ ಇವರು ಸುತ್ತಲಿನ ಜನರಿಗೆ ಅನುಕೂಲವಾಗಬೇಕೆಂದು ಅಸ್ಪತ್ರೆ ಗ್ರಾಮೋದ್ಯೋಗ ಶಿಕ್ಷಣ ಪ್ರಚಾರಕ್ಕಾಗಿ ಟ್ರಸ್ಟ ಕಮೀಟಿಯೊಂದನ್ನು ಮಾಡಿ ಹುಬ್ಬಳ್ಳಿ ಧಾರವಾಡ ರಸ್ತೆಗೆ ಹೊಂದಿ ಇರುವ ತಮ್ಮ ೨ ಎಕರೆ ಜಮೀನು ಧರ್ಮಾರ್ಥವಾಗಿ ಟ್ರಸ್ಟಿಗೆ ದಾನ ಮಾಡಿದ್ದಾರೆ.

ಗದುಗಿನ ಮುನಿಸಿಪಲ್ ಸ್ಕೂಲ ಬೋರ್ಡಿನವರು ತಮ್ಮ ಶಾಲೆಯೊಳಗಿನ ಎಲ್ಲ ಬಾಲಕರು ಹಿಂದುಸ್ತಾನ ಸ್ಕಾಟ ಸಂಸ್ಥೆಯಲ್ಲಿ ಸೇರಿ ಕೆಲಸ ಮಾಡಬೇಕೆಂಬ ಗೊತ್ತುವಳಿಯನ್ನು ಸ್ವೀಕರಿಸಿದ್ದಾರೆ.

ಹುಬ್ಬಳ್ಳಿ ಭಾರತ ಮಿಲ್ಲಿನ ಮ್ಯಾನೇಜಿಂಗ ಎಜಂಟ ಸೇಟ ಹರಿದಾಸ ಕಾಪಡಿಯಾ ಇವರು ಮುಂಬಯಿಯಲ್ಲಿ ೨೨ ನೇ ತಾರೀಕು ರಾತ್ರಿ ತಮ್ಮ ವಯಸ್ಸಿನ ೬೫ನೇ ವರ್ಷದಲ್ಲಿ ಹೃದಯವಿಕಾರದಿಂದ ನಿಧನ ಹೊಂದಿದರು. ಅದರ ನಿಮಿತ್ತ ಭಾರತ ಮಿಲ್ಲಿಗೆ ೨ ದಿನ ಬಿಡುವು ಕೊಡಲಾಗಿತ್ತು.

ನರಗುಂದ ಚರಖಾ ಸಂಘದವರು ಬರಗಾಲ ನಿವಾರಣೆಯ ಕಾರ್ಯದ ನಿಮಿತ್ತ ಚಿಕ್ಕ ನರಗುಂದ ನವಲಗುಂದ, ನರಗುಂದ ಭಾಗಗಳಲ್ಲಿ ಪರಿಶ್ರಮಾಲಯವನ್ನು ಆರಂಭಿಸಿದ್ದಾರೆ.

ಹುಬ್ಬಳ್ಳಿ ವಿದ್ಯುತ್ ಪೂರೈಕೆ ಕೆಲಸಗಾರರು ಕಳೆದ ರವಿವಾರ ದಿನ ಇಲ್ಲಿಯ ಪ್ರಮುಖ ನಾಗರಿಕರನ್ನು ಬೇರೆ ಬೇರೆ ಸಂಘದ ಪ್ರತಿನಿಧಿಗಳನ್ನು ಆಮಂತ್ರಿಸಿ ನಗರಕ್ಕೆ ವಿದ್ಯುತ್ಪೂರೈಕೆಗಾಗಿ ತಾವು ಮಾಡುತ್ತ ಬಂದ ಕಾರ್ಯಕಲಾಪಗಳನ್ನು ವಿವರಿಸಿದರು. ಹೆಚ್ಚಿನ ಎಂಜಿನುಗಳನ್ನು ತರಿಸದೆ ನಗರಕ್ಕೆ ಸಮಾಧಾನಕರವಾಗಿ ವಿದ್ಯುತ್ ಪೂರೈಸಲ್ಪಡಲಾರದೆಂದು ವ್ಯವಸ್ಥಾಪಕರು ತಿಳಿಸಿದರು. ಈ ಸಂಬಂಧದಲ್ಲಿ ನಾಗರಿಕರು ಸರಕಾರಕ್ಕೆ ಒತ್ತಾಯಪಡಿಸಿ ಹೆಚ್ಚಿನ ಎಂಜಿನು ಕೂಡಲೆ ಪೂರೈಸುವಂತೆ ನೋಡಿಕೊಳ್ಳಬೇಕೆಂದು ಗೊತ್ತಾಯಿತು.

ಹುಬ್ಬಳ್ಳಿ ಭಾರತ ಮಿಲ್ಲಿನಲ್ಲಿ ರಾಷ್ಟ್ರೀಯ ಗಿರಣಿ ಮಜದೂರ ಸಂಘವೆಂಬ ಸಂಸ್ಥೆ ಸ್ಥಾಪಿತವಾಗಿದ್ದು ಶ್ರೀ ಪಠಾಣರು ಅಧ್ಯಕ್ಷರಾಗಿಯೂ ಶ್ರೀ ಶಿವಶಂಕರಪ್ಪಾ ದೇವಪೂರ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು.

ವಿಜಾಪುರ

ವಿಜಾಪುರ ಜಿಲ್ಹೆಯ ಬದಾಮಿ ತಾಲೂಕಿನಲ್ಲಿ ಶ್ರೀ. ಹಬ್ಬು ಮತ್ತು ಸಿದ್ಧಾಂತಿಯವರು ಸಂಚರಿಸಿ ಬಂದರು. ಬರಗಾಲ ಸಂಕಷ್ಟಗಳು ಅವರ್ಣನೀಯವಾಗಿವೆ. ಈ ಭಾಗ ವಿಶೇಷವಾಗಿ ಮುಂಗಾರಿ ಪ್ರದೇಶವಿದ್ದುದರಿಂದ ಈ ವಾರವೂ ಮಳೆಯಾಗದೆ ಹೋದರೆ ೧೯೪೩ರ ಭೀಕರ ಬರಗಾಲ ಸಂಭವಿಸುವದು. ಕೆರೂರ, ಕಲ್ಲಾಪೂರ ಮೊದಲಾದ ಗ್ರಾಮುಗಳಲ್ಲಿ ನೀರಿನ ಅರಬು ಇದೆ. ಬಾಗಲಕೋಟ ತಾಲೂಕು ಮತ್ತು ಬೀಳಗಿ ಪೇಠಾದಲ್ಲಿಯೂ ಸಾಮಾನ್ಯವಾಗಿ ಪರಿಸ್ಥಿತಿಯು ಹೀಗೆಯೇ ಭೀಕರವಾಗಿದೆಂದು ಮುಂತಾಗಿ ಅವರು ತಮ್ಮ ಸಂಚಾರದ ನಂತರ ಪ್ರಸಿದ್ಧಿಸಿರುವರು.

ದೇವರ ಹಿಪ್ಪರಗಿಯ ಕಲ್ಲಪ್ಪಾ ಮಾಶ್ಯಾಳಕರ ಎಂಬ ೨೫ ವರ್ಷದ ತರುಣನು ಮಿಲಿಟರಿಯಲ್ಲಿದ್ದಾಗ ೨೪-೩-೪೬ಕ್ಕೆ ಬ್ರಹ್ಮದೇಶದಿಂದ ಹಿಂದುಸ್ತಾನಕ್ಕೆ ಬರುವಾಗ ಅಕ್ಯಾಬ ಮತ್ತು ಚಿತಗಾಂಗಗಳ ನಡುವೆ ಮುಂಚೇಲ ಹದ್ದಿಯ ಸಮೀಪಕ್ಕೆ ಹಡಗಕ್ಕೆ ಹಾನಿಯಾದ್ದರಿಂದ ೧೦ ಗಂಟೆ ಬಂಗಾಲ ಉಪಸಾಗರದಲ್ಲಿ ಈಜಿ ಪಾರಾಗಿ ಮಾತೃಭೂಮಿಗೆ ಮರಳಿ ಬಂದನು.

ಬೆಳಗಾವಿ

ಅಥಣಿ ಬರಗಾಲ ಭಾಗದ ಜನರಿಗೆ ಸಹಾಯ ಮಾಡುವದಕ್ಕಾಗಿ ಬರಗಾಲ ಪರಿಹಾರಕ ಸಮಿತಿಯೊಂದು ಸ್ಥಾಪಿತವಾಗಿದೆ. ಜಿ ಬಿ. ಕಲ್ಯಾಣಯ್ಯವರು ಅದಕ್ಕೆ ಅಧ್ಯಕ್ಷರಾಗಿಯೂ ಆರ್. ವಿ. ಕಾರವೇಕರರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ. ಇಲ್ಲಿಯ ವ್ಯಾಪಾರಿ ಸಂಘದವರು ಈ ಸಂಘಕ್ಕೆ ೫೦೧ ರೂಪಾಯಿ ಕೊಡಲು ವಾಗ್ದಾನ ಮಾಡಿದ್ದಾರೆ.

ಖಾನಾಪುರ ತಾಲೂಕ-ಅಣರೊಳ್ಳಿಯಲ್ಲಿ ಅಣ್ಣತಮ್ಮಂದಿರಲ್ಲಿ ಅಸ್ತಿಯ ಸಂಬಂಧದಲ್ಲಿ ಹೊಡೆದಾಟವಾಗಿ ವಿರುಪಾಕ್ಷಿಯೆಂಬವನ ಮರ್ಮಸ್ಥಳಕ್ಕೆ ಏಟು ಬೀಳಲು ಅವನು ಸ್ಮೃತಿ ತಪ್ಪಿ ಬಿದ್ದು ಮರಣ ಹೊಂದಿದನು.

ಬೆಳಗಾವಿಯ ೧ ನೇ ವರ್ಗ ಕೋರ್ಟಿನ ಕಾರಕೂನ ವಿ. ಎಚ್. ನರಗುಂದಕರರ ಮೇಲೆ ಲಂಚದ ಆರೋಪದ ಮೇಲೆ ಜಿಲ್ಲಾ ಮ್ಯಾಜಿಸ್ಟ್ರೇಟ ಕೋರ್ಟಿಗೆ ಚಾರ್ಜಶೀಟು ಕೊಡಲಾಗಿದೆ. ನರಗುಂದಕರರು ಇದೀಗ ಕೆಲಸದಿಂದ ನಿವೃತ್ತರಾಗಿರುವರು.

ಕಾದರೊಳ್ಳಿಯ ಶ್ರೀ ವೀರಪ್ಪ ಮರಡಿ ಎಂಬವರ ಮೇಲೆ ಇನ್ನೊಂದು ಪಕ್ಷದವರು ೨ಸಾಕ್ಷ್ಯ ಹಲ್ಲೆ ಮಾಡಿ ಗುಂಡಿಕ್ಕಿದರು ಆದರೆ ಗುರಿ ತಪ್ಪಿದ್ದರಿಂದ ಅವರ ಎಡಗೈಗೆ ಏಟು ಬಿದ್ದು ಮೂರು ಬೆರಳುಗಳು ಕತ್ತರಿಸಿ ಹೋಗಿರುವವು.

ಸ್ವಾತಂತ್ರ್ಯವೇ ಮದ್ದು

ಸಂಪೂರ್ಣ ಸ್ವಾತಂತ್ರ್ಯವೊಂದೇ ನಮಗಿರುವ ಹಾದಿಯೆಂದು ಹಿಂದೀಯರಿಗೆ ಮನವರಿಕೆ ಮಾಡಲು ಅವರು ಸಮರ್ಥರಾಗಿದ್ದಾರೆ. ಅಲ್ಪ ಸಂಖ್ಯಾಕರಾದ ಬಿಳಿಯರು ಬಹು ಸಂಖ್ಯಾಕರಾದ ಕರಿ ಮತ್ತು ಕುಂದು ಬಣ್ಣದವರನ್ನು ಆಳುವ ಬ್ರಿಟಿಶ ಸಾಮ್ರಾಜ್ಯದಲ್ಲಿ ಹಿಂದುಸ್ತಾನಕ್ಕೆ ಸ್ಥಾನವಿಲ್ಲೆಂದೂ ಅವರು ಮನಗಾಣಿಸಿದ್ದಾರೆ. ಇಂದು ದಕ್ಷಿಣ ಅಫ್ರಿಕೆಯಲ್ಲಿ ನಡೆದಿರುವದೂ ಇದೇ. ೨೦ ಲಕ್ಷದಷ್ಟೂ ಇಲ್ಲದ ಬಿಳಿಯರು ಕೇವಲ ಪಶುಶಕ್ತಿಯ ಬಲದಿಂದ ಯಾವ ನೈತಿಕ ಆಧಾರವೂ ಇಲ್ಲದೆ, ೮೦ ಲಕ್ಷ ಮೂಲ ನಿವಾಸಿಗಳ ಮೇಲೂ ೨॥ ಲಕ್ಷ ಹಿಂದೀಯರ ಮೇಲೂ ಅಧಿಕಾರ ಚಲಾಯಿಸುತಿದ್ದಾರೆ. ಅದರಲ್ಲಿಯೂ ಚಮತ್ಕಾರವೆಂದರೆ, ಈ ಉದ್ಧಟ ಯುರೋಪಿಯನ್ನರು ತಮ್ಮ ಸ್ವಂತ ಬಲದಿಂದ ಈ ಶಕ್ತಿಯನ್ನು ಪಡೆದಿರದೆ ಇಂಗ್ಲಂಡಿನಲ್ಲಿರುವ ಚಕ್ರವರ್ತಿ ಸರಕಾರದಿಂದ ಪಡೆದಿರುವರು. ಆ ಬೆಂಬಲವಿಂದು ಹಿಂತೆಗೆದುಕೊಳ್ಳಲ್ಪಟ್ಟರೆ ದಕ್ಷಿಣ ಅಫ್ರಿಕೆಯ ಸರಕಾರ ಮಳಲಿನ ಮನೆಯಂತೆ ಬಿದ್ದುಹೋಗುವದರಲ್ಲಿ ಸಂದೇಹವಿಲ್ಲ. ಅದ್ದರಿಂದ ಹಿಂದುಸ್ತಾನದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿತವಾದರೆ ಮಾತ್ರ ದಕ್ಷಿಣ ಅಫ್ರಿಕೆಯಲ್ಲಿರುವ ಹಿಂದೀಯರನ್ನು ಸಂಪೂರ್ಣ ವಿನಾಶದಿಂದ ರಕ್ಷಿಸಲು ಸಾಧ್ಯವಿದೆ.

ಕರ್ಮವೀರ ಹರಿಜನ ಪುರವಣಿ

ಸ್ವಾತಂತ್ರ್ಯ

ಪ್ರಶ್ನೆ:— ಜುಲೈ ೧೫ ನೇ ತಾರೀಕಿನ 'ಹರಿಜನ' ದಲ್ಲಿಯ 'ನಿಜವಾದ ಗಂಡಾಂತರ' ಎಂಬ ಬರಹದಲ್ಲಿ ನೀವು ಕಾಂಗ್ರೆಸ್ಸಿಗರು ಸರ್ವಸಾಮಾನ್ಯವಾಗಿ ತಮಗೆ ಬೇಕಾದ ಸ್ವಾತಂತ್ರ್ಯದ ಸ್ವರೂಪವೆಂತಹದೆಂಬುದನ್ನರಿಯರೆಂದು ಬರೆದಿರುವಿರಿ. ನಿಮ್ಮ ಅಭಿಪ್ರಾಯದಂತೆ ಸ್ವತಂತ್ರ ಹಿಂದುಸ್ತಾನದ ವ್ಯಾಪಕವಾದ ಚಿತ್ರವನ್ನು ದಯವಿಟ್ಟು ರೇಖಿಸಬಲ್ಲಿರಾ?

ಉತ್ತರ:- ಹಿಂದೀ ಸ್ವಾತಂತ್ರ್ಯದ ಬಗ್ಗೆ ಇರುವ ನನ್ನ ವಿಚಾರಗಳನ್ನು ಆಗಾಗ ಹೇಳಿರುವದಿಲ್ಲೆಂಬುದನ್ನು ನಾನರಿಯೆ. ಅದರೂ ಈ ಪ್ರಶ್ನೆ ಮಾಲೆಯಲ್ಲಿಯ ಅಂಗವಾದ್ದರಿಂದ ಪುನರುಕ್ತಿಯಾದರೂ ಚಿಂತೆಯಿಲ್ಲ ಅದಕ್ಕೆ ಮತ್ತೊಮ್ಮೆ ಉತ್ತರ ಕೊಡುವುದೊಳಿತೆಂದೆನಿಸುತ್ತದೆ.

ಹಿಂದುಸ್ತಾನದ ಸ್ವಾತಂತ್ರ್ಯವೆಂದರೆ ಇಡೀ ಹಿಂದುಸ್ತಾನದ ಸ್ವಾತಂತ್ರ್ಯ. ಹಿಂದೀ ಸಂಸ್ಥಾನಗಳು ಉಳಿದ ಫ್ರೆಂಚ ಮತ್ತು ಪೋರ್ತುಗೀಜ ಪ್ರಭುತ್ವದವರವೆಂದು ಕರೆಯಲ್ಪಡುತಿರುವ ಹಿಂದುಸ್ತಾನವನ್ನೊಳಗೊಂಡ ಸಂಪೂರ್ಣ ಹಿಂದುಸ್ತಾನದ ಸ್ವಾತಂತ್ರ್ಯ. ಕೇವಲ ಬ್ರಿಟಿಶರ ಅನುಮತಿಯಿಂದಲೆ ಇವರೆಲ್ಲ ಇಲ್ಲಿರುತಿರುವರೆಂದು ನಾನು ಭಾವಿಸುತ್ತೇನೆ. ಸ್ವಾತಂತ್ರ್ಯವು ಜನತೆಯ ಸ್ವಾತಂತ್ರ್ಯವಾಗಿರಲಿಕ್ಕೆ ಬೇಕು. ಅವರ ಮೇಲೆ ಇಂದು ಪ್ರಭುತ್ವ ನಡೆಸುತಿರುವವರ ಸ್ವಾತಂತ್ರ್ಯ ಅದಾಗಬಾರದು. ಅರಸರು ತಮ್ಮ ಅಡಳಿತದಲ್ಲಿರುವವರ ಮನದಿಚ್ಛೆಯನ್ನೆ ಅವಲಂಬಿಸತಕ್ಕದ್ದು. ಈ ರೀತಿಯಾಗಿ ಅವರು ಜನತೆಯ ಸೇವಕರಾಗತಕ್ಕದ್ದು. ಅವರ ಇಚ್ಛೆಯಂತೆ ನಡೆಯಲು ಸಿದ್ಧರಿರಬೇಕು.

ಸ್ವಾತಂತ್ರ್ಯ ಬುಡದಿಂದಲೇ ಪ್ರಾರಂಭವಾಗತಕ್ಕದ್ದು. ಈ ರೀತಿಯಾಗಿ ಪ್ರತಿಯೊಂದು ಹಳ್ಳಿ ಸಂಪೂರ್ಣ ಅಧಿಕಾರವುಳ್ಳ ಒಂದು ರಿಪಬ್ಲಿಕ ಇಲ್ಲವೆ ಪಂಚಾಯತ ಆಗುವದು. ಅಂದರೆ ಪ್ರತಿಯೊಂದು ಹಳ್ಳಿಯ ಸ್ವಯಂಪರಿಪೂರ್ಣವಾಗಿರತಕ್ಕದ್ದು. ಇಡೀ ಜಗತ್ತಿನ ವಿರುದ್ಧವಾಗಿ ಆತ್ಮರಕ್ಷಣೆ ಮಾಡಿಕೊಳ್ಳುವಷ್ಟು ಕೂಡ ಅದು ತನ್ನ ಕಾರ್ಯಕಲಾಪಗಳನ್ನು ಆಡಳಿತವನ್ನು ಸಾಗಿಸಲು ಅರ್ಹವಾಗತಕ್ಕದ್ದು. ಹೊರಗಿನಿಂದ ಆಗಬಹುದಾದ ದಾಳಿಯನ್ನು ಎದುರಿಸಿ ಆತ್ಮರಕ್ಷಣೆಯ ಪ್ರಯತ್ನದಲ್ಲಿ ಅದು ಶಿಕ್ಷಣ ಪಡೆಯುವುದಲ್ಲದೆ ಅದರಲ್ಲಿ ನಾಶ ಹೊಂದಲು ಕೂಡ ಸಿದ್ಧವಾಗುವದು. ಹೀಗೆ ಕೊನೆಯಲ್ಲಿ ವ್ಯಕ್ತಿಯೆ ಘಟಕವಾಗಿ ಪರಿಣಮಿಸುವನು. ಹೀಗೆ ಹೇಳಿದ ಕೂಡಲೆ ನೆರೆಹೊರೆಯವರ ಇಲ್ಲವೆ ಜಗತ್ತಿನ ಸಹಾಯ ಸಹಕಾರವನ್ನವಲಂಬಿಸಬಾರದೆಂದು ಅರ್ಥವಾಗುವದಿಲ್ಲ. ಪರಸ್ಪರರು ಸ್ವಯಂ ಸ್ವತಂತ್ರವಾಗಿ ಮತ್ತು ಸ್ವೇಚ್ಛೆಯಿಂದ ಆ ಬಗೆಯ ಸಹಾಯ ಪಡೆಯಬಹುದು. ಇಂಥ ಸಮಾಜವು ಅವಶ್ಯವಾಗಿ ಹೆಚ್ಚು ಸುಸಂಸ್ಕೃತವಾಗಿರಬಲ್ಲುದು. ಇದರಲ್ಲಿ ಪ್ರತಿಯೊಬ್ಬ ಸ್ತ್ರೀ ಪುರುಷನು ತನಗೇನು ಬೇಕೆಂಬದನ್ನು ತಿಳಿದುಕೊಳ್ಳುವನು. ಇದಕ್ಕೂ ಹೆಚ್ಚೆಂದರೆ ಎರಡನೆಯವರಿಗೆ ಅಷ್ಟೇ ಪರಿಶ್ರಮದಿಂದ ಯಾವದು ಸಿಗಲು ಸಾಧ್ಯವಿಲ್ಲವೊ ಅಂಥದು ಯಾರಿಗೂ ಬೇಕಾಗಲಾರದೆಂಬುದೂ ಅವರಿಗೆ ಗೊತ್ತುಂಟು.

ಈ ಸಮಾಜವು ಸ್ವಾಭಾವಿಕವಾಗಿ ಸತ್ಯ ಮತ್ತು ಅಹಿಂಸೆಯ ತಳಹದಿಯ ಮೇಲೆ ರಚಿತವಾಗಿರಲಿಕ್ಕೆ ಬೇಕು ಸ್ವಯಂಭೂ, ಸರ್ವಜ್ಞ, ಸರ್ವಾಂತರ್ಯಾಮೀ, ನಿರಾಲಂಬ ಮತ್ತು ಪ್ರಳಯಾತೀತ ಪರಮಾತ್ಮನಲ್ಲಿ ಆತ್ಯಂತಿಕ ವಿಶ್ವಾಸವಿಲ್ಲದಿದ್ದರೆ ಸತ್ಯಅಹಿಂಸೆ ಇರಲರಿಯವೆಂಬದಾಗಿ ನನ್ನ ಅಭಿಪ್ರಾಯ. ಸರ್ವಭೂತಾತ್ಮ ಚೈತನ್ಯ ಪ್ರಕಾಶದಲ್ಲಿ ವಿಶ್ವಾಸವಿಲ್ಲದಲೆ ನನ್ನ ಅಸ್ತಿತ್ವವನ್ನೆ ಹೇಳಲು ನಾನು ಸಮರ್ಥನಿಲ್ಲ.

ಅನೇಕ ಹಳ್ಳಿಗಳನ್ನೊಳಗೊಂಡ ಈ ರಾಜ್ಯಾಂಗ ರಚನೆಯಲ್ಲಿ ಯಾವಾಗಲೂ ವಿಸ್ತೃತ ವರ್ತುಲಗಳಿರುವವು, ಆರೋಹಕ ವರ್ತುಲಗಳೆಂದೂ ಇರಲಾರವು. ಜೀವನವೆಂದರೆ ಬುಡದಿಂದ ಅಗ್ರಭಾಗವನ್ನು ಹಿಡಿದುಕೊಂಡ ಸ್ತೂಪವಾಗಲಾರದು. ಆದರೆ ಅದು ಸಮುದ್ರೀಯವರ್ತುಲವು. ಅದರ ಮಧ್ಯ ಬಿಂದುವು ವ್ಯಕ್ತಿಯು; ಹಳ್ಳಿಗಾಗಿ ಯಾವಾಗಲೂ ಸಾಯಲು ಸಿದ್ಧಸಿದ್ಧ ವ್ಯಕ್ತಿಯು. ಹಳ್ಳಿಯೂ ಹಳ್ಳಿಗಳ ವರ್ತುಲಕ್ಕಾಗಿ ಸಾಯಲು ಸಿದ್ಧ. ಕೊನೆಗೆ ಎಲ್ಲವೂ ವ್ಯಕ್ತಿಗಳಿಂದ ಕೂಡಿದ ಒಂದೇ ಒಂದು ಜೀವನವಾಗುವದು. ಮದೋನ್ಮತ್ತ ದಾಳಿಗರಾಗದೆ ಯಾವಾಗಲೂ ವಿನಮ್ರರು, ಮತ್ತು ತಾವು ಯಾವ ಸಮುದ್ರೀಯವರ್ತುಲದ ಮುಖ್ಯ ಘಟಕಗಳಾಗಿರುವರೊ ಅದರ ಗೌರವದಲ್ಲಿ ಪಾಲುಗಾರರು. ಈ ಸಮಾಜ ರಚನೆಯಲ್ಲಿ ಪ್ರತಿಯೊಬ್ಬ ತನ್ನ ನೆರೆಹೊರೆಯವನ ಸೇವೆಗಾಗಿ ಬಾಳುವನು.

ಅದುದರಿಂದ ಬಾಹ್ಯ ಪರಿಘವು ಅಂತಃಪರಿಘವನ್ನು ನಾಶಮಾಡಲು ಶಕ್ತಿಯನ್ನುಪಯೋಗಿಸಲಾರದು. ಆದರೆ ಅಂತರ್ಭೂತವಾದವುಗಳಿಗೆಲ್ಲ ಶಕ್ತಿಯನ್ನು ಕೊಡುವದು ಮತ್ತು ಮಧ್ಯಬಿಂದುವಿನಿಂದ ತೇಜಶ್ಶಕ್ತಿಯನ್ನು ಪಡೆಯುತಿದೆ. ಇದೆಲ್ಲ ಕಲ್ಪನಾಸಾಮ್ರಾಜ್ಯವೆಂದು ಅನೇಕರು ನನ್ನನ್ನು ಪರಿಹಾಸಿಸಬಹುದು. ಅಣಕವಾಡಬಹುದು. ಈ ಬಗ್ಗೆ ಸ್ವಲ್ಪೂ ವಿಚಾರಮಾಡತಕ್ಕದ್ದಲ್ಲೆಂದೂ ಹೇಳಬಹುದು. ಯುಕ್ಲಿಡ್ಡನ ಬಿಂದುವನ್ನು ತೆಗೆಯಲು ಮಾನವನಿಗೆ ಸಾಧ್ಯವಿಲ್ಲದಿದ್ದರೂ ಅದಕ್ಕೆ ಅವಿನಾಶಿಯದ ಮೌಲ್ಯವಿದೆ, ಮಾನವನ ಅಸ್ತಿತ್ವಕ್ಕೆ ನನ್ನ ಚಿತ್ರವು ಮೌಲ್ಯದ್ದಾಗಿದೆ. ಈ ನಿಜವಾದ ಚಿತ್ರವನ್ನು ಸಂಪೂರ್ಣವಾಗಿ ತಿಳಿಯುವದು ಶಕ್ಯವಾಗಿರದಿದ್ದರೂ ಹಿಂದುಸ್ತಾನ ಅದಕ್ಕಾಗಿಯೆ ಬಾಳಲಿ. ನಮ್ಮ ಗುರಿಯ ಸಮೀಪಕ್ಕೆ ಹೋಗುವ ಮೊದಲು ನಮ್ಮ ಗುರಿಯಾವುದೆಂಬುದರ ಸ್ಪಷ್ಟ ಯೋಗ್ಯ ಚಿತ್ರ ನಮ್ಮ ಕಣ್ಮುಂದಿರಲಿಕ್ಕೆ ಬೇಕು. ಹಿಂದುಸ್ತಾನದಲ್ಲಿ ಪ್ರತಿಯೊಂದು ಹಳ್ಳಿಯ ಪ್ರಜಾರಾಜ್ಯ ಎಂದಾದರೂ ಸ್ಥಾಪಿತವಾಗುವದಿದ್ದರೆ ನನ್ನ ಚಿತ್ರ ಸತ್ಯಪೂರ್ಣವಾಗಿದೆಂದು ನಾನು ಹೇಳಬಲ್ಲೆ. ಅದರಲ್ಲಿ ಕೊನೆಯವನು ಮೊದಲನೆಯವನಿಗೆ ಸಮಾನನು. ಬೇರೆ ಶಬ್ದಗಳಲ್ಲಿ ಹೇಳುವದಾದರೆ ಇಂಥವನು ಮೊದಲನೆಯವನು ಇಂಥವನು ಕೊನೆಯವನು ಎಂಬುದೇ ಇರುವುದಿಲ್ಲ.

ಈ ಚಿತ್ರದಲ್ಲಿ ಪ್ರತಿಯೊಂದು ಧರ್ಮಕ್ಕೆ ಸಂಪೂರ್ಣ ಮತ್ತು ಸಮಾನ ಸ್ಥಾನವಿದೆ. ನಾವೆಲ್ಲ ಒಂದು ಭವ್ಯವೃಕ್ಷದ ಎಲೆಗಳು. ಅದರ ಬೊಡ್ಡೆಯನ್ನು ಯಾರೂ ಅಲಗಾಡಿಸರು. ಅದರ ಬೇರುಗಳು ಭೂಮಿಯ ಗರ್ಭದಲ್ಲಿ ಆಳವಾಗಿ ಹರಡಿವೆ. ಪ್ರಚಂಡ ಮಾರುತ ಕೂಡ ಅದನ್ನು ಚಲಿಸನು ಮಾನವ ಕಸಬುಗಳಿಗೆ ಅವಕಾಶ ಕೊಡದಂಥ ಮತ್ತು ಕೆಲವರ ಕೈಯಲ್ಲಿಯೆ ಅಧಿಕಾರವನ್ನು ಕೇಂದ್ರೀಕರಿಸುವಂಥ ಯಂತ್ರಗಳಿಗೆ ಇದರಲ್ಲಿ ಸ್ಥಾನವಿಲ್ಲ. ಸುಸಂಸ್ಕೃತ ಮಾನವ ಕುಟುಂಬದಲ್ಲಿ ಕಸಬಿಗೆ ವಿಶಿಷ್ಟ ಸ್ಥಾನವಿದೆ. ಪ್ರತಿಯೊಬ್ಬ ವ್ಯಕ್ತಿಗೆ ಸಹಾಯ ಮಾಡುತಿರುವ ಪ್ರತಿಯೊಂದು ಯಂತ್ರಕ್ಕೆ ಇಲ್ಲಿ ಸ್ಥಾನವಿದೆ. ಆದರೆ ಆ ಯಂತ್ರವು ದಿರಬಲ್ಲದೆಂಬುದನ್ನು ವಿಚಾರಿಸಲು ನಾನು ಪ್ರವೃತ್ತನಾಗಿಲ್ಲೆಂದು ಒಪ್ಪಲಿಕ್ಕೆಬೇಕು. ಸಿಂಗರ ಸೋಯಿಂಗ ಮಶಿನದ ಬಗ್ಗೆ ನಾನು ವಿಚಾರ ಮಾಡಿದೆ. ಆದರೆ ಅದು ಕೂಡ ಹುರಳಿಲ್ಲದ್ದಾಗಿದೆ. ನನ್ನ ಚಿತ್ರದಲ್ಲಿ ತುಂಬಲಿಕ್ಕೆ ಅದರ ಆವಶ್ಯಕತೆ ನನಗಿಲ್ಲ.

ಪ್ರಶ್ನೆ.... ನಿಮ್ಮ ಚಿತ್ರವನ್ನು ಸಾಧ್ಯಮಾಡಿಕೊಳ್ಳುವುದಕ್ಕೆ ಸೂಚಿತ ಘಟನಾ ಸಮಿತಿಯ ಉಪಯೋಗ ಮಾಡಿಕೊಳ್ಳಬಲ್ಲೆವೆಂದು ನಿಮಗೆವಿಶ್ವಾಸವಿದೆಯೇ?

ಘಟನಾಸಮಿತಿಯು ನನ್ನ ಚಿತ್ರದಲ್ಲಿಯ ಧ್ಯೇಯವನ್ನು ಸಾಧ್ಯಮಾಡಿಕೊಡಬಹುದಾಗಿದೆ. ಅದರೂ ನಾನು ಬಹಳನ್ನು ಅಶಿಸಲಾರೆ. ಸರಕಾರದ ಘೋಷಣ ಪತ್ರಿಕೆಯಲ್ಲಿ ಅಂಥ ಶಕ್ಯತೆಗಳಿರುವುದಿದಿಲ್ಲೆಂದಲ್ಲ. ಆದರೆ ಆ ಪತ್ರಿಕೆ ಕೇವಲ ಐಚ್ಛಿಕ ಸ್ವರೂಪದ್ದಿರುವದರಿಂದ ಅನೇಕ ಪಕ್ಷಗಳ ಒಪ್ಪಿಗೆ ಅದಕ್ಕೆ ಬೇಕಾಗಿದೆ. ಈ ಪಕ್ಷಗಳ ಧ್ಯೇಯ ಸಾಮಾನ್ಯವಾಗಿರುವದಿಲ್ಲ. ಸ್ವಾತಂತ್ರ್ಯದಲ್ಲಡಕವಾಗುವ ವಿಷಯಗಳ ಬಗ್ಗೆಯಾದರೂ ಕಾಂಗ್ರೆಸ್ಸಿಗರಲ್ಲಿಯೆ ಮತೈಕ್ಯವಿಲ್ಲ. ಅಹಿಂಸೆಗೆ ಇಲ್ಲವೆ ರಾಟೆಗೆ ಎಷ್ಟು ಜನರು ಬದ್ಧಪ್ರತಿಜ್ಞರಾಗಿರುವರೆಂಬದನ್ನೂ ನಾನರಿಯೆ. ವಿಕೇಂದ್ರೀಕರಣದಲ್ಲಿ ಎಷ್ಟು ಜನರಿಗೆ ವಿಶ್ವಾಸವಿದೆ? ಹಳ್ಳಿಯೆ ಮುಖ್ಯ ಕೇಂದ್ರವೆಂದು ಎಷ್ಟು ಜನ ನಂಬುತ್ತಾರೆ? ಇದನ್ನೂ ನಾನು ತಿಳಿಯೆ. ತದ್ವಿರುದ್ಧ ಹಿಂದುಸ್ತಾನ ಮೊದಲನೇ ತರಗತಿಯ ಸೈನಿಕ ರಾಷ್ಟ್ರವಾಗಬೇಕೆಂದು ಅನೇಕರು ಬಯಸುತ್ತಾರೆ. ಸದೃಢವಾದ ಕೇಂದ್ರವಿರಬೇಕು ಮತ್ತು ಅದರ ಸುತ್ತಲೂ ಇಡೀ ಕಟ್ಟಡವನ್ನು ಕಟ್ಟಬೇಕೆಂದು ಅನೇಕರು ಬಯಸುತ್ತಾರೆಂಬದು ನನಗೆ ಗೊತ್ತಿದೆ. ಈ ಕಿಕ್ಕಾಟದಲ್ಲಿ ಹಿಂದುಸ್ತಾನವು ವಿಶುದ್ಧ ಆಚಾರ ವಿಚಾರಗಳಲ್ಲಿ ಮುಖಂಡತ್ವ ವಹಿಸಬೇಕಾಗಿದ್ದರೆ ಪರಮಾತ್ಮನು ಈ ಎಲ್ಲ ದೊಡ್ಡ ಜನರ ಬುದ್ಧಿಯನ್ನು ಮಂಕುಗೊಳಿಸಿ ಹಳ್ಳಿಗಳಿಗೇ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಶಕ್ತಿಯನ್ನು ದಯಪಾಲಿಸುತ್ತಾನೆಂಬುದನ್ನು ನಾನು ಬಲ್ಲೆ.

ಪ್ರಶ್ನೆ— ಮೇಲೆ ಉದಾಹರಿಸಿದ ನಿಮ್ಮ ಲೇಖದಲ್ಲಿ ಸೂಚಿಸಿದಂತೆ ಅಂತರ ಗಂಡಾಂತರದಿಂದ ಘಟನಾ ಸಮಿತಿಯು ಮುರಿದು ಬಿದ್ದರೆ ಇಡೀ ದೇಶದ ತುಂಬೆಲ್ಲ ಸಂಪು ಹೂಡಿ ಅಹಿಂಸಾತ್ಮಕವಾಗಿ ಇಲ್ಲವೆ ಅವಶ್ಯಕ ಶಕ್ತಿಯನ್ನು ಪಯೋಗಿಸಿ ಅಧಿಕಾರವನ್ನು ವಶಪಡಿಸಿಕೊಳ್ಳುವ ವಿಕಲ್ಪವನ್ನು ಸ್ವೀಕರಿಸಲು ನೀವು ಕಾಂಗ್ರೆಸ್ಸಿಗೆ ಸಲಹೆ ಕೊಡುವಿರಾ? ಮೇಲೆ ಹೇಳಿದ್ದಕ್ಕೆ ನಿಮ್ಮ ಒಪ್ಪಿಗೆ ಇಲ್ಲದಿದ್ದರೆ ಬೇರೆ ಯಾವ ವಿಕಲ್ಪವನ್ನು ನೀವು ಸೂಚಿಸಬಯಸುತ್ತೀರಿ?

ಉತ್ತರ— ನನ್ನ ಕಣ್ಮುಂದೆ ಕತ್ತಲೆ ಕಟ್ಟುವ ಮೊದಲು ಆ ಅಂಧಃಕಾರದ ಬಗ್ಗೆ ನಾನು ವಿಚಾರ ಮಾಡತಕ್ಕದ್ದಲ್ಲ. ಅಹಿಂಸೆಯ ಪ್ರಶ್ನೆಯನ್ನು ಬದಿಗಿಟ್ಟರೂ ಸಾರ್ವತ್ರಿಕ ಸಂಪು ಮತ್ತು ಅಧಿಕಾರದ ವಶೀಕರಣದಲ್ಲಿ ಯಾವ ಸಂದರ್ಭದಲ್ಲಿಯೂ ನಾನು ಪಾಲುಗಾರನಾಗಲಾರೆನು. ಬಿಕ್ಕಟ್ಟುಂಟಾದಾಗ ನಾನೇನು ಮಾಡಬೇಕೆಂಬುದು ನನಗೆ ಗೊತ್ತಿರದಿದ್ದರೂ ಅಂಥ ಪ್ರಸಂಗ ಬಂದುದೇ ಆದರೆ ಏನು ಮಾಡಬೇಕೆಂಬ ವಿಕಲ್ಪದಿಂದ ನಾನು ತಯಾರಾಗುವೆನೆಂಬುದು ನನಗೆ ಗೊತ್ತುಂಟು. ಪರಮಾತ್ಮನೆಂದು ನಾವು ಕರೆಯುವ ಚೈತನ್ಯಶಕ್ತಿಯನ್ನೆ ನಾನು ಸಂಪೂರ್ಣವಾಗಿ ಅವಲಂಬಿಸುವುದರಿಂದ ಸಕಾಲದಲ್ಲಿಯೆ, ಒಂದು ನಿಮಿಷ ಕೂಡ ವಿಲಂಬ ಮಾಡದೆ, ಅವನು ನನ್ನ ಕೈಯಲ್ಲಿ ವಿಕಲ್ಪವನ್ನು ಕೊಡುವನು.

ಪಂಚಗಣಿ ಮೋ. ಕ. ಗಾಂಧಿ

೨೧—೭—೧೯೪೬

ವಿಷಾದಮಯ ಲಕ್ಷಣ

ಘಟನಾ ಸಮಿತಿಯಲ್ಲಿ ಇರಬಯಸಿದ ಅನೇಕರ ಪತ್ರಗಳಿಂದ ನನ್ನ ಪತ್ರ ಪೆಟ್ಟಿಗೆ ತುಂಬಿದೆ. ಈ ಪತ್ರಗಳು ಜನತೆಯ ಸಾಮಾನ್ಯಭಾವನೆಗಳ ದ್ಯೋತಕವೆಂದು ಭಾವಿಸಿದ್ದಾದರೆ, ಸುಶಿಕ್ಷಿತರು ಅಕ್ಷ ಪ್ರತಿಷ್ಠೆಗಾಗಿಯೆ ಹೆಚ್ಚು ಆತುರರಿರುವರು, ಹಿಂದುಸ್ತಾನದ ಸ್ವಾತಂತ್ರ್ಯಕ್ಕಾಗಿ ಅಲ್ಲೆಂಬ ಸಂಶಯ ನನ್ನನ್ನು ಬಾಧಿಸುತ್ತದೆ. ಚುನಾವಣೆಗಳಿಗೆ ಪ್ರಾಂತ ಪುಢಾರಿಗಳ ಅರ್ಜಿಗಳ ಸಂಬಂಧ ನನಗೆ ಸ್ವಲ್ಪೂ ಇರದಿರುವಾಗ ಇಷ್ಟೊಂದು ಅರ್ಜಿಗಳು ನನ್ನೆಡೆಗೆ ಬಂದಿವೆಂದ ಬಳಿಕ ಕಾಂಗ್ರೆಸ ಕಾರ್ಯ ಸಮಿತಿಯ ಸಭಾಸದರ ಕಡೆಗೆ ಎಷ್ಟು ಅರ್ಜಿಗಳು ಬಂದಿರಬಹುದು? ಈ ಚುನಾವಣೆಗಳಲ್ಲಿ ನಾನು ಸ್ವಲ್ಪವೂ ಮನಸುಹಾಕುವುದಿಲ್ಲೆಂಬದನ್ನು ಈ ಪತ್ರ ಲೇಖಕರು ತಿಳಿಯತಕ್ಕದ್ದು. ಇಂಥ ಅರ್ಜಿಗಳ ವಿಚಾರಣೆ ನಡೆದ ಸಭೆಗಳಲ್ಲಿ ನಾನು ಉಪಸ್ಥಿತನಾಗಿರುವದಿಲ್ಲ. ಯಾರು ಆರಿಸಲ್ಪಟ್ಟರೆಂಬುದನ್ನು ಕೇವಲ ಪತ್ರಗಳಿಂದಲೆ ನಾನು ತಿಳಿದುಕೊಳ್ಳುತ್ತೇನೆ. ಯಾರನ್ನಾರಿಸಬೇಕೆಂಬ ಬಗ್ಗೆ ಯಾವಾಗಾದರೊಮ್ಮೆ ನನ್ನ ಸಲಹೆ ಕೇಳಲಾಗುತ್ತದೆ. ನನ್ನ ಮಧ್ಯಸ್ಥಿಕೆಯ ಯಾವದೇ ಬಗೆಯ ಆಶೆ ತಾಳದೇ ಇರೆಂದು ಈ ಪತ್ರ ಲೇಖಕರಿಗೆ ಎಚ್ಚರಿಕೆ ಕೊಡುವ ಉದ್ದೇಶದಿಂದಲ್ಲ ಅದಕ್ಕೂ ಹೆಚ್ಚೆಂದರೆ ಈ ಅರ್ಜಿಗಳು ಯಾವ ಬೇನೆಯ ಲಕ್ಷಣಗಳಾಗಿವೆಯೊ ಆದರ ಕಡೆಗೆ ಲಕ್ಷವನ್ನೆಳೆಯಲು ನಾನಿದನ್ನು ಬರೆಯುತ್ತೇನೆ. ಇಂಥ ಚುನಾವಣೆಗಳಲ್ಲಿ ಜಾತೀಯತೆಯ ದೃಷ್ಟಿಯಿಂದ ವಿಚಾರ ಮಾಡುವದು ತಪ್ಪು, ಘಟನಾ ಸಮಿತಿಗೆ ಯಾವನೊಬ್ಬನು ಸಾಕಷ್ಟು ಸಮರ್ಥನಿರುವನೆಂದು ತಿಳಿಯುವದು ತಪ್ಪು, ಚುನಾವಣೆಯಲ್ಲಿ ದೊಡ್ಡದೊಂದು ಮರ್ಯಾದೆ ಇದೆಂದು ತಿಳಿಯುವದು ದೊಡ್ಡ ತಪ್ಪು, ಸೇವೆಗಾಗಿ ಯೋಗ್ಯರಿದ್ದವರ ಸೇವೆಯ ಸ್ಥಾನವದು, ಮತ್ತು ಕೊನೆಯದಾಗಿ ಘಟನಾ ಸಮಿತಿಯಿರುವ ವರೆಗೆ ಕೆಲ ರೂಪಾಯಿಗಳನ್ನು ಸಂಪಾದಿಸುವ ಸ್ಥಳವದೆಂದು ತಿಳಿಯುವದು ತಪ್ಪು. ಜಗತ್ತಿನಲ್ಲಿಯ ರಾಜ್ಯಘಟನೆಯ ಪರಿಚಯವಿದ್ದು ಮತ್ತು ಅದಕ್ಕೂ ಮಹತ್ವದ್ದೆಂದರೆ ಹಿಂದುಸ್ತಾನದ ಜನತೆಗೆ ಬೇಕಾದ ಘಟನೆಯ ಸ್ವರೂಪದ ಜ್ಞಾನವಿದ್ದವರು ಘಟನಾ ಸಮಿತಿಯ ಸ್ಯರಾಗತಕ್ಕದ್ದು. ಸಮಿತಿಯಲ್ಲಿ ಒಂದು ಸ್ಥಳ ಸಂಪಾದಿಸುವಲ್ಲಿಯೆ ನಿಜವಾದ ಸೇವೆಯಿದೆಂದು ತಿಳಿಯುವುದು ಅಧಃಪತನವು. ನಿಜವಾದ ಸೇವೆ ಹೊರಗಿದೆ. ಹೊರಗಿನ ಸೇವಾಕ್ಷೇತ್ರ ಅಮಿತವಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈಗ ರಚಿತವಾಗಲಿರುವ ಘಟನಾ ಸಮಿತಿಗೆ ಒಂದು ಸ್ಥಾನವಿದೆ. ಅದರೂ ಬಹಳ ಸಣ್ಣ ಸ್ಥಾನ; ಅದಾದರೂ ನಾವು ಜಾಣತನದಿಂದ ಮತ್ತು ನಿಸ್ವಾರ್ಥಾತ್ಮಕ ಭಾವದಿಂದ ಉಪಯೋಗಿಸಿದರೆ, ಸ್ಥಳಕ್ಕಾಗಿ ಬಡಿದಾಡಿದರೆ ಮಾತ್ರ ಅದೂ ಇಲ್ಲ. ಈ ಹಪಾಪಿಯನ್ನು ನೋಡಿದರೆ ಅದು ಸ್ಥಳಾಕ್ರಮಣಗಾರರಿಗೆ ಅದೊಂದು ಬೇಟೆಯ ಸ್ಥಳವಾಗಿ ಪರಿಣಮಿಸಬಹುದು. ಪಾರ್ಲಮೆಂಟರಿ ಚಟುವಟಿಕೆಯ ಪರಿಣಾಮವಾಗಿ ಘಟನಾ ಸಮಿತಿ ಬಂದುದೆಂದ್ಹ ಒಪ್ಪಲಿಕ್ಕೆ ನಾನು ಸ್ವತಂತ್ರನು. ದಿವಂಗತ ದೇಶಬಂಧು ಚಿತ್ತರಂಜನದಾಸ ಮತ್ತು ಪಂಡಿತ ಮೋತೀಲಾಲ ನೆಹರುರವರು ಸ್ವಾತಂತ್ರ್ಯದ ರಾಷ್ಟ್ರೀಯ ಚಟುವಟಿಕೆಯಲ್ಲಿ ಪಾರ್ಲಿಮೆಂಟರಿ ಕಾರ್ಯಕ್ರಮಕ್ಕೂ ಒಂದು ಸ್ಥಾನವಿದೆಂಬ ಸಂಗತಿಯತ್ತ ನನ್ನ ಲಕ್ಷ್ಯವನ್ನೆಳೆದರು. ಅದರ ವಿರುದ್ಧ ನಾನು ಬಹಳ ಹೋರಾಡಿದೆ. ವಿರುದ್ಧ ಅಸಹಕಾರಕ್ಕೆ ಅದು ತೀರ ವಿಸಂಗತವಾಗಿದೆಂಬುದು ನಿಶ್ಚಿತ. ಆದರೆ ವಿರುದ್ಧ ಅಸಹಕಾರ ಎಂದೂ ಕ್ಷೇತ್ರವನ್ನು ವ್ಯಾಪಿಸಲಿಲ್ಲ. ಪ್ರಾರಂಭವಾದುದೂ ಕಮರಿತು. ಕಾಂಗ್ರೆಸಜನಸಾಮಾನ್ಯರಲ್ಲಿ ಅಹಿಂಸಾತ್ಮಕ ಅಸಹಕಾರ ಸಾರ್ವತ್ರಿಕ ಪ್ರಸಾರವಾಗಿದ್ದರೆ ಪಾರ್ಲಮೆಂಟರಿ ಚಟುವಟಿಕೆಗೆ ಅವಕಾಶವೇ ಉಳಿಯುತಿರಲಿಲ್ಲ. ಕೆಟ್ಟುದರ ವಿರುದ್ಧ ಅಹಿಂಸಾತ್ಮಕ ಅಸಹಕಾರವೆಂಬುದು ಒಳಿತುದರೊಡನೆ ಸಹಕಾರವೆಂದರ್ಥ. ಅದುದರಿಂದ ಪರಕೀಯ ಸರಕಾರದಗೂಡ ಅಹಿಂಸಾತ್ಮಕ ಅಸಹಕಾರವೆಂದರೆ ಅಹಿಂಸಾತ್ಮಕ ತಳಹದಿಯಲ್ಲಿ ರಚಿತವಾದ ದೇಶೀಯ ಸರಕಾರವೆಂದು ಅವಶ್ಯ ಅರ್ಥವಾಗುವದು. ಇಂಥ ಸಂಪೂರ್ಣ ಅಸಹಕಾರವಿದ್ದರೆ ಅಹಿಂಸೆಯ

೧೦ ನೇ ಪುಟನೋಡಿರಿ

ದಲಿತವರ್ಗ

ಜುಲೈ ೬ ನೇ ದಿನ ನಾನು ಮುಂಬಯಿಯಲ್ಲಿ ಅ. ಭಾ. ಕಾಂಗ್ರೆಸ್ ಸಮಿತಿ ಸಭೆಗಾಗಿ ಮೋಟಾರಿನಲ್ಲಿ ಹೋಗುತ್ತಿದ್ದಾಗ ಒಂದು ಮುದ್ರಿತ ಕರಪತ್ರದ ಪ್ರತಿ ನನ್ನ ಕಾರಿನೊಳಗೆ ಒಗೆಯಲ್ಪಟ್ಟಿತು. ಶ್ರೀ ರಾಜಭೋಜರು ಅದರ ಇನ್ನೊಂದು ಪ್ರತಿಯನ್ನು ನನಗೆ ಶಾ ೧೦ಕ್ಕೆ ಸ್ವಹಸ್ತದಿಂದ ಕೊಟ್ಟರು. ಅದು ಅ. ಭಾ. ಕಾಂಗ್ರೆಸ್ ಸದಸ್ಯರಿಗೆ ಸಂಬೋಧಿಸಲ್ಪಟ್ಟಿದೆ. ಆ ಪ್ರಶ್ನೆಗಳನ್ನು "ಹರಿಜನ"ದಲ್ಲಿ ವಿವೇಚಿಸುವದಾಗಿ ನಾನು ಮಾತು ಕೊಟ್ಟಿದ್ದೆ. ಈಗ ನಾನು ಅದನ್ನು ಪೂರೈಸುತ್ತಿದ್ದೇನೆ.

ಕರಪತ್ರದಲ್ಲಿ ಕೇಳಲಾಗಿರುವ ಪ್ರಶ್ನೆಗಳು ಸದಸ್ಯರಿಂದ ಉತ್ತರವನ್ನು ಪಡೆಯುವಂಥವಾಗಿಲ್ಲ. ಅದ್ದರಿಂದ ಯಾವ ಸದಸ್ಯನೂ ಅವುಗಳಿಗೆ ಉತ್ತರ ಕೊಟ್ಟಿಲ್ಲವಾದರೆ ನನಗೇನೂ ಆಶ್ಚರ್ಯವಾಗದು. ಅವುಗಳಲ್ಲಿ ಕಾಂಗ್ರೆಸ್ಸಿನ ಇತಿಹಾಸದ ಅಗಾಧ ಅಜ್ಞಾನದ ಪ್ರದರ್ಶನವನ್ನು ಕಾಣಬಹುದು. ಸಂಬಂಧಪಡದ ವಿಷಯಗಳನ್ನು ವಿಚಾರಿಸುವದು ಒಂದು ವಿಶಿಷ್ಟ ಉದ್ದೇಶಕ್ಕಾಗಿ ನೆರೆದ ಜನರ ಕರ್ತವ್ಯಕಕ್ಷೆಯಲ್ಲಿ ಸೇರುವದಿಲ್ಲ. ಅದರೆ ಅಜ್ಞಾನವನ್ನು ಹೋಗಲಾಡಿಸುವದು ಪತ್ರಿಕೆಗಳ ಕ್ಷೇತ್ರದಲ್ಲಂತೂ ಬರುತ್ತದೆ. ಅದರಲ್ಲಿಯೂ ಒಂದು ವಾರಪತ್ರಿಕೆಯನ್ನು ನಡೆಸುತ್ತಿರುವ ಮತ್ತು ಸ್ವೇಚ್ಛೆಯಿಂದ ಹರಿಜನನಾದ ನನ್ನ ಪಾಲಿಗಂತೂ ಅದು ಇಮ್ಮಡಿ ಕರ್ತವ್ಯವಾಗುತ್ತದೆ.

ಪ್ರಶ್ನೆ:— ನಿಮ್ಮ ಸ್ವರಾಜ್ಯದಲ್ಲಿ ಅಸ್ಪೃಶ್ಯರ ಸ್ಥಾನವಾವುದು? ಅಲ್ಪಸಂಖ್ಯಾಕರ ರಕ್ಷಣೆಯನ್ನು ಕುರಿತು ಕಾಂಗ್ರೆಸ್ಸು ಬಹಳಷ್ಟು ಮಾತಾಡಿದೆ. ಅಲ್ಪಸಂಖ್ಯಾಕರ ರಕ್ಷಣೆಯ ಯೋಜನೆಯನ್ನೊಳಗೊಂಡ ನೀಲಪತ್ರಿಕೆಯನ್ನು ಸಿದ್ಧಗೊಳಿಸಲು ಅದು ಏಕೆ ತಪ್ಪಿತು? ಈ ಮೌನದಿಂದ ಕಾಂಗ್ರೆಸ್ಸಿನ ಸದುದ್ದೇಶದಲ್ಲಿ ಅವಿಶ್ವಾಸ ಹುಟ್ಟಲು ಅವಕಾಶವಾಗುವದಿಲ್ಲವೆ?

ಉತ್ತರ:— ನನ್ನ ಕಲ್ಪನೆಯ ಸ್ವರಾಜ್ಯದಲ್ಲಿ ಎಲ್ಲ ಬಗೆಯಿಂದಲೂ ಅಸ್ಪೃಶ್ಯರ ಸ್ಥಾನ ಸವರ್ಣ ಹಿಂದುಗಳೆನಿಸಿಕೊಳ್ಳುವವರಿಗೆ ಸಮಾನವಾದುದೇ ಇರುವದು. ಕಾಂಗ್ರೆಸ್ಸಿನ ನಿಲುವೆಯಾದರೂ ಹಾಗೆಯೆ ಇದೆ. ನನಗೆ ಗೊತ್ತಿರುವ ಬೇರಾವ ಬಹುಜಾತಿಸಂಯುಕ್ತ ಸಂಸ್ಥೆಯೂ ಅಲ್ಪ ಸಂಖ್ಯಾಕರಿಗಾಗಿ ಕಾಂಗ್ರೆಸ್ಸಿನಷ್ಟು ಕಡಿಮೆ ಮಾತಾಡಿ ಅಧಿಕ ಕೃತಿ ಮಾಡಿ ತೋರಿಲ್ಲ. ಕೃತಿಯೇ ಸಾಕ್ಷಿಯಾಗಿರುವಲ್ಲಿ ನೀಲಪತ್ರಿಕೆಯೇಕೆ?

ಪ್ರಶ್ನೆ:— ಕಾಂಗ್ರೆಸ್ಸು ಅಸ್ಪೃಶ್ಯರನ್ನು ಅಲ್ಪಸಂಖ್ಯಾಕರೆಂದು ಭಾವಿಸುವದೊ? ಶ್ರೀ ಗಾಂಧಿಯವರು ೧೯೪೬ರಲ್ಲಿ ಬರೆದ ಒಂದು "ಹರಿಜನ" ಲೇಖದಲ್ಲಿ ಹಿಂದುಸ್ಥಾನದಲ್ಲಿರುವ ನಿಜವಾದ ಅಲ್ಪಸಂಖ್ಯಾಕರೆಂದರೆ ಅಸ್ಪೃಶ್ಯರು ಮಾತ್ರ ಎಂದು ಒಪ್ಪಿಕೊಂಡಿದ್ದಾರೆ. ಮೌಲಾನಾ ಅಝಾದರು ವಾಯಿಸರಾಯರಿಗೆ ಬರೆದ ಕೊನೆಯ ಪತ್ರದಲ್ಲಿ ಅಸ್ಪೃಶ್ಯರನ್ನು ಅಲ್ಪಸಂಖ್ಯಾಕರೆಂದು ಒಪ್ಪಿಕೊಳ್ಳಲು ಕಾಂಗ್ರೆಸ್ಸು ಸಿದ್ಧವಿಲ್ಲವೆಂದು ಏಕೆ ಹೇಳಿದರು?

ಉತ್ತರ:— ಕಾಂಗ್ರೆಸ್ಸು ಅಸ್ಪೃಶ್ಯರನ್ನು ಅಲ್ಪಸಂಖ್ಯಾಕರೆಂದು ಒಪ್ಪಿಕೊಳ್ಳಲಾರದು. ಕಾರಣ ಬಹಳ ಸರಲವಾಗಿದೆ. ಪಾರ್ಸಿಗಳು, ಯಹೂದ್ಯರು, ಕ್ರಿಶ್ಚನ್ನರು, ಮೊದಲಾದವರು ಅಲ್ಪ ಸಂಖ್ಯಾಕರೆಂದು ಅನಿಸಿಕೊಳ್ಳುವ ಅರ್ಥದಲ್ಲಿ ಅಸ್ಪೃಶ್ಯರು ಅಲ್ಪಸಂಖ್ಯಾಕರಲ್ಲ. ಬ್ರಾಹ್ಮಣರೂ ಕ್ಷತ್ರಿಯರೂ ವೈಶ್ಯರೂ ಅಲ್ಪಸಂಖ್ಯಾಕರಾಗಿದ್ದರೆ ಮತ್ತು ಶೂದ್ರರು ಬಹುಸಂಖ್ಯಾಕರಾಗಿದ್ದರೆ ಅಸ್ಪೃಶ್ಯರು ಅಲ್ಪಸಂಖ್ಯಾಕರಾಗಬಹುದು. ನಾವು ಈಗ ಉಪಯೋಗಿಸುತ್ತಿರುವ ಅರ್ಥದಲ್ಲಿ ಇವರೆಲ್ಲ ಅಲ್ಪಸಂಖ್ಯಾಕರೂ ಬಹುಸಂಖ್ಯಾಕರೂ ಅಗಲಾರರು. ದುರ್ದೈವದಿಂದ ನಾವು ಆ ಗತಿಗೆ ಬಂದಿಲ್ಲ. ಆ ಗತಿಗೆ ಬಂದದಿನ ಯಾವದೇ ಬಗೆಯ ಸ್ವರಾಜ್ಯದ ಆಸೆಗೆ ನಾವು ಶರಣುಹೊಡೆಯಬೇಕಾಗುವದು. ಇಂಗ್ಲಿಷರು ಇಂದು ಹೊರಟುಹೋಗಬಹುದು, ಎಂದಾದರೊಂದುದಿನ ಹೋಗಿಯೇ ತೀರುವರು. ಅದರೆ ನಾವು ಕಾಡು ಜನರಂತೆ ಒಬ್ಬರೊಬ್ಬರ ಗಂಟಲು ಮುರಿಯತೊಡಗಿದರೆ ಕಾಡು ಜನರಿಗೆ ಒಪ್ಪುವ ಸ್ವಾತಂತ್ರ್ಯವನ್ನೇ ಪಡೆಯುವೆವು.

ಮುಂಬಯಿ ಪ್ರಾಂತಿಕ ದಲಿತ ವರ್ಗದ ಮಹಾಮಂಡಲದ ಅಧ್ಯಕ್ಷರು ತಾವು ಉಲ್ಲೇಖಿಸಿದ ೧೯೪೬ರ "ಹರಿಜನ" ಲೇಖದ ಅವತರಣಿಕೆಯನ್ನು ಎತ್ತಿಕೊಡಬೇಕಾಗಿತ್ತು. ಸಂಬಂಧಿಸಿದ "ಹರಿಜನ"ದ ಪುಟಸಂಖ್ಯೆಯನ್ನಾಗಲಿ ಸಂಚಿಕೆಯ ಸಂಖ್ಯೆಯನ್ನಾಗಲಿ ಸೂಚಿಸುವಷ್ಟು ಜರೆಯನ್ನೂ ಕೂಡ ಅವರು ತೆಗೆದುಕೊಂಡಿಲ್ಲ. ನನಗಂತೂ ನನ್ನ ಬಾಯಲ್ಲಿ ಹಾಕಿದ ಈ ಹೇಳಿಕೆಯನ್ನು ನಾನು ಎಂದೂ ಬರೆದ ನೆನಪಿಲ್ಲ. ನಾನು ೧೯೪೬ರಲ್ಲಿ ಏನೇ ಬರೆದಿರಲಿ, ಅಥವಾ ಬರೆಯದಿರಲಿ, ಮೌಲಾನಾ ಸಾಹೇಬರು ಹೇಳಿದರೆಂದು ಹೇಳಲಾದುದು ನಿಸ್ಸಂಶಯವಾಗಿಯೂ ಸರಿಯಾದ ಮಾತು.

ಪ್ರಶ್ನೆ:— ಕಾಂಗ್ರೆಸ್ಸು ಅಸ್ಪೃಶ್ಯರನ್ನು ಅಲ್ಪಸಂಖ್ಯಾಕರೆಂದು ಪರಿಗಣಿಸುವದಿಲ್ಲ, ಈ ಹೇಳಿಕೆಯ ಸಂಕೇತವೇನು? ಸದ್ಯದ ಹಿಂದುಸ್ಥಾನ ಕಾಯಿದೆಯ ಮೇರೆಗೆ ಅಸ್ಪೃಶ್ಯರಿಗೆ ದೊರೆತಿರುವ ರಾಜಕೀಯ ಸಂರಕ್ಷಣೆಗಳನ್ನು ಕೂಡ ಕಾಂಗ್ರೆಸ್ಸು ಕಸಿದುಕೊಳ್ಳುವದೆಂದು ಅದರ ಅರ್ಥವೆ?

ಉತ್ತರ:— ಅದರ ಸಂಕೇತ, ಅಸ್ಪೃಶ್ಯರು ಹಿಂದೂಗಳ ಅಂತರ್ಗತ ಅಂಗವೆಂದು. ಆದುದರಿಂದ ಅವರು ಅಲ್ಪಸಂಖ್ಯಾಕರಿಗಿಂತ ಮೇಲಿನತರಗತಿಯವರುಬಂದುವೇಳೆ ಅವರು ತಾವುಅಲ್ಪಸಂಖ್ಯಾಕರೆಂದೇ ಹಟಹಿಡಿದು ಪ್ರತ್ಯೇಕ ಜಾತಿಯಾಗಿ ಉಳಿಯಬಯಸಿದರೆ ಅವರ ಸ್ಥಾನ ಅಲ್ಪಸಂಖ್ಯಾಕರಿಗಿಂತ ಕೀಳಾಗುವದು. ಕೆಲವು "ಸುಶಿಕ್ಷಿತ ಅಸ್ಪೃಶ್ಯರು" ಮಾತ್ರ ತಾವು ಬೇರೆಯೆ ವರ್ಗವಾಗಿ ಉಳಿಯಬಹುದು. ಅದರೆ ಅಸಂಖ್ಯ ಅಸ್ಪೃಶ್ಯರು ಹಿಂದುಗಳೊಡನೆಯೆ ಉಳಿಯಬೇಕಾಗುವದು, ಇಲ್ಲವೆ ಅಳಿಯಬೇಕಾಗುವದು. ಅಸ್ಪೃಶ್ಯರೆನಿಸಿಕೊಳ್ಳುವ ಈ ಹರಿಜನರೊಡನೆ ತಮ್ಮ ದುರ್ವ್ಯವಹಾರವನ್ನು ಹೀಗೆಯೇ ಮುಂದೆಸಾಗಿಸಿದರೆ ಹಿಂದುಗಳು ಮಾನವಕುಲದ ಒಂದು ವಿಶಿಷ್ಟಶಾಖೆಯಾಗಿ ಉಳಿಯದೆ ನಿರ್ನಾಮವಾಗಿ ಹೋಗುವದು.

ಯಾವ "ರಾಜಕೀಯ ಸಂರಕ್ಷಣೆ"ಗಳು ಪ್ರಸ್ತುತ ಜಿಜ್ಞಾಸುವಿನ ಮನಸಿನಲ್ಲಿವೆಯೋ ನಾನರಿಯೆ. ಪ್ರತ್ಯೇಕ ಮತದಾನ ಪದ್ಧತಿಯೇ ಅವನ ಅಭಿಪ್ರಾಯದಲ್ಲಿದ್ದರೆ, ಈಗಿರುವಷ್ಟು ಮಟ್ಟಿಗೆ ಕೂಡ ಅದು; ಉಳಿಯತಕ್ಕದ್ದಲ್ಲ. ಅದು ಸಾಮ್ರಾಜ್ಯವಾದವೆಂಬ ಸೈತಾನನ ಕೈವಾಡ. ಅದು ಅಸ್ಪೃಶ್ಯರಿಗೆ ರಕ್ಷಣೆ ಕೊಡಲು ಉದ್ದೇಶಿಸಲ್ಪಟ್ಟ ಉಪಾಯವೇ ಅಲ್ಲ. ಅದು ಸಾಮ್ರಾಜ್ಯವಾದದ ಊರುಗೋಲು. ಪ್ರತಿಯೊಂದು ಶಾಸನಬದ್ಧ ಪ್ರತ್ಯೇಕೀಕರಣವೂ ಒಡಕು ಹುಟ್ಟಿಸಿ ಆಳುವ ನೀತಿಯ ವಿಸ್ತರಣೆಯಾಗಿದೆ. ಸಾಮ್ರಾಜ್ಯವಾದ ಯಾವದೇ ಹೊಸ ನವಿ ಹೆಸರನ್ನು ಧರಿಸಿಕೊಂಡು ಬರಲಿ, ಅದರ ರಕ್ತದಲ್ಲಿ ಅಡಕವಾದ ಗುಣವಿದು.

ಪ್ರಶ್ನೆ:— ಪ್ರಾಂತಿಕ ಶಾಸನ ಸಭೆಗಳಿಗೆ ಆರಿಸಿ ಬಂದಿರುವ ದಲಿತ ವರ್ಗದ ಹುರಿಯಾಳುಗಳು ಪ್ರಾಥಮಿಕ ಚುನಾವಣೆಗಳಲ್ಲಿ ಕಡೆಯವರಾಗಿ ಆರಿಸಿಬಂದವರೆಂದೂ ದಲಿತ ಮಹಾಮಂಡಲದ ಹುರಿಯಾಳುಗಳೇ ಪ್ರಾಥಮಿಕ ಚುನಾವಣೆಗಳಲ್ಲಿ ಅಗ್ರಗಾಮಿಗಳಾಗಿದ್ದರೆಂದೂ ಕಾಂಗ್ರೆಸ್ಸು ಒಪ್ಪುವದೋ ಒಪ್ಪುವದಿಲ್ಲವೋ? ಹಿಂದೆ ಸೋತಹುರಿಯಾಳುಗಳೇ ಅಂತಿಮ ಚುನಾವಣೆಗಳಲ್ಲಿ ಆರಿಸಿಬಂದಿದ್ದರೆ ಅದು ಸಂಪೂರ್ಣವಾಗಿ ಹಿಂದೂಗಳ ಮತಗಳ ಬಲದಿಂದಲೇ ಎಂಬುದನ್ನು ಕಾಂಗ್ರೆಸ್ಸು ಒಪ್ಪುವದೋ ಇಲ್ಲವೋ? ಮತಗಳ ಬಲದಿಂದ ಆರಿಸಿ ಬಂದ ಹುರಿಯಾಳುಗಳು ದಲಿತ ಜಾತಿಗಳ ನಿಜವಾದ ಪ್ರತಿನಿಧಿಗಳೆಂದು ಪರಿಗಣಿಸಲು ಸಾಧ್ಯವಿಲ್ಲೆಂಬದನ್ನು ಕಾಂಗ್ರೆಸ್ಸು ಅಲ್ಲಗಳೆಯಬಲ್ಲದೆ?

ಉತ್ತರ:— ಈ ಹೇಳಿಕೆಯ ಸತ್ಯಾಸತ್ಯತೆಯನ್ನು ತಾಳೆ ನೋಡಲು ಅಂಕೆ ಸಂಖ್ಯೆಗಳು ನನ್ನಲ್ಲಿಲ್ಲ. ಕೆಲವು ಪ್ರಕರಣಗಳಲ್ಲಿ ಹೊರತು ವಸ್ತುಸ್ಥಿತಿ ಸಾಮಾನ್ಯವಾಗಿ ಈ ಹೇಳಿಕೆಗೆ ವಿಪರೀತವಾಗಿದೆಯೆಂದು ನನ್ನ ತಿಳುವಳಿಕೆ.

ಸೋತ ಹುದ್ದರಿಗಳು ಯಾರು? ಅಂಥವರು ಸಂಯುಕ್ತ ಚುನಾವಣೆಗೆ ನಿಲ್ಲುವದೇ ಸಾಧ್ಯವಿಲ್ಲ. ಪ್ರಾಥಮಿಕ ಚುನಾವಣೆಯಲ್ಲಿ ಮೊದಲಿಗರಾಗಿ ಆರಿಸಿಬಂದ ನಾಲ್ಕು ಜನರೇ ಯಶಸ್ವಿ ಹುರಿಯಾಳುಗಳು, ಅವರೆ ಸಂಯುಕ್ತ ಚುನಾವಣೆಗೆ ನಿಲ್ಲಲು ಅರ್ಹರಾಗುವರು. ಪ್ರಾಥಮಿಕ ಚುನಾವಣೆಯಲ್ಲಿ ಕೊನೆಯವನಾಗಿ ಆರಿಸಿ ಬಂದವನೇ ಸಂಯುಕ್ತ ಮತದಾನದಲ್ಲಿ ಸವರ್ಣಹಿಂದೂ ಮತಗಳಿಂದ ಗೆದ್ದಿದ್ದರೆ ಅದು ನಿಜವಾಗಿಯೂ ಹೆಮ್ಮೆಯ ಮಾತು.

ಪ್ರಾಣಮಿಕ ಯಾದಿಯಲ್ಲಿ ಮೊದಲನೆಯವನಾಗಿ ಬಂದು ಸವರ್ಣ ಹಿಂದೂಗಳ ಸಾಕಷ್ಟು ಮತಗಳನ್ನು ಸಂಪಾದಿಸಲಾರದೆ ಸೋತವನೇ ದಲಿತ ಜಾತಿಗಳ ನಿಜವಾದ ಪ್ರತಿನಿಧಿಯೆಂಬ ವಾದವನ್ನು ಕಾಂಗ್ರೆಸ್ಸು ಒಪ್ಪಕೂಡದು. ಶ್ರೀ ಗಾಯಕವಾಡ ಮೊದಲಾದವರು, ಅವರು ಹಿಂದೂಗಳಾಗಿರುವಷ್ಟು ಕಾಲ, ತಮ್ಮ ಹಿಂದೂ ಸಹಬಂಧುಗಳ—ಅವರು ಸವರ್ಣೀಯರೇ ಇದ್ದರೂ—ಮತವನ್ನು ಕಡೆಗಣಿಸಬಲ್ಲರೆ? ತಾವು ಕುಳಿತ ಕೊಂಬೆಯನ್ನೇ ಅವರು ಕಡಿಯುವರೇನು? ಬೇರಾಗುವದೆಂದರೆ ಧರ್ಮಾಂತರವಾಗುವದು ಅಥವಾ ಹೊಸ ಧರ್ಮವನ್ನೇ ಸ್ಥಾಪಿಸುವದು ಎಂದು ಅರ್ಥ. ಇವೆರಡೂ ಇದ್ದ ಗೊಂದಲಕ್ಕೆ ಇನ್ನಷ್ಟು ಗೊಂದಲವನ್ನು ಸೇರಿಸುವ ಹಾದಿಗಳು.

ಪ್ರಶ್ನೆ:— ಪುಣೆಯ ಒಪ್ಪಂದದ ಕಾಲಕ್ಕೆ ಶ್ರೀಮಾನ್ ಗಾಂಧಿಯವರು, ದಲಿತವರ್ಗದವರಿಗೆ ಮೀಸಲಿರಿಸಿದ ಸ್ಥಾನಗಳಿಗೆ ಆಗುವ ಆಯ್ಕೆಯಲ್ಲಿ ಹಿಂದೂಗಳು ಕೈಹಾಕುವದಿಲ್ಲವೆಂದು ಭಾಷೆಕೊಟ್ಟಿದ್ದರು. ಈ ಭಾಷೆಯನ್ನು ಮುರಿದು ಕಾಂಗ್ರೆಸ್ಸು ಏಕೆ ವಿಶ್ವಾಸಘಾತ ಮಾಡಿತು?

ಉತ್ತರ:— ನನ್ನಲ್ಲಿ ಆರೋಪಿಸಲ್ಪಟ್ಟ ಇಂಥ ಭಾಷೆಯನ್ನು ನಾನು ಕೊಟ್ಟದ್ದೇ ಇಲ್ಲ. ನಾನು ಯಾವುದನ್ನು ಬೇಡಿ ಉಪವಾಸ ಹೂಡಿದೆನೋ ಆ ಸಂಯುಕ್ತ ಮತದಾನ ಪದ್ಧತಿ ಒಂದು ಬಗೆಯ ಹಸ್ತಕ್ಷೇಪವೇ ಆಗಿತ್ತೆಂದು ಹೇಳಬಹುದು. ಇದು ಬಿಟ್ಟು ಬೇರಾವದಾದರೂ ಹಸ್ತಕ್ಷೇಪ ಪ್ರಕೃತ ಜಿಜ್ಞಾಸುವಿನ ಅಭಿಪ್ರಾಯದಲ್ಲಿದ್ದರೆ ಅವನು ಅದನ್ನು ವಿವರಿಸಿ ಆಧಾರಕ್ಕಾಗಿ ಆ ನನ್ನ ಲೇಖದ ಅವತರಣಿಕೆಯನ್ನು ಕೊಡಬೇಕು.

ಪ್ರಶ್ನೆ:— ಲಾರ್ಡ ವೇವೆಲ್ಲರು ೧೯೪೫ ರಲ್ಲಿ ಕರೆದ ಸಿಮಲಾ ಪರಿಷತ್ತಿನಲ್ಲಿ ಕಾಂಗ್ರೆಸ್ ವಾಯಿಸರಾಯ ಕಾರ್ಯಕಾರಿ ಮಂಡಲದಲ್ಲಿ ದಲಿತ ವರ್ಗದ ಇಬ್ಬರು ಪ್ರತಿನಿಧಿಗಳಿರಲು ಆಕ್ಷೇಪನೆತ್ತಿದ್ದಿಲ್ಲ. ಈ ಬಾರಿ ಕಾಂಗ್ರೆಸ್ಸು ಈ ಪ್ರಾತಿನಿಧ್ಯವನ್ನು ಒಂದಕ್ಕೆ ಇಳಿಸಿದುದೇಕೆ? ಇದರಿಂದ ಕಾಂಗ್ರೆಸ್ಸು ಕೊಟ್ಟ ಭಾಷೆಯನ್ನು ಕಾಯಬಹುದೆಂದು ವಿಶ್ವಾಸವಿಡಲು ಸಾಧ್ಯವಿಲ್ಲ ಮತ್ತು ಕಾಂಗ್ರೆಸ್ಸಿಗೆ ನಿರ್ಣಾಯಕ ಅಧಿಕಾರ ದೊರೆತ ಕೂಡಲೆ ಅದು ತನ್ನ ವಾಗ್ದಾನಗಳನ್ನೆಲ್ಲ ಮುರಿದು, ದಲಿತ ವರ್ಗಗಳು ಸಂಪಾದಿಸಿದ ಎಲ್ಲ ರಾಜಕೀಯ ಸಂರಕ್ಷಣೆಗಳನ್ನು ಹಿಂತೆಗೆದುಕೊಳ್ಳುವದೆಂದು ಅರ್ಥವಾಗುವದಿಲ್ಲವೆ?

ಉತ್ತರ:— ಈ ಆರೋಪ ನನಗೆ ಅರ್ಥವೇ ಆಗುವದಿಲ್ಲ. ನನಗೆ ತಿಳಿದ ಮಟ್ಟಿಗೆ ಕಾಂಗ್ರೆಸ್ಸು ವಿಶ್ವಾಸಘಾತ ಮಾಡಿಲ್ಲ.

ಪ್ರಶ್ನೆ:— ಹರಿಜನ ಸೇವಕ ಸಂಘದ ಎಲ್ಲ ಕಾರ್ಯಕರ್ತರೂ ಶ್ರೀಮಾನ್ ಗಾಂಧಿಯವರೂ ಕೂಡಾ ಅಸ್ಪೃಶ್ಯತ ನಿವಾರಣೆ ಪ್ರಗತಿ ಹೊಂದಿಲ್ಲವೆಂದು ಒಪ್ಪಿಕೊಂಡಿದ್ದಾರೆ. ಬದಲಿಗೆ ಯುಗಯುಗಾಂತರಗಳಿಂದ ಅಸ್ಪೃಶ್ಯರ ಮೇಲೆ ನಡೆಯುತ್ತ ಬಂದ ಅತ್ಯಾಚಾರ ದಬ್ಬಾಳಿಕೆಗಳು ತೀಕ್ಷ್ಣತರವಾಗುತಿವೆ, ನಾನಾ ರೂಪಗಳನ್ನು ಧರಿಸಿವೆ. ಇವುಗಳಿಂದೇನಾದರೂ ಪರಿಹಾರ ದೊರೆಯಬೇಕಾಗಿದ್ದರೆ ಶಾಸನ ಸಭೆಯಲ್ಲಿ ಈ ದೂರುಗಳನ್ನು ಬಹಿರಂಗಗೊಳಿಸುವದವಶ್ಯ. ದೂರುಗಳನ್ನು ತೋಡಿಕೊಳ್ಳುವ ಈ ಕೆಲಸವನ್ನು ಪ್ರತ್ಯೇಕ ಮತದಾನದಿಂದ ಆರಿಸಲ್ಪಟ್ಟ ದಲಿತವರ್ಗಗಳ ಪ್ರತಿನಿಧಿಗಳ ಹೊರತು ಬೇರಾರೂ ಮಾಡಲಾರರೆಂದು ಯಾವ ವಿವೇಕಿ ಮನುಷ್ಯನೂ ಒಪ್ಪದಿರಲಾರ. ದಲಿತ ವರ್ಗಗಳ ಪ್ರತ್ಯೇಕ ಮತದಾನದ ಬೇಡಿಕೆಗಳನ್ನು ಕಾಂಗ್ರೆಸ್ಸು ಮಾತ್ರವೇ ಏಕೆ ವಿರೋಧಿಸುತ್ತದೆ?

ಉತ್ತರ:— ಅಸ್ಪೃಶ್ಯತಾ ನಿವಾರಣೆ ಏನೇನೂ ಪ್ರಗತಿಹೊಂದಿಲ್ಲವೆಂದು ನಾನೇನೂ ಹೇಳಿಲ್ಲ. ಹರಿಜನ ಸೇವಕ ಸಂಘವಾದರೂ ಹಾಗೆಹೇಳಿದ್ದು ನನಗೆ ಗೊತ್ತಿಲ್ಲ. ಸವರ್ಣ ಹಿಂದೂಗಳ ಮಟ್ಟಿಗೆ ಅಸ್ಪೃಶ್ಯತಾನಿವಾರಣೆ ತೃಪ್ತಿಕರವಾಗಿ ಪ್ರಗತಿ ಹೊಂದಿಲ್ಲವೆಂದು ಮಾತ್ರ ನಾವೆಲ್ಲರೂ ಒಪ್ಪಿಕೊಂಡಿದ್ದೇವೋ ನಿಜ. ಇದು ಹೊಸ ದೂರಲ್ಲ. ಬಹಳ ದಿನಗಳಿಂದ ಇದ್ದುದೆ. ತಾನು ಕೈಕೊಂಡಿರುವ ಸುಧಾರಣೆಯ ಪ್ರಗತಿಯಲ್ಲಿ ಅಲ್ಪಸಂತೋಷಿಯಾಗಿರುವ ಸುಧಾರಕನಿಗೆ ಧಿಕ್ಕಾರವಿರಲಿ. ಸುಧಾರಣೆಗೆ ಎರಡು ಮುಖಗಳಿವೆ. ಹರಿಜನರ ಮಧ್ಯದಲ್ಲಿ ಮಾಡಬೇಕಾದ ಕಾರ್ಯದ ಮಟ್ಟಿಗೆ ಸಂಘ ಸಾಕಷ್ಟು ಮುಂದುವರಿದಿದೆ. ಇದೊಂದೇ ಅಸ್ಪೃಶ್ಯತಾನಿವಾರಣೆಯ ಧ್ಯೇಯಸಾಧನೆಗೆ ಮಾಡಿದ ಉಪಕಾರ ಅಲ್ಪವಲ್ಲ. ಸ್ಪೃಶ್ಯರ ನಡುವೆ ಮಾಡತಕ್ಕ ಕೆಲಸ ಮಾತ್ರ ಆವೆ ಹರಿದಂತೆ ಸಾಗಿದೆ. ಅದು ಕಠಿಣವಾದ ಕೆಲಸ. ಆದರೂ ಅದು ದೃಢವಾದ ಪ್ರಗತಿ ಹೊಂದುತಿದೆ— ಆ ಪ್ರಗತಿಯೇನೋ ನಿಸ್ಸಂಶಯವಾಗಿಯೂ ಮಂದವಾಗಿದೆ. ಸವರ್ಣ ಹಿಂದೂಗಳ ದಬ್ಬಾಳಿಕೆ ಅತ್ಯಾಚಾರಗಳು ಹೆಚ್ಚಾಗಿವೆ, ತೀಕ್ಷ್ಣತರವಾಗಿವೆಯೆಂಬ ಮಾತು ಸರ್ವಥಾ ತಪ್ಪು. ಅದನ್ನು ಸಿದ್ಧಗೊಳಿಸುವದು ಸಾಧ್ಯವಿಲ್ಲ. ಹರಿಜನರಲ್ಲಿ ತಮ್ಮ ಮೇಲಾದ ಅನ್ಯಾಯದ ಅರಿವು ಹೆಚ್ಚುತಿದೆಯೆಂಬ ಮಾತು ಸತ್ಯ. ಅದು ಒಳ್ಳೆಯ ಸಂಜ್ಞೆ. ಸುಧಾರಕರ ಸಂಖ್ಯೆ ಬೆಳೆದುದೂ ಅವರು ಅನ್ಯಾಯದ ಬಗ್ಗೆ ತೋರುತಿರುವ ಅಸಹನೆಯೂ ಇದಕ್ಕೆ ಕಾರಣ. ಅದರೆ ಈ ವರೆಗೆ ದೊರೆತ ಸಾಫಲ್ಯದಿಂದಲೇ ಸಂತುಷ್ಟರಾಗಿ ಸುಮ್ಮನಿರುವ ಧೈರ್ಯ ಅವರಲ್ಲಿಲ್ಲ. ಅವರು ಈಗ ಹೋಗಿರುವುದಕಿಂತಲೂ ಬಹಳ ಮುಂದೆ ಹೋಗಬೇಕಾಗಿದೆ. ಇದು ಶಾಸನ ಸಭೆಗಳ ಮೂಲಕ ಸಾಧ್ಯವಾಗುವದು ಅಸಂಭವವೆಂದು ನನಗೆ ಖಚಿತವಾಗಿದೆ. ಶಾಸನ ಸಭೆಯೂ ಸ್ವಲ್ಪ ಮಟ್ಟಿಗೆ ಅವಶ್ಯ, ನಿಜ. ಆದರೆ, ನಾನು ಹಿಂದೊಂದು ಸಂಚಿಕೆಯಲ್ಲಿ ತೋರಿಸಿಕೊಟ್ಟಿರುವಂತೆ ಈ ಅನ್ಯಾಯಕ್ಕೆ ಪ್ರಾಚೀನ ರೂಢಿಯೇ ಕಾರಣ ಹೊರತು ಕಾಯದೆಯಲ್ಲ. ಶಾಸನಕ್ಕಿಂತ ರೂಢಿಯೇ ಎಂದಿಗೂ ಬಲಿಷ್ಠವಾದುದು. ಅದನ್ನು ನಿವಾರಿಸಬೇಕಾದರೆ ಜನರಿಗೆ ವಿವೇಕೋದಯ ಮಾಡಿಸುವದೊಂದೇ ಉಪಾಯ.

ಪ್ರತ್ಯೇಕೀಕರಣದಿಂದ ಪ್ರಗತಿ ಸಂಪೂರ್ಣವಾಗಿ ಕುಂಠಿತವಾಗುವದು. ಅದೊಂದು ದುಃಸ್ವಪ್ನ. ಹಿಂದೂಗಳನ್ನೂ ಅವರೊಡನೆ ದಲಿತ ಜಾತಿಗಳೆನಿಸಿಕೊಳ್ಳುವವುಗಳನ್ನೂ ನಿರ್ನಾಮ ಮಾಡುವದೇ ಪ್ರತ್ಯೇಕವಾಗುವದರ ಉದ್ದೇಶವಾಗಿಲ್ಲದಿದ್ದರೆ ಈ ಸ್ವಪ್ನವನ್ನು ತ್ಯಜಿಸಿಬಿಡಬೇಕು. ಪ್ರತ್ಯೇಕ ಮತದಾನ ಪದ್ಧತಿಯಿಂದ ದಲಿತರಿಗೆ ಅಪಪ್ರಾತಿನಿಧ್ಯ ಮಾತ್ರ ದೊರೆಕೀತು. ದಲಿತ ವರ್ಗಗಳಲ್ಲಿ ಯಾವ ಆಸಕ್ತಿಯೂ ಇಲ್ಲದ ಇತರರು ಪ್ರತ್ಯೇಕತೆಯನ್ನು ಏಕೆ ವಿರೋಧಿಸುವರು?

ಪ್ರಶ್ನೆ:— ಒಂದು ಜಾತಿಯ ಧರ್ಮಕ್ಕೂ ಅದು ಪ್ರತ್ಯೇಕ ಮತದಾನ ಪದ್ಧತಿ ಬೇಕೆಂದು ಬೇಡುವದಕ್ಕೂ ಯಾವ ಸಂಬಂಧವೂ ಇಲ್ಲ. ಒಂದೇ ಧರ್ಮವನ್ನು ಅನುಸರಿಸುವ ಜಾತಿಗಳು ಕೂಡ ಪ್ರತ್ಯೇಕ ಚುನಾವಣೆಯ ಹಕ್ಕನ್ನು ಬೇಡಿವೆ. ಯುರೋಪಿಯನ್ನರೂ ಕ್ರಿಶ್ಚನ್ನರೂ ಅಂಗ್ಲೋ ಇಂಡಿಯನ್ನರೂ ಒಂದೇ ಧರ್ಮದ ಅನುಯಾಯಿಗಳು. ಆದರೂ ಅವರೆಲ್ಲರಿಗೂ ಪ್ರತ್ಯೇಕ ಪ್ರತ್ಯೇಕ ಮತದಾನಾಧಿಕಾರವಿದೆ. ಇದಕ್ಕೆ ಯಾರೂ ಕಾಂಗ್ರೆಸ್ಸು ಕೂಡ— ಆಕ್ಷೇಪವೆತ್ತಿಲ್ಲ. ಅಂದ ಬಳಿಕ, ಇತರ ಪ್ರಸಂಗಗಳಲ್ಲಿ ಆಧಾರವಾಗಿಟ್ಟುಕೊಳ್ಳದ ಸಾಮಾನ್ಯ ಧರ್ಮದ ತಳಹದಿಯ ಮೇಲೆ ದಲಿತ ವರ್ಗಗಳ ಪ್ರತ್ಯೇಕ ಮತಾಧಿಕಾರವನ್ನು ಮಾತ್ರ ಕಾಂಗ್ರೆಸ್ಸು ಏಕೆ ವಿರೋಧಿಸಬೇಕು?

— ೯ ನೇ ಪುಟ ನೋಡಿರಿ

ಅಹಮದಾಬಾದದಲ್ಲಿ ಕಟುಕತನ

ಅಹಮದಾಬಾದದಲ್ಲಿ ಕೆಲ ದಿನಗಳಿಂದ ಕಟುಕತನವು ನಡೆದಿದೆ. ತಪ್ಪುಗಾರನಾರೆಂಬುದನ್ನು ಹೇಳುವದು ಕಠಿಣವಾಗಿದೆ. ಯಾರು ಯಾರ ಮೇಲೆ ಶಸ್ತ್ರ ಹಿರಿದರೆಂಬುದನ್ನು ಸಾರ್ವಜನಿಕರಿಗೆ ತಿಳಿಸುವುದು ಸರಕಾರದ ಧೋರಣವಲ್ಲ. ಕಾಂಗ್ರೆಸ ಸರಕಾರ ಈ ಧೋರಣಕ್ಕೆ ಬದ್ಧವಾಗಿದೆ. ಆದುದರಿಂದ ಈ ನಿಃಶಬ್ದತೆಗೆ ಸತ್ಕಾರಣಗಳಿವೆಂದು ನಾವು ನಂಬತಕ್ಕದ್ದು. ಮಗನ ಕಳ್ಳತನಕ್ಕಾಗಿ ಕಳವಳಪಡುವ ತಾಯಿಯ ವಿಷಾದಮಯ ಸ್ಥಿತಿಯಂತಿದೆ ಇದು ಅಹಮದಾಬಾದದಲ್ಲಿ ದಾಳಿಗಾರನಾರು, ಯಾರು ಹೆಚ್ಚು ಅಪರಾಧಿಯೆಂಬುದು ಪ್ರತಿಯೊಬ್ಬನಿಗೆ ಗೊತ್ತಾಗಲಿಕ್ಕೆ ಬೇಕು. ಅದನ್ನು ಹುಡುಕಿ ತೆಗೆಯುವುದೇನು ನನ್ನ ಕೆಲಸವಲ್ಲ. ನನ್ನದು ಅದಕ್ಕಿಂತ ಹಗುರಾದ ಕೆಲಸವಾಗಿದೆ.

ಪರಸ್ಪರರ ಹತ್ಯಾಕಾಂಡದಲ್ಲಿ ತೊಡಗಿರುವ ದ್ವಿಪಕ್ಷಗಳಲ್ಲಿ ಯಾವದೊಂದು ಪಕ್ಷವು ಅದನ್ನು ಬಿಟ್ಟುಗೊಡುವುದು ರಾಜಮಾರ್ಗವಾಗಿದೆ. ಆಗ ಮಾತ್ರ ನಿಜವಾದ ಶಾಂತಿ ಪ್ರಸ್ಥಾಪಿತವಾಗಬಲ್ಲದು. ಮತ್ತು ತಲೆತಿರುಕತನ ನಿಲ್ಲುವುದು. ನನ್ನ ಬಾಲ್ಯದಲ್ಲಿ ನಾನು ಮತ್ತು ನನ್ನ ಒಬ್ಬ ಕಕ್ಕನ ಮಗ "ಭಾಂಗ" ಸೇದಿದೆವು. ಮತ್ತು ಇಬ್ಬರು ಹುಚ್ಚರಂತೆ ಒಬ್ಬರನ್ನೊಬ್ಬರು ನೋಡಿ ನಗಲಿಕ್ಕೆ ಪ್ರಾರಂಭಿಸಿದೆವು. ಮದವಿಳಿದ ಬಳಿಕ ಮರುದಿನ ಮುಂಜಾನೆ ನಾವೇ ನಮ್ಮ ಕೃತಿಗಾಗಿ ನಾಚಿಗೊಂಡೆವು. ಒಬ್ಬರಿಗೊಬ್ಬರು ಮೋರೆ ತೋರಿಸದಾದೆವು. ಮೇಲಿನ ಘಟನೆ ತುಲನಾತ್ಮಕ ದೃಷ್ಟಿಯಿಂದ ಅಪಾಯಕಾರಕವಾಗಿದೆ. ಅಹಮದಾಬಾದದಲ್ಲಿ ನಡೆಯುತ್ತಿರುವುದು ಭಯಾನಕವಾಗಿದೆ.

ಉರಿಯನ್ನಾರಿಸುವ ಪ್ರಯತ್ನದಲ್ಲಿ ಮೂವರು ತರುಣರು ಅತ್ಮಾಹುತಿಯನ್ನು ಕೊಟ್ಟದ್ದು ಸಾಲದೊ? ಪುಣೆಯಲ್ಲಿಯ ಪ್ರಾರ್ಥನಾ ಸಭೆಯಲ್ಲಿ ನಾನು ಆ ಬಗ್ಗೆ ಹೇಳಿದೆ. ಅನೇಕ ಗೆಳೆಯರು ಈ ಹುತಾತ್ಮರ ಬಗ್ಗೆ ನನಗೆ ಬರೆದಿರುವರು. ನಾವು ಜಾಣರಾಗಿದ್ದರೆ ಈ ಸ್ವಾರ್ಥತ್ಯಾಗದಿಂದ ಕಿಚ್ಚು ನಂದಬಹುದಾಗಿತ್ತು. ಆದರೆ ಹಾಗಾಗಿರುವದಿಲ್ಲ ಸ್ವಾರ್ಥತ್ಯಾಗಗಳು ನಿರರ್ಥಕವಾದುವೆಂದು ಇದರರ್ಥವಲ್ಲ. ಆದರೆ ಇಂಥ ಕಿಚ್ಚನ್ನು ಆರಿಸಬೇಕಾದರೆ ಇನ್ನೆಷ್ಟೋ ಬಲಿದಾನ ಅವಶ್ಯವೆಂದು ಇದರರ್ಥ.

ಇದಕ್ಕೆ ವಿಕಲ್ಪವೆಂದರೆ ಎರಡೂ ಬಣದವರು ದಣಿಯಬೇಕು; ಅವರು ಪೋಲೀಸರ ಗುಂಡುಗಳನ್ನೆದುರಿಸಲಿಕ್ಕೆ ಬೇಕು, ಹಲವರು ತುರಂಗಕ್ಕೆ ಕಳಿಸಲ್ಪಡಬಹುದು, ಶಾಂತತೆ ಸ್ಥಾಪನೆಯಾಗುವ ಮೊದಲು ಹಲವರು ಗಲ್ಲಿಗೆ ಕೂಡ ಹೋಗಬಹುದು. ಇದು ತಪ್ಪು ದಾರಿ. ಈ ಮಾರ್ಗದಿಂದ ನಂದಿಸಲ್ಪಟ್ಟ ಕಿಚ್ಚು ಮತ್ತೆ ಭುಗಿಲ್ಲೆಂದು ಹಬ್ಬಲಿಕ್ಕೆ ಬೇಕು. ಈ ಪದ್ಧತಿಯಿಂದ ವಿಷವು ಕಡಮೆಯಾಗದು. ಅದು ಕೇವಲ ಹತ್ತಿಕ್ಕಲ್ಪಡುವದು. ದೇಹದಲ್ಲೆಲ್ಲ ಅದು ವ್ಯಾಪಿಸಿ ಹೆಚ್ಚು ಅಪಾಯವನ್ನು ಮಾಡುವದು.

ಪೋಲೀಸರು ಮತ್ತು ಅವರ ಹಿರಿಯಣ್ಣ ಸೈನಿಕರ ಸಹಾಯದಿಂದ ಸಂಸ್ಥಾಪಿಸಲ್ಪಟ್ಟ ಶಾಂತಿಯು ಪರಕೀಯ ಸರಕಾರದ [ಅಡಳಿತ] ಸೂತ್ರವನ್ನು ಬಿಗಿ ಮಾಡುತ್ತದೆ, ನಮ್ಮನ್ನು ಮತ್ತಷ್ಟು ಶಕ್ತಿವಿಹೀನಗೊಳಿಸುತ್ತವೆ. [ಇಕ]

[ಇ]ಕ್ಬಲ ಕವಿ " ಧರ್ಮ ಪರಸ್ಪರ " ಹೋರಾಟವನ್ನು ಪದೇಶಿಸುವದಿಲ್ಲ" ಎಂಬ ಸಂಸ್ಮರಣೀಯ ಸಾಲು ಬರೆದಿರುವರು. ನಮ್ಮ ಹೇಡಿತನಕ್ಕೆ ನಮ್ಮ ನಮ್ಮಲ್ಲಿ ಬಡೆದಾಡುವದಕ್ಕಿಂತ ಹೆಚ್ಚಿನ ಸಾಕ್ಷಿ ಬೇರೆ ಬೇಕೆ?

ಪ್ರತಿಯೊಂದಕ್ಕೂ ಒಂದು ಬಗೆಯ ಪದ್ಧತಿಯಿದೆ. ಪರಸ್ಪರ ಬಡೆದಾಟಕ್ಕೂ ಒಂದು ಪದ್ಧತಿಯುಂಟು. ನಮಗೆ ಬಡೆದಾಡಲಿಕ್ಕೆ ಬೇಕಾಗಿದ್ದರೆ ಪೋಲೀಸ ಮತ್ತು ಸೈನಿಕರ ಸಹಾಯವನ್ನು ನಾವೇಕೆ ಅಪೇಕ್ಷಿಸಬೇಕು? ಸೈನ್ಯವು ಹಿಂದುಸ್ಥಾನದಲ್ಲಿರುವವರೆಗೆ, ಸ್ವಚ್ಛತೆಯನ್ನಿಡುವದಕ್ಕೆ, ಪಡಘೂಮಿಗಳನ್ನು ಸಾಗು ಮಾಡುವದಕ್ಕೆ, ಇಂಥವೆ ಇನ್ನಿತರ ಕೆಲಸ ಮಾಡುವದಕ್ಕೆ ಮಾತ್ರ ಅದರ ಉಪಯೋಗ ತೆಗೆದುಕೊಳ್ಳಲಾಗುವದೆಂದು ಸರಕಾರದವರು ಸ್ಪಷ್ಟವಾಗಿ ಹೇಳತಕ್ಕದ್ದು. ನಿಜ ಕಳ್ಳಕಾಕರನ್ನು ಹಿಡಿಯುವದಕ್ಕಾಗಿ ಮಾತ್ರ ಪೋಲೀಸರ ಉಪಯೋಗ ಮಾಡಿಕೊಳ್ಳತಕ್ಕದ್ದು. ಜಾತೀಯ ದೊಂಬಿಗಳನ್ನು ಶಾಂತಗೊಳಿಸುವದಕ್ಕೆ ಪೋಲೀಸ ಸೈನಿಕರನ್ನುಪಯೋಗಿಸತಕ್ಕದ್ದಲ್ಲ.

ಅಹಮದಾಬಾದದ ಜನತೆ ಹೇಡಿಗಳಾಗದೆ ಸಾಕಷ್ಟು ಶೂರರಾಗಿ ಪೋಲೀಸ ಮತ್ತು ಸೈನಿಕರ ಸಹಾಯವನ್ನೆ ಬಿಟ್ಟು ಬಿಡಲಿ. ಕತ್ತಲೆಯಲ್ಲಿ ತಮ್ಮ ದುಷ್ಕೃತ್ಯಗಳನ್ನು ಮಾಡುತಿರುವ ಪುಂಡರೆ ಹೆಚ್ಚಾಗಿ ದೊಂಬಿಗಾರರು. ಹೆಚ್ಚಿನ ತಿವಿತಗಳೆಲ್ಲ ಕತ್ತಲೆಯಲ್ಲಿ ಸಂಭವಿಸಿವೆಂದು ನನಗೆ ಹೇಳಲಾಗಿದೆ. ಎದೆಯಲ್ಲಿ ಆದ ತಿವಿತಗಳು ಬಹಳ ಕಡಮೆ ಇಲ್ಲೆಂದೂ ಹೇಳಬಹುದು. ಇಂಥ ಜನರಿಗಾಗಿ ಏಕೆ ಅಂಜತಕ್ಕದ್ದು? ತಮ್ಮ ಸ್ವಾರ್ಥತ್ಯಾಗದಿಂದ ಅವರಲ್ಲಿ ಸದ್ಬುದ್ಧಿಯುಂಟಾಗಬಹುದೆಂಬ ಆಸೆಯಿಂದ ಇಂಥವರ ಕೈಯಿಂದ ಮರಣ ಹೊಂದಲು ಧೈರ್ಯಗೊಳ್ಳಬೇಕು. ಯಾರೊಬ್ಬರಿಗೆ ಇಷ್ಟೊಂದು ಧೈರ್ಯವಿಲ್ಲದಿದ್ದರೆ ಹೋರಾಡಿ ಆತ್ಮರಕ್ಷಣೆ ಮಾಡಿಕೊಳ್ಳಬೇಕು. ಗೊತ್ತಾಗದಂತೆ ಹಿಂದಿನಿಂದ ಯಾರು ತಿವಿಯುವರೋ ಅಂಥವರ ಗೂಡ ಹೇಗೆ ಹೋರಾಡಬೇಕೆಂದು ಕೇಳಬಹುದು. ಇಂಥ ತಿವಿತಗಳನ್ನು ತಪ್ಪಿಸುವುದು ಶಕ್ಯವಾಗಲಿಕ್ಕಿಲ್ಲ. ಆದರೆ ಪ್ರೇಕ್ಷಕರೂ ಈ ಕೇಡಿಗಳೊಡನೆ ಕೂಡಿಕೊಂಡಿರದಿದ್ದರೆ ಮತ್ತು ಅವರು ಧೈರ್ಯಶಾಲಿಗಳಾಗಿದ್ದರೆ ಅಪರಾಧಿಗಳನ್ನು ಅವರು ಹಿಡಿಯುವರು ಮತ್ತು ಅವರನ್ನು ಪೋಲೀಸರಿಗಾಗಲಿ ಇಲ್ಲವೆ ಯಾವ ಜಾತಿಗೆ ಅವರು ಸೇರಿರುವರೋ ಆ ಜಾತಿಯವರಿಗಾಗಲಿ ಅವರನ್ನು ಒಪ್ಪಿಸುವರು. ಇಲ್ಲವೆ ಜನತೆಯು ಪಂಚಾಯತಿಗೆ ಅವನನ್ನು ಗುರಿ ಮಾಡುವರು ಅವರು ಕಾಯದೆಯನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳಬಾರದು ಮಾತ್ರ

ಪಂಚಗಣಿ ಮೋ. ಕ. ಗಾಂಧಿ

೨೨-೭-೪೬ (ಹರಿಜನ ಬಂಧುವಿನಿಂದ)

ವಾರದ ಪತ್ರ

ನಾವಿಲ್ಲಿಗೆ ಬಂದು ತಲುಪಿದಾಗ ಹವೆ ಸೊಂಪಾಗಿತ್ತು. ಬಿಸಿಲು ಮೋಡಗಳ ಕಣ್ಣುಮುಚ್ಚಾಲೆ ನಡೆದಿತ್ತು, ಗಾಳಿ ತಂಪಾಗಿಯೂ ಹಿತಕರವಾಗಿಯೂ ಇತ್ತು. ನಿರ್ಜನ ಶಿಖರಗಳಲ್ಲಿ ಸತಂದ್ರ ಸ್ತಬ್ಧತೆಯನ್ನು ಹೊತ್ತ ಸುತ್ತುವರಿದ ಗುಡ್ಡಗಳು ಚಿತ್ರವಿಚಿತ್ರ ಆಕೃತಿಗಳಿಂದೊಡಗೂಡಿ ಆಕಾರ ಶುದ್ಧವಾಗಿ ಹಸುರು ಹಳದಿ ಹೂವುಗಳನ್ನು ಬಿಡಿಸಿದ ಸುಂದರ ರತ್ನಕಂಬಳಿಯನ್ನು ಹಾಸಿದಂತೆ ಕೆಳಗೆ ಕಂದರಗಳಲ್ಲಿ ಹಬ್ಬಿದ ಹೊಲ ಪಳ್ಳಿಗಳು, ಇವುಗಳ ಮೋಹಕ ದೃಶ್ಯ ಯಾರನ್ನಾದರೂ ಮನೆಯಿಂದ ಹೊರಗೆ ಸೆಳೆಯುವಂತಿದ್ದವು. ಅದರೆ ಗಾಂಧೀಜಿ ಹಗಲೆಲ್ಲ ಇನ್ನೂ ಬಾರದ ಮಳೆಗೆ ಬಾಯಿಬಿಡುತಿದ್ದ ಛತ್ರದ ಪೈರಿನ ಚಿಂತೆಯಲ್ಲಿ ಮುಳುಗಿ ಆ ಸೌಂದರ್ಯಾನುಭೂತಿಯನ್ನು ಹಾಳು ಮಾಡಿಕೊಂಡರು. ಅವರ ಪ್ರಾರ್ಥನೆಗೆ ಮನಸೋತೋ ಏನೋ ಈಚೆಗೆ ಮಳೆ ಸುರಿಯತೊಡಗಿದೆ. ಮತ್ತು ಎಲುಬಿನ ವರೆಗೂ ನುಗ್ಗಿ ನಡುಕ ಹುಟ್ಟಿಸುವ ಬಿರುಸಾದ ಗಾಳಿಯೂ ವ್ಯಗ್ರವಾದ ಹವೆಯೂ ಎಲ್ಲರನ್ನೂ ಮನೆಯಲ್ಲಿಯೇ ಬಂಧಿಸಿಡುತಿವೆ. ಅದರೆ ಗಾಂಧೀಜಿಗೆ ಅದರಲ್ಲೇ ಸುಖ. ಸಮೃದ್ಧವಾದ ಸುಗ್ಗಿ ಬಂದು ಯೋಗ್ಯ ಕಾಲದಲ್ಲಿ ಬಡ ರೈತರ ಕಣಜನ್ನು ತುಂಬುವದೆಂಬ ನಿರೀಕ್ಷೆಯಿಂದ ಅವರು ಆನಂದಕುಂದಿಲರಾಗಿದ್ದಾರೆ.

ಟಪಾಲು ಸಂಪಿನ ಪುಣ್ಯದಿಂದ, ದಿನವೂ ಬಂದು ಒಟ್ಟುತಿರುವ ಪತ್ರಗಳ ರಾಶಿಯಿಂದ, ಅದೂ ಕಳೆದ ವಾರದಲ್ಲಿ, ಸ್ವಲ್ಪ ಮಟ್ಟಿಗೆ ದೊರೆತ ಬಿಡುಗಡೆ ಬಹಳ ಸ್ವಾಗತಾರ್ಹವಾಗಿತ್ತು. ಅದರೆ ಈ ವಾರ ಆಗಂತುಕರ ಹರಿಗಡಿಯದ ಧಾರೆಯೊಂದು ಹರಿಯುತ್ತ ಹೊತ್ತು ಹಾರುತಿರುವದೋ ಎನಿಸುವಂತೆ ಮಾಡುತಿದೆ. ಮೊದಲು ಲುಯಿ ಫಿಶರರು ಬಂದರು. ಅವರು ಗಾಂಧೀಜಿಯೊಡನೆ ನಡೆಸಿದ ಸಂಭಾಷಣೆಯ ತುಣುಕುಗಳು ಮುಂದೆ ಈ ಪತ್ರಿಕೆಯಲ್ಲಿ ಬರಲಿವೆ. ಅನಂತರ ಶ್ರೀ ಜಯಪ್ರಕಾಶ ನಾರಾಯಣ ಮತ್ತು ಅವರ ಸಂಗಡಿಗರು, ಔಂಧದ ರಾಜಾಸಾಹೇಬರು ಮತ್ತು ಅಪ್ಪಾಸಾಹೇಬ ಪಂತರು ಶ್ರೀ ಶಂಕರರಾವ ದೇವ ಹಾಗು ಇತರರೊಡನೆ ಬಂದರು; ಆ ಮೇಲೆ ಈ ಪ್ರಾಂತದಲ್ಲಿ ರಾಬಿನ್‌ಹುಡ್ ಎಂಬ ಅಡ್ಡ ಹೆಸರು ಪಡೆದ ನಾನಾ ಪಾಟೀಲರು, "ನಮಗೊಂದು ಸಂದರ್ಭ ಕೊಡಿರಿ" ಎಂದು ಗಾಂಧೀಜಿಯ ಮನವೊಲಿಸಲು ಪ್ರಯತ್ನಿಸಿದ ಒಬ್ಬ ಆ. ಹಿಂ. ಸೇನೆಯ ಸೈನಿಕ, ಮತ್ತು ದಕ್ಷಿಣ ಆಫ್ರಿಕೆಯ ಹಿಂದೀ-ವಿರೋಧಿ ದುರ್ವ್ಯಾಪಾರವನ್ನು ಅನುಕರಿಸುವಂತೆ ತೋರುವ ಪೂರ್ವ ಆಫ್ರಿಕೆಯಿಂದ ಬಂದ ಶಿಷ್ಟಮಂಡಲದವರು ಗಾಂಧೀಜಿಯನ್ನು ಕಂಡರು. ಅದರೆ ಈ ವಿಷಯಗಳ ವಿವರಣೆಯನ್ನು ಮುಂದಿನ ವಾರದವರೆಗೆ ತಳ್ಳಬೇಕಾಗಿದೆ.

ಸಂಜೆಯ ಪ್ರಾರ್ಥನಾಸಭೆಗಳು ಎಂದಿನಂತೆ ಪಾರ್ಸಿ ಹೆಣ್ಣುಮಕ್ಕಳ ಹಾಯಸ್ಕೂಲ ಭವನದಲ್ಲಿ ಜರಗುತ್ತಿವೆ. ಪ್ರಾರ್ಥನೆಯ ಆದಿಯಲ್ಲಿ ವಿದ್ಯಾರ್ಥಿನಿಯರಿಂದ ಜೆಂಡ ಅವೆಸ್ತಾದ ಒಂದು ಪದ್ಯ ಹಾಡಲ್ಪಡುವದು. ಮುಂದೆ ಒಂದು ಗುಜರಾತಿ ಹಾಡು. ಗಾಂಧೀಜಿಯ ಪ್ರಾರ್ಥನೋತ್ತರ ಉಪದೇಶಕ್ಕೆ ಇವೇ ಮೂಲ ವಸ್ತುಗಳಾಗುವವು. ಒಮ್ಮೊಮ್ಮೆ ಪ್ರಾರ್ಥನೆಯ ಬೋಧೆಗೆ ದೃಷ್ಟಾಂತರೂಪವಾಗಿ, ಅಥವಾ ಅದರ ಅರ್ಥವಿಸ್ತಾರಕ್ಕಾಗಿ ವಿದೇಶಿ ಅಥವಾ ಹಿಂದೀ ಸುದ್ದಿಗಳನ್ನು ಉಪಯೋಗಿಸಲಾಗುತ್ತದೆ. ಪ್ರಾರ್ಥನೋತ್ತರ ಉಪದೇಶಗಳಿಂದ ಕೆಲವು ಆಯ್ಕೆಗಳನ್ನು ಈ ಕೆಳಗೆ ಕೊಡಲಾಗಿದೆ—

"ಇಂದು ಹಾಡಿದ ಹಾಡಿನಲ್ಲಿ ಭಕ್ತನು ಹೇಳುತ್ತಾನೆ, 'ನನ್ನ ಹೃದಯವನ್ನು ನಿರ್ಮಲವಾಗಿರಿಸು, ನನ್ನನ್ನು ಸತ್ಯದ ಹಾದಿಯಲ್ಲಿ ಕೈಹಿಡಿದು ನಡೆಸು. ಸತ್ಯಸಂಧತೆಯಿಂದ ಉದ್ಭವಿಸುವ ಪಾರಮಾರ್ಥಿಕ ಆನಂದವನ್ನು ನನಗೆ ಕೊಡು. ಸತ್ಯ ಪರಿತ್ಯಾಗದಿಂದ ಹುಟ್ಟುವ ಕ್ಲೇಶವನ್ನು ನಾಶ ಮಾಡು. ೬೦ ವರ್ಷಗಳ ಸ್ವಂತ ಅನುಭವದ ನಂತರ, ಸತ್ಯಪಥವನ್ನು ತ್ಯಜಿಸುವದೊಂದೆ ನಿಜವಾದ ವಿಪತ್ತೆಂದು ನಾನು ಹೇಳಿದರೆ ನೀವು ನಂಬಲಾರಿರಾ? ಇದನ್ನಷ್ಟು ನೀವು ಮನಗಂಡರೆ, ಸತ್ಯದ ಹಾದಿಯಲ್ಲಿ ಸಾಗುತಿರುವಾಗ ಎಂಥ ಪರೀಕ್ಷೆಗಳೂ ಕಷ್ಟಗಳೂ ಬಂದೊದಗಿದರೂ ಅವುಗಳಿಂದ ಎದೆಗುಂದದೆ ದೃಢವಾಗಿ ಮುಂದುವರಿಯುವ ಶಕ್ತಿಯನ್ನು ಕೊಡೆಂದಿಷ್ಟೇ ದೇವರಲ್ಲಿ ನೀವು ನೊರೆಯುದುವಿರಿ."

ಇನ್ನೊಂದು ಹೀಗಿತ್ತು:— "ಜೆಂಡಅವೆಸ್ತಾದ ಈ ಶ್ಲೋಕ ಐದು ಬಗೆಯ ವೈದ್ಯರನ್ನು ಬಣ್ಣಿಸುತ್ತದೆ. ಅದರೆ ಐದನೆಯವನೇ ನಿಜವಾದ ವೈದ್ಯ. ಅವನು ರೋಗಪರಿಹಾರಕ್ಕೆ ಭಗವಂತನ ನಾಮವೊಂದನ್ನು ಬಿಟ್ಟು ಬೇರಾವುದನ್ನೂ ಅವಲಂಬಿಸುವದಿಲ್ಲ. ನಾನು ನೈಸರ್ಗಿಕ ಚಿಕಿತ್ಸೆಯನ್ನು ಕುರಿತು ಹೇಳುತಿರುವದಾದರೂ ಇದೇ. ರಾಮನಾಮವೇ ಸರ್ವೋತ್ತಮ ಔಷಧ. ಇದಕ್ಕೆ ಪ್ರಮಾಣವಾಕ್ಯ 'ಗಾಥೆ'ಯಲ್ಲಿ ದೊರೆಕಿದ್ದು ನೋಡಿ ನನಗೆ ಸಾನಂದಾಶ್ಚರ್ಯವಾಗಿದೆ."

"ಈಗ ಹಾಡಲ್ಪಟ್ಟಿರುವ ಗೀತದಲ್ಲಿ" ಇನ್ನೊಂದು ಸಲ ಗಾಂಧೀಜಿ ಹೇಳಿದರು. "ದೇವರು ಅದೃಶ್ಯನಾದರು ಸರ್ವತ್ರವ್ಯಾಪಿಯಾಗಿದ್ದಾನೆಂದು ಕವಿ ಹೇಳುತ್ತಾನೆ. ಅದು ನಿಜ. ನಮ್ಮ ಗೂಢಾತ್ ಗೂಢತರ ಆಲೋಚನೆಗಳನ್ನು ನಮಗಿಂತಲೂ ಚನ್ನಾಗಿ ಅವನು ಅರಿತಿರುವನು. ದೇವರ ಮೇಲೆ ಭಾರ ಹಾಕಿದ ಮನುಷ್ಯನು ಯಾರಿಗೂ-ಜಗತ್ತಿನಲ್ಲೆಲ್ಲ ಅತ್ಯಂತ ಸ್ವೇಚ್ಛಾನುವರ್ತಿ ಸರಕಾರಕ್ಕೂ ಅದರ ಅಧಿಕಾರಿಗಳಿಗು ಕೂಡ-ಎಂದಿಗೂ ಹೆದರಲಾರ. ಏಕೆಂದರೆ ಅವನ ರಕ್ಷಣೆಗೆ ಸರ್ವಸಾಕ್ಷಿಯಾದ ರಾಜರ ರಾಜನೇ ನಿಂತಿರುವನು"

ತಾ. ೨೦ ನೇ ದಿನ ಅವರು ಉಪದೇಶ ಕಾಲದಲ್ಲಿ ಹೇಳಿದುದು ಗಾಥೆಯ ಶ್ಲೋಕ ಹೇಳುತ್ತದೆ. 'ನಾನು ನನ್ನ ಹೃದಯವನ್ನು ಸಚ್ಚಿಂತನೆಗಳಿಂದ ಪರಿಶುದ್ಧವಾಗಿರಿಸುವ ಮೂಲಕ, ಸದ್ವಿವೇಕಯುಕ್ತ ಕೃತಿಗಳ ಮೂಲಕ ಮತ್ತು ಉಚಿತ ಭಾಷಣದ ಮೂಲಕ ನಿನ್ನನ್ನು ಸ್ಮರಿಸುವಂತಾಗಲಿ. ಈ ಎಲ್ಲ ಅವಶ್ಯಕತೆಗಳನ್ನು ಪೂರೈಸದೆ ಯಾರೂ ಭಗವಂತನ ಸಾಮೀಪ್ಯವನ್ನು ಸೇರುವ ಆಶೆಯನ್ನು ಇಟ್ಟುಕೊಳ್ಳಲಾರ.

"ಆ ಮೇಲೆ ಕವಿ ಹೇಳುವ, 'ನಿನಗೆ ವಂದಿಸುವೆವು, ನಮಗಾಗಿ ನೀನು ಎಷ್ಟೆಲ್ಲ ಮಾಡಿರುವೆ ಅದಕ್ಕಾಗಿ ನಾವು ಕೃತಜ್ಞರು. ನಾವೆಂದೆಂದೂ ನಿನಗೆ ಋಣಿಗಳಾಗಿಯೆ ಉಳಿಯುವೆವು.' ದೇವರಿಗೆ ನಾವು ಸಲ್ಲಿಸಬೇಕಾದ ಈ ಋಣ, ಸಾಲ ಯಾವುದು, ಅದನ್ನು ಹೇಗೆ ಸಲಿಸಬಹುದು? ನಮ್ಮ ಕರ್ತವ್ಯವನ್ನು ಪರಿಪೂರ್ಣವಾಗಿ ಪಾಲಿಸುವದರಿಂದ ಜನನ ಮರಣಗಳ ವಶವರ್ತಿಯಾದ ಯಾವ ಮನುಷ್ಯನೂ ತನ್ನ ಕರ್ತವ್ಯವನ್ನು ಪರಿಪೂರ್ಣವಾಗಿ ಪಾಲಿಸಲಾರನಾಗಿ ಅವನು ಎಂದೆಂದಿಗೂ ಪರಮಾತ್ಮನಿಗೆ ಋಣಿಯಾಗಿಯೆ ಉಳಿಯಬೇಕಾಗುವದು."

"ಒಂದು ಗಿಡಕ್ಕೆ ಹಲವು ಕೊಂಬೆಗಳಿದ್ದರೂ ಒಂದೇ ಬೇರಿರುವಂತೆ ಬೇರೆ ಬೇರೆ ಧರ್ಮಗಳು ಒಂದೇ ಗಿಡದ ಟೊಂಗೆ ಕೊಪ್ಪಲುಗಳು," ಎಂದು ಗಾಂಧೀಜಿ ಇನ್ನೊಂದು ಸಂದರ್ಭದಲ್ಲಿ ಉಪದೇಶಿಸಿದರು. ಇಸ್ಲಾಂ, ಕ್ರಿಸ್ತಮತ, ಹಿಂದೂ ಧರ್ಮ, ಝರತುಷ್ಟ್ರಮತಗಳು ಮುಖ್ಯ ಶಾಖೆಗಳಾಗಿದ್ದರೂ ಧರ್ಮಗಳ ವೈವಿಧ್ಯ ಮನುಷ್ಯರಷ್ಟೇ ಅಸಂಖ್ಯವಾಗಿದೆ. ಪ್ರಾರ್ಥನಾ ಸಮಾಜದಲ್ಲಿ ದೇವರ ಹೆಸರು ಉಚ್ಚರಿಸಿ ಹೊರಬಿದ್ದೊಡನೆ ಅದನ್ನೆಲ್ಲ ಮರೆತುಬಿಟ್ಟರೆ ಅದು ಪ್ರಾರ್ಥನೆಯಲ್ಲ, ಪರಮಾತ್ಮನಿಂದೆ. ಧರ್ಮವನ್ನು ನಮ್ಮ ಜೀವನದ ಪ್ರತಿ ನಿಮಿಷದಲ್ಲಿಯೂ ಆಚರಿಸಿಯೇ ತೋರಿಸಬೇಕಾಗಿದೆ."

"ಹುಡುಗಿಯರು ಕೈಮುಗಿದು 'ಓ ಮಝ್ದಾ! ನನಗೆ ಸತ್ಯವಾದ ಜ್ಞಾನವನ್ನು ದಯಪಾಲಿಸಿ, ನಿನ್ನ ಸೃಷ್ಟಿಯ ಸೇವೆಯಲ್ಲಿ ನನ್ನ ಜೀವನದ ಪ್ರತಿ ಕ್ಷಣವನ್ನು ಸವೆಸುವ ಶಕ್ತಿಯನ್ನು ನೀಡು,' ಎಂದು ಹಾಡಿದ್ದಾರೆ. ಇದೊಂದು ಮಹಾ ಪ್ರಾರ್ಥನೆ. ಸೇವೆಯೆಂಬುದು ಕರ್ತವ್ಯ ಭಾರವೆನಿಸದೆ ಒಂದು ಆನಂದವಿಲಾಸವಾಗುವಂತೆ ಸೇವೆಯ ಉತ್ಕಟೇಚ್ಛೆಯನ್ನು ದೇವರಲ್ಲಿ ಭಕ್ತನು ನೊರೆಯುಟ್ಟಿದ್ದಾನೆ. ಅದರೆ ಸೇವೆಯ ಅರ್ಥವೇನು? ಉದಾಹರಣೆಗಾಗಿ ಯುದ್ಧದಲ್ಲಿ ಮಾನವ ಬಂಧುಗಳನ್ನು ಕೊಲ್ಲುವುದೂ ಒಂದು ಸೇವೆಯೇ? ಅಲ್ಲ. ಅದುದರಿಂದ ಭಕ್ತನು ಹೇಳುತ್ತಾನೆ: 'ನಾನು ಅನ್ಯರ ಅಥವಾ ಸ್ವಂತದ ಸೇವೆಯಲ್ಲಿ ಏನೇನು ಮಾಡುವೆನೋ. ಕೃತಿಗಳೆಲ್ಲ ಶುದ್ಧವೂ ಉದಾತ್ತವೂ ಆಗಿರಲಿ. ಅವು ನನ್ನಲ್ಲಿ ನಿನ್ನ ಆನಂದವನ್ನು ತುಂಬಲಿ.' ಯಾವನು ಈ ಪ್ರಾರ್ಥನೆಯನ್ನು ಅನುಸರಿಸಿ ತನ್ನ ಜೀವನವನ್ನು ರೂಪಿಸುವನೋ ಅವನು ಯಾವಾಗಲೂ ಆತನ ಆನಂದದಿಂದ ತುಂದಿಲನಾಗಿರುವನು."

ಅಹಮದಾಬಾದದ ದಂಗೆಯನ್ನು ಕುರಿತಾಡುತ್ತ ಅವರು, ಹಿಂದೂ ಮುಸ್ಲಿಮರಿಬ್ಬರೂ ಇನ್ನೂ ತಮ್ಮ ಉನ್ಮಾದದಿಂದ ಸಾವರಿಸಿಕೊಂಡಿಲ್ಲವೆಂದು ನುಡಿದರು, ಇಸ್ಲಾಂ ಎಂದರೇನೇ ಶಾಂತಿ; ಹಿಂದುಗಳಾದರೋ ಅಹಿಂಸಾಪಥಗಾಮಿಗಳೆಂದು ಹೇಳಿಕೊಳ್ಳುತ್ತಾರೆ. ಉಭಯತರೂ ದೇವರ ಹೆಸರಲ್ಲಿ ಆಣೆಯಿಡುತ್ತಾರೆ. ಆದರೆ ವೃತ್ತಿಯಲ್ಲಿ ಸೈತಾನನನ್ನು ಅನುಸರಿಸಿದ್ದಾರೆ. ಮುಸ್ಲಿಮನು ನಿರಪರಾಧಿ ಹಿಂದುವನ್ನು ತಿವಿಯುತ್ತಾನೆ ಹಿಂದುವು ನಿರಪರಾಧಿ ಮುಸ್ಲಿಮನನ್ನು ಇರಿಯುತ್ತಾನೆ. ಅಹಮದಾಬಾದದಲ್ಲಿ ಕೆಲದಿನಗಳ ಕೆಳಗೆ ಕೊಲ್ಲಲ್ಪಟ್ಟ ಕೆಲಸಗಾರರು ಮೂವರಲ್ಲಿ, ಒಬ್ಬನು ಮುಸ್ಲಿಂ ಅವನನ್ನು ಕೊಂದುದು ಒಬ್ಬ ಮುಸ್ಲಿಮನ ಬರ್ಚಿ ಅವನು ಮುಸ್ಲಿಮನೆಂದು ಯಾರಿಗೂ ಗೊತ್ತಿದ್ದಿಲ್ಲ. ಅವನ ಸಹಚಾರಿಯಾಗಿದ್ದವರಲ್ಲಿ ಒಬ್ಬನು ವಸಂತರಾವ. ಅವನು ಪ್ರಸಿದ್ಧನಾಗಿದ್ದ, ಹಿಂದೂ ಮುಸ್ಲಿಮರಿಬ್ಬರಿಗೂ ಬೇಕಾದವನಾಗಿದ್ದ ಸೆರೆಮನೆಯಲ್ಲಿದ್ದಾಗ ಅವನ ಮುಸ್ಲಿಂ ಸಂಗಾತಿಯೊಬ್ಬನು ಉಪವಾಸ ಹೂಡಿದನು. ಸತ್ಯಾಗ್ರಹಿ ಬಂದಿಗಳಲ್ಲಿ ಅಧಿಕಾಂಶ ಜನರು ಹಿಂದುಗಳಾಗಿದ್ದರು. ವಸಂತರಾಯನಿಗೆ ತನ್ನ ಮುಸ್ಲಿಂ ಬಂಧುವಿಗೆ ಬೆಂಬಲ ಕೊಡಬೇಕೆಂದು ಎನಿಸಿ ಅವನು ಸಹಾನುಭೂತಿಪರ ಉಪವಾಸ ಕೈಕೊಂಡನು. ಸೆರೆಮನೆಯಲ್ಲಿದ್ದ ಅವನಿಗಿಂತ ಮೇಲಿನ ಸಂಗಾತಿಗಳು ಅವನನ್ನು ತಿರುಗಿಸಲು ಯತ್ನಿಸಿದರು. "ನಮ್ಮೆಲ್ಲರಿಗಿಂತಲೂ ನೀನೇ ಜಾಣನಾಗಿದ್ದೀಯಾ. ಈ ಮುಸ್ಲಿಂ ಗೆಳೆಯನ ಉಪವಾಸ ಅನುಚಿತವಾದುದೆಂದು ನಿನಗೆ ಗೊತ್ತಿದೆ. ಅದು ಉಚಿತವಾಗಿದ್ದರೆ ನಾವೆಲ್ಲರೂ ಅವನೊಡನೆ ಉಪವಾಸ ಹೂಡುತಿದ್ದೆವು" ಅವನ ಉತ್ತರ ಹೀಗಿತ್ತು "ನಾನು ಜಾಣನೆಂದು ಅಂದುಕೊಳ್ಳುವದಿಲ್ಲ. ಮೂರ್ಖನಾಗಿಯೆ ಉಳಿಯುವೆ. ನಿಮ್ಮ ಆಶೀರ್ವಾದವೊಂದಿದ್ದರೆ ಸಾಕು. ಈ ಮುಸ್ಲಿಂ ಗೆಳೆಯನು ನಾವು ಹಿಂದುಗಳೆಲ್ಲರ ಮಧ್ಯದಲ್ಲಿ ಸೆರೆಮನೆಯಲ್ಲಿ ಸತ್ತು ಹೋದರೆ, ನಾನು ಹೊರಗೆ ಹೋಗಿ ಮುಸ್ಲಿಮ ಗೆಳೆಯರಿಗೆ ಹೇಗೆ ಮುಖ ತೋರಿಸಲಿ? ಅದುದರಿಂದ ಅವನ ಉಪವಾಸದ ಕಾರಣ ಹೇಗೇ ಇರಲಿ, ನಾನು ಅವನ ಜೋಡಿ ಉಪವಾಸ ಮಾಡಿ ಸಾಯುವದೇ ಲೇಸೆಂದು ಬಗೆಯುವೆ." ಕೊನೆಗೆ ಇಬ್ಬರೂ ಸಾಯಲಿಲ್ಲ. ಅವರೆ ವಸಂತ

೧೧ ನೇ ಪುಟ ನೋಡಿರಿ

ಪ್ರಶ್ನೆ—ಪೆಟ್ಟಿಗೆ

ಪ್ರಶ್ನೆ— ೨೧ ವರುಷದ ನಾನೊಬ್ಬ ತರುಣ ವ್ಯಾಪಾರಸ್ಥ. ನನ್ನನ್ನವಲಂಬಿಸುವವರು ೧೧ ಜನ. ಸತ್ಯ ಅಹಿಂಸೆಗಳಲ್ಲಿ ನನಗೆ ವಿಶ್ವಾಸ. ಆದರೆ ವ್ಯವಹಾರದಲ್ಲಿ ನಾನು ಅವನ್ನು ಅಕ್ಷರಶಃ ಪಾಲಿಸಲಾರೆನು. ನಾನೇನು ಮಾಡತಕ್ಕದ್ದು? ಈ ವ್ಯವಹಾರವನ್ನೆ ಬಿಟ್ಟುಕೊಡಬೇಕೆಂದರೆ ನನ್ನ ಬಳಗದವರನ್ನೆಲ್ಲ ಕಷ್ಟದಲ್ಲಿ ನೂಕಿದಂತಾಗುವದು.

ಉತ್ತರ— ಈ ಪ್ರಮೇಯ ಸ್ವತಃ ಸಿದ್ಧವಾಗಿದೆ. ಅತ್ಯಂತ ಪ್ರಾಮಾಣಿಕತನದಿಂದ ವ್ಯವಹಾರ ನಡೆಸುವದು ಕಠಿನ. ಆದರೆ ಅಶಕ್ಯವಲ್ಲ. ಹೆಚ್ಚು ಪ್ರಾಮಾಣಿಕನಾಗಿ ವ್ಯವಹಾರ ಸಾಗಿಸಿದರೆ ಅದು ಹೆಚ್ಚು ಯಶಸ್ವಿಯಾಗುವುದೆಂಬುದು ವಸ್ತುಸ್ಥಿತಿ. ಅಂತೆಯೆ ವ್ಯಾಪಾರಸ್ಥರಲ್ಲಿ 'ಪ್ರಾಮಾಣಿಕತನ ಅತ್ಯುತ್ತಮ ಮಾರ್ಗ' ವೆಂಬ ನಾಣ್ಣುಡಿಯುಂಟು. ಈ ಪತ್ರಲೇಖಕನಿಗೆ ಪ್ರಾಮಾಣಿಕ ವ್ಯವಹಾರದ ಪದ್ಧತಿಯ ಸೂಕ್ಷ್ಮ ಜ್ಞಾನವಿಲ್ಲ. ಮತ್ತು ಅದನ್ನು ಕಾರ್ಯರೂಪದಲ್ಲಿ ತರಲಸಮರ್ಥನಿರುವನು. ವಿಪುಲ ಸಂಪತ್ತನ್ನು ಗಳಿಸುವುದಕ್ಕೂ ಪ್ರಾಮಾಣಿಕತನಕ್ಕೂ ಎಣ್ಣೆ ಸೀಗೆಕಾಯಿ ಇದ್ದಂತೆಂಬುದು ಮಾತ್ರ ನಿಜ. "ಒಂಟೆ ಸೂಜಿಯ ಮೊನ್ನೆಯೊಳಗಿಂದ ಹಾಯಿದು ಹೋಗಬಹುದು. ಆದರೆ ಶ್ರೀಮಂತ ಮನುಷ್ಯನು ಪರಮಾತ್ಮನ ರಾಜ್ಯವನ್ನು ಪ್ರವೇಶಿಸಲಾರನು'' ಆದುದರಿಂದ ಪ್ರಾಮಾಣಿಕ ವ್ಯವಹಾರಸ್ಥನು ಎಷ್ಟೇ ಸಮರ್ಥತನದಿಂದ ವ್ಯವಹಾರ ನಡೆಸಿದರೂ ನಿರುದ್ಯೋಗಿಗಳು ಹನ್ನೊಂದು ಜನರಿರಲಿ ಹೆಚ್ಚಿಗಿರಲಿ ಇಲ್ಲವೆ ಕಡಮೆ ಇರಲಿ ಅವರನ್ನೂ ಪೋಷಿಸಲಾರನು. ಹನ್ನೊಂದು ಜನಅವಲಂಬಿಗಳೆಲ್ಲ ಚಿಕ್ಕಮಕ್ಕಳಿರಲಾರರು. ಇಲ್ಲವೆ ಅಸಮರ್ಥರಿರಲಾರರು. ವ್ಯವಹಾರಸ್ಥನ ಸಂಪತ್ತಿಯ ಮೇಲೆ ಪ್ರಾಮಾಣಿಕತನವು ಅನವಶ್ಯಕ ಬೇಡಿಕೆಗಳನ್ನು ಮಾಡಲಾರದು. ಪ್ರಾಮಾಣಿಕ ಮನುಷ್ಯನಿಗೆ ಅಪ್ರಾಮಾಣಿಕ ಆಪ್ತರಿರಲಾರರು. ಈ ಪ್ರಶ್ನೆ ಕೇಳಿದವನು ಆತ್ಮನಿರೀಕ್ಷಣೆ ಮಾಡಿಕೊಂಡರೆ ಪ್ರಾಮಾಣಿಕ ವ್ಯವಹಾರದಲ್ಲಿ ಏನೂ ತಪ್ಪು ಇಲ್ಲ; ಆದರೆ ತನ್ನಲ್ಲಿಯೇ ಏನಾದರೂ ತಪ್ಪು ಇದೆಂಬುದು ಅವನಿಗೆ ಗೊತ್ತಾಗುವದು. ತನ್ನಲ್ಲಿದ್ದ ಆ ತಪ್ಪು ಯಾವುದೆಂಬುದನ್ನು ಅವನು ಕಂಡು ಹಿಡಿಯಲಿ.

ಪ್ರಶ್ನೆ— ಪ್ರತಿಯೊಬ್ಬನ ಮರಣದ ಕಾಲ, ವೇಳೆ ಕಾರಣ ಮೊದಲಾದವುಗಳು ಪರಮಾತ್ಮನಿಂದ ಮೊದಲೆ ನಿಶ್ಚಿತವಾಗಿವೆಯೋ? ಹಾಗಿದ್ದರೆ ನಾವು ಬೇನೆ ಬಿದ್ದರೆ ಬಳಲಬೇಕೇಕೆ?

* *

ಉತ್ತರ— ಮರಣದ ಕಾಲ ಕಾರಣ ಸ್ಥಳಗಳು ಮೊದಲೇ ನಿಶ್ಚಿತವಾಗಿಯೋ ಹೇಗೆಂಬುದು ನನಗೆ ಗೊತ್ತಿಲ್ಲ. "ಅವನ ಸಂಕಲ್ಪವಿಲ್ಲದೆ ಒಂದು ಕಡ್ಡಿ ಕೂಡ ಅಲುಗಾಡಲಾರದು'' ಎಂಬುದು ಮಾತ್ರ ನನಗೆ ಗೊತ್ತಿದೆ. ಇದಾದರೂ ಅಸ್ಪಷ್ಟವಾಗಿ ನನಗೆ ಗೊತ್ತಿದೆ. ಇಂದು ಅಸ್ಪಷ್ಟವಿದ್ದುದು ನಾಳೆ ಇಲ್ಲವೆ ನಾಡದು ಪ್ರಾರ್ಥನಾಪೂರ್ವಕ ದಾರಿ ಕಾಯ್ದುದ್ದಾದರೆ ಸ್ಪಷ್ಟವಾಗುವದು. ಆದರೆ ಇದು ಮಾತ್ರ ಸ್ಪಷ್ಟವಾಗಿದೆ. ಪರಮಾತ್ಮನು ನಮ್ಮಂತೆ ಮನುಷ್ಯನಲ್ಲ. ಅವನು ಇಲ್ಲವೆ ಅದು ಜಗತ್ತಿನಲ್ಲಿ ಅತ್ಯಂತ ಪ್ರಬಲ ಚೈತನ್ಯ ಶಕ್ತಿ ಇಲ್ಲವೆ ಸಂಕಲ್ಪ. ಆದುದರಿಂದ ಅವನು ಚಾಂಚಲ್ಯದಿಂದ ವರ್ತಿಸುವುದಿಲ್ಲ. ಇಲ್ಲವೆ ಅವನ ಸಂಕಲ್ಪದಲ್ಲಿ ಯಾವದೇ ಬಗೆಯ ತಿದ್ದುಪಡಿ ಇಲ್ಲವೆ ಸುಧಾರಣೆಗೆ ಅವಕಾಶವಿಲ್ಲ. ಅವನ ಸಂಕಲ್ಪ ನಿಶ್ಚಿತ ಮತ್ತು ಸ್ಥಿರ. ಉಳಿದುದೆಲ್ಲ ಪ್ರತಿನಿಮಿಷಕ್ಕೊಮ್ಮೆ ಬದಲಾವಣೆ ಹೊಂದುವದು. ನಮ್ಮ ಭವಿತವ್ಯವೆಲ್ಲ ಮೊದಲೆ ನಿಶ್ಚಿತವಾಗಿದೆಂಬ ತತ್ವದಿಂದ ನಾವು ನಮ್ಮ ಬಗ್ಗೆ ಕಾಳಜಿ ಮಾಡಬಾರದು. ಬೇನೆ ಬಿದ್ದಾಗ ಕೂಡ ಲಕ್ಷಿಸಬಾರದೆಂದು ಅರ್ಥವಾಗುವದಿಲ್ಲ. ನಿನ್ನೆಗಿಂತ ಇಂದು ಹೆಚ್ಚು ಒಳಿತನ್ನು ಮಾಡುವ ಪ್ರಯತ್ನದಲ್ಲಿ ಕೊನೆಯೆ ಇಲ್ಲ. ನಾವೇಕೆ ಬೇನೆ ಬಿದ್ದೆವು. ಬೀಳುತಿರುವೆವು ಎಂಬ ಬಗ್ಗೆ ನಾವು ವಿವಂಚನೆಗೊಳಗಾಗಿ ಕಾರಣವನ್ನು ಹುಡುಕಿ ತೆಗೆಯಬೇಕು. ಆರೋಗ್ಯವೇ ನಿಸರ್ಗ ನಿಯಮ. ಅನಾರೋಗ್ಯವಲ್ಲ. ಬೇನೆ ಬೀಳಬಾರದೆಂದು ಇಲ್ಲವೆ ಬೇನೆ ಬಿದ್ದಾಗ ಬೇಗ ಗುಣವಾಗಬೇಕೆಂದು ನಾವು ನಿಸರ್ಗ ನಿಯಮವನ್ನು ತಿಳಿದುಕೊಂಡು ಅದರಂತೆ ನಡೆಯುವಾ.

ಪಂಚಗಣಿ ಮೋ. ಕ. ಗಾಂಧಿ
೧೮—೭—೪೬

ಪ್ರಾರ್ಥನೆ

ಪ್ರಶ್ನೆ— ನಿಮ್ಮ ಪ್ರಾರ್ಥನಾ ಸಮ್ಮೇಳನದಲ್ಲಿ ಸಮ್ಮಿಲಿತರಾಗುವ ಸಾವಿರಾರು ಜನರಿಗೆ ಪ್ರಾರ್ಥನೆಯ ಕಾಲಕ್ಕೆ ಯಾವದೊಂದು ವಿಷಯದ ಬಗ್ಗೆ ತಮ್ಮ ಮನಸ್ಸನ್ನು ತಾದಾತ್ಮ್ಯ ಮಾಡುವುದು ಶಕ್ಯವೇ?

ಉತ್ತರ— ಶಕ್ಯವಿದೆ ಎಂದೇ ನಾನು ಉತ್ತರ ಕೊಡಬಲ್ಲೆನು. ಏಕೆಂದರೆ ಸಾಮೂಹಿಕ ಪ್ರಾರ್ಥನೆಯಲ್ಲಿ ನನಗೆ ವಿಶ್ವಾಸವಿಲ್ಲದಿದ್ದರೆ ಸಾರ್ವಜನಿಕ ಪ್ರಾರ್ಥನೆ ಸಮ್ಮೇಲನಗಳನ್ನೇ ನಾನು ನಿಲ್ಲಿಸಿಬಿಡುತಿದ್ದೆನು. ನನ್ನ ನಂಬುಗೆಗೆ ನನ್ನ ವಿಶ್ವಾಸವೂ ಪುಷ್ಟಿಯನ್ನು ಕೊಡುತಿದೆ. ಧುರೀಣನ ಪಾವಿತ್ರ್ಯ ಮತ್ತು ಸಭಿಕರ ವಿಶ್ವಾಸವನ್ನೆ ಯಶಸ್ಸು ಅವಲಂಬಿಸುತಿದೆ. ಸಭಿಕರಲ್ಲಿ ವಿಶ್ವಾಸವಿದ್ದ ಮತ್ತು ಧುರೀಣರು ಕೇವಲ ಢೋಂಗಿ ಇದ್ದ ಉದಾಹರಣೆಗಳು ನನಗೆ ಗೊತ್ತಿವೆ. ಇಂಥ ಸಂದರ್ಭಗಳು ಒದಗುತ್ತ ನಡೆಯಬಹುದು. ಆದರೆ ಸತ್ಯವು ಸೂರ್ಯನಂತೆ ಅಸತ್ಯದ ಅಂಧಃಕಾರದಲ್ಲಿಯೂ ಪ್ರಕಾಶಿಸುತ್ತದೆ. ನನ್ನ ಸಂಬಂಧದಲ್ಲಿ ಪರಿಣಾಮವು ನನ್ನ ಮರಣಾನಂತರ ಗೊತ್ತಾಗಬಹುದು. ಈ ಸಂಬಂಧದಲ್ಲಿ ಪರಿಹಾಸಕನೊಬ್ಬನು ಮೂರು ಪ್ರಶ್ನೆಗಳನ್ನು ಕೇಳುತ್ತಾನೆ. ಉತ್ತರ ಕೊಡಬೇಕಾದ ಒಂದು ಪ್ರಶ್ನೆ ಇಂತಿದೆ. "ರಾಜಕೀಯ ಶಿಕ್ಷಣವು ಧಾರ್ಮಿಕ ಶಿಕ್ಷಣಕ್ಕಿಂತ ನಿಶ್ಚಿತವಾಗಿ ಶ್ರೇಷ್ಠವಾಗಿರುವದಿಲ್ಲವೇ? '' ಧರ್ಮದ ಯೋಗ್ಯವಾದ ತಳಹದಿಯಿಲ್ಲದಿದ್ದರೆ ರಾಜಕೀಯ ಶಿಕ್ಷಣವು ನಿರರ್ಥಕವಾಗುವುದೆಂದು ನನ್ನ ಅಭಿಪ್ರಾಯ. ಧರ್ಮವೆಂದ ಕೂಡಲೆ ಯಾವದೊಂದು ವಿಶಿಷ್ಟ ಪಂಥದ ಇಲ್ಲವೆ ಪಂಗಡದ ಧರ್ಮವಲ್ಲ. ಧರ್ಮವಿಹೀನ ಮನುಷ್ಯನು ಮೂಲವಿಲ್ಲದ ಮನುಷ್ಯನು. ಆದುದರಿಂದ ಜೀವನವು ಸತ್ಯಮಯವಾಗಬೇಕಾಗಿದ್ದರೆ, ಅದರ ಕಟ್ಟಡವನ್ನು ಧರ್ಮದ ತಳಹದಿಯ ಮೇಲೆಯೇ ಕಟ್ಟತಕ್ಕದ್ದು.

* *

ಕಳವು

ಪ್ರಶ್ನೆ- ನೋಕರನು ಕಳ್ಳತನಕ್ಕೆಳಸಿದ್ದಾದರೆ ಮತ್ತು ಎಷ್ಟೊಂದು ತಿಳಿಸಿ ಹೇಳಿದರೂ ಚಿತ್ರ ಪ್ರಯೋಗ ಮಾಡಿ ನೋಡಿದರೂ ತಪ್ಪನ್ನು ತಿದ್ದಿಕೊಳ್ಳದಿದ್ದರೆ ಒಡೆಯನು ಏನು ಮಾಡತಕ್ಕದ್ದು?

ಉತ್ತರ:— ಉಳಿದವರಾದರೂ ಕಳ್ಳತನವನ್ನೆ ಮಾಡುತಿರಬಹುದು. ಭೇದವಿಷ್ಟೆ ಅವರು ಆ ಕೆಲಸ ಮಾಡುವಾಗ ಹಿಡಿಯಲ್ಪಟ್ಟಿರಲಿಕ್ಕಿಲ್ಲ. ನಿರೀಕ್ಷಿಸಿದರೆ ನಾವೆಲ್ಲ ಕಳ್ಳರೆಂದೇ ಕಂಡು ಬರುವದು, ಭೇದವಿಷ್ಟೆ ನಮ್ಮಲ್ಲನೇಕರು ನಮ್ಮ ಸಂಬಂಧದಲ್ಲಿ ಸಹನೆಯನ್ನು ತಾಳುತ್ತೇವೆ. ಉಳಿದವರ ಬಗ್ಗೆ ಅಸಹನೆಯನ್ನು ತಾಳುತ್ತೇವೆ. ತಾನು ಮಾರುವ ಸರಕುಗಳಿಗೆ ತನ್ನ ಮನ ಬಂದಷ್ಟು ಹಣ ತೆಗೆದುಕೊಳ್ಳುವ ಮನುಷ್ಯನು ಕಳ್ಳನಲ್ಲದೆ ಬೇರೇನು? ಕೊಳ್ಳುವವನು ಸ್ವೇಚ್ಛೆಯಿಂದಲೆ ಮೋಸ ಹೋಗಲಾರೆಂದು ಇದಕ್ಕೆ ಉತ್ತರ ಬಂದರೆ ಪ್ರಮೇಯವು ಸಿದ್ಧವಾದಂತೆಯೆ ಆಯಿತು. ನಿಜವಾಗಿ ಹೇಳಬೇಕಾದರೆ ಕೊಳ್ಳುವವನು ಮನಸ್ಸಿನಿಂದ ವಸ್ತುವನ್ನು ಕೊಳ್ಳುವುದಿಲ್ಲ; ನಿರುಪಾಯನಾಗಿ ಕೊಳ್ಳುವನು. ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿದ ವ್ಯಾಧಿಗಳ ಅನೇಕ ಲಕ್ಷಣಗಳಲ್ಲಿ ಮೇಲೆ ಉಲ್ಲೇಖಿಸಿದ ಕಳವು ಒಂದಾಗಿದೆ. ಹಲವು ಶ್ರೀಮಂತರಲ್ಲಿ ಮತ್ತು ಲಕ್ಷಾವಧಿ ಬಡವರಲ್ಲಿಯು ಶಾಶ್ವತ ಹೋರಾಟದ ಲಕ್ಷಣವದು. ಆದುದರಿಂದ ನಾನು ಒಡೆಯನಿಗೆ ಇಷ್ಟೇ ಹೇಳಬಯಸುತ್ತೇನೆ. ನೋಕರನನ್ನು ನಿನ್ನ ಬಂಧುವಿನಂತೆ ನಡೆಸಿಕೊಂಡು ಕಳವು ಮಾಡಬೇಕೆಂಬ ಪ್ರವೃತ್ತಿ ಅವನಲ್ಲಿ ಹುಟ್ಟದಂತೆ ಮೋಹವನ್ನೆಲ್ಲ ದೂರಗೊಳಿಸು. ಎಷ್ಟೇ ಮಾನವತೆಯ ಭಾವನೆಯಿಂದ ನೀನು ಅವನನ್ನು ನಡೆಸಿಕೊಂಡರೂ ಅವನು ಸುಧಾರಿಸದಿದ್ದರೆ ತನ್ನ ದಾರಿ ಕಂಡುಕೊಳ್ಳಲು ಅವನಿಗೆ ಹೇಳಿಬಿಡು. ಈ ಪರಿಸ್ಥಿತಿಯಲ್ಲಿ ತನ್ನಬಂಧುವನ್ನು ಇದೇರೀತಿಯಿಂದ ತಾನು ನಡೆಸಿಕೊಳ್ಳುತ್ತೇನೆಯೊ ಎಂಬದನ್ನು ಒಡೆಯನು ಯಾವಾಗಲೂ ತನ್ನ ಮನಸ್ಸಿನಲ್ಲಿ ವಿಚಾರ ಮಾಡುತಿರಲಿ.

ಪಂಚಗಣಿ ಮೋ. ಕ. ಗಾಂಧಿ
೧೯- ೭- ೧೯೪೬

ದಲಿತ ವರ್ಗ

(೮ ನೇ ಪುಟದಿಂದ ಮುಂದೆವರೆದುದು)

ಉತ್ತರ:-ಪ್ರತ್ಯೇಕ ಮತದಾನ ಪದ್ಧತಿ ಸ್ವಭಾವದಿಂದಲೇ ಉತ್ತಮವೆಂದು ಭಾವಿಸುವವರ ಬುದ್ಧಿಯಲ್ಲಿ ಮಾತ್ರ ಈ ಪ್ರಶ್ನೆ ಉದ್ಭವಿಸಬಲ್ಲದು. ಕಾಂಗ್ರೆಸ್ಸು ಹಾಗೆ ಭಾವಿಸುವದಿಲ್ಲ. ಅಂಗ್ಲೋ ಇಂಡಿಯನ್, ಯುರೋಪಿಯನ್ ಮತ್ತು ಹಿಂದಿ ಕ್ರಿಶ್ಚಿಯನ್‌ರ ಉದಾಹರಣೆ ಈ ಪ್ರಕರಣಕ್ಕೆ ಅನ್ವಯಿಸುವದಿಲ್ಲ. ಅದು ಅಪಾಯಕರವೂ ಹೌದು. ಪ್ರತ್ಯೇಕ ಮತದಾನ ಪದ್ಧತಿಯ ಕಿಡಿಗೇಡಿತನಕ್ಕೆ ಮಾತ್ರವಲ್ಲ. ಸಾಮ್ರಾಜ್ಯವಾದದ ಹುಚ್ಚು ಕುಣಿತಕ್ಕೆ ಈ ಪ್ರತ್ಯೇಕೀಕರಣವೇ ನಿಚ್ಚಳವಾದ ಉದಾಹರಣೆ, ಉದ್ಧಟತನದ ಪರಮಾವಧಿಯೇ ಇದು. ರಾಜಜಾತಿಯವರೆಂದು ಯುರೋಪಿಯನ್ನರನ್ನು ಬೇರ್ಪಡಿಸಲಾಗಿದೆ. ಅಂಗ್ಲೋ ಇಂಡಿಯನ್ನರು ಸಂಕರ ವರ್ಣದವರೆಂದು ಅವರನ್ನು ಹಿಂದೀ ಕ್ರಿಶ್ಚಿಯನ್ನರಿಗಿಂತ ಪ್ರತ್ಯೇಕಿಸಿದ್ದಾಗಿದೆ.

ಪ್ರಶ್ನೆ:— ಹಿಂದೂಗಳಿಗೂ ಸೀಖರಿಗೂ ನಡುವೆ ಸಾಮಾಜಿಕ ಪ್ರತ್ಯೇಕತೆಯಿಲ್ಲ. ಒಂದೇ ಕುಟುಂಬದಲ್ಲಿ ಒಬ್ಬ ಹಿಂದೂ ಮತ್ತೊಬ್ಬ ಸೀಖ, ಹೀಗಿರುವದುಂಟು. ಹಿಂದೂ ಸೀಖರ ನಡುವೆ ಅಂತರ್ವಿವಾಹಗಳೂ ಆಗುತ್ತವೆ, ಸಹಭೋಜನವೂ ಆಗುತ್ತದೆ. ಹೀಗಿದ್ದರೂ ಸೀಖರಿಗೆ ಪ್ರತ್ಯೇಕ ಮತಾಧಿಕಾರವುಂಟು. ಇದಕ್ಕೆ ಕಾಂಗ್ರೆಸ್ಸು ಎಂದೂ ಆಕ್ಷೇಪಿಸಿದಿಲ್ಲ. ಅಸ್ಪೃಶ್ಯರು ಸಾಮಾಜಿಕ ಸಂಪರ್ಕದ ವಿಷಯದಲ್ಲಿ ಸೀಖ ಮುಸ್ಲಿಮರೆಲ್ಲರಿಗಿಂತಲೂ ಹಿಂದೂಗಳಿಗೆ ದೂರವಾಗಿರುವರು. ಸೀಖರಿಗೂ ಮುಸ್ಲಿಮರಿಗೂ ಪ್ರತ್ಯೇಕ ಮತದಾನಾಧಿಕಾರವಿದ್ದ ಮೇಲೆ ಅಸ್ಪೃಶ್ಯರಿಗೇಕಿರಬಾರದು?

ಉತ್ತರ:—ಕಾಂಗ್ರೆಸ್ಸಿನಲ್ಲಿ ಇಂದು ಆ ಶಕ್ತಿ—ಖಡ್ಗಮುಖದಲ್ಲಿರುವ ಶಕ್ತಿಯಲ್ಲ, ಮನವೊಲಿಸುವ ಶಕ್ತಿ—ಇದ್ದಿದ್ದರೆ ಅದು ಈ ಪ್ರತ್ಯೇಕ ಮತದಾನಾಧಿಕಾರಗಳನ್ನೂ ಹೋಗಲಾಡಿಸಿ ಬಿಡುತಿತ್ತು. ಹಿಂದೂ-ಸೀಖರೊಳಗಿರುವ ಸಾಮ್ಯ ಸವರ್ಣ ಹಿಂದೂ-ಅಸ್ಪೃಶ್ಯರೊಳಗಿಲ್ಲವೆಂಬುದು ಅಕ್ಷರಶಃ ಸತ್ಯ. ಅದು ಸವರ್ಣ ಹಿಂದೂಗಳಲ್ಲಿಯ ಕಲಂಕ, ಹಿಂದೂ ಧರ್ಮದಕಲಂಕ. ಆದರೆ ಕೆಡುಕಿಗೆ ಇನ್ನಷ್ಟು ಕೆಡುಕು ಸೇರಿಸುವದರಿಂದ ಈ ದೋಷ ಪರಿಹಾರವಾಗದು. ಅಸ್ಪೃಶ್ಯರು ಪ್ರತ್ಯೇಕತೆಗಾಗಿ ಒಡ್ಡಿದ ಬೇಡಿಕೆ ತಂತಾನೆ ಸಾಯುವಂತೆ ಹಿಂದೂ ಧರ್ಮವನ್ನು ಸುಧಾರಣೆ ಮಾಡುವದೇ ಇದಕ್ಕೆ ಉಪಾಯ. ಆದರೆ ಈ ನಡುವೆ ಸವರ್ಣ ಹಿಂದೂಗಳಿಂದ ಹರಿಜನರನ್ನು ಪ್ರತ್ಯೇಕಿಸುವ ಮೂಲಕ ಆತ್ಮಹತ್ಯೆ ಮಾಡಿಕೊಳ್ಳಲು ಹಿಂದೂಗಳು ಸಿದ್ಧರಿಲ್ಲ.

ಪಂಚಗಣಿ, —ಮೋ. ಕ. ಗಾಂಧಿ
೧೯-೭-೪೬

ವಿಷಾದಮಯ ಲಕ್ಷಣ

(೭ ನೇ ಪುಟದಿಂದ ಮುಂದರಿದುದು)

ಮೇಲೆ ರಚಿತವಾದ ಸ್ವರಾಜ್ಯ ಇಂದು ಇರುತಿದ್ದಿತು. ಆದರೆ ಇದೆಂದೂ ಸಂಭವಿಸಲಿಲ್ಲ. ಈ ಪರಿಸ್ಥಿತಿಯಲ್ಲಿ ಯಾವದರ ಪರಿಚಯ ರಾಷ್ಟ್ರಕ್ಕಿದೆಯೋ ಮತ್ತು ಯಾವದನ್ನು ಸಂಪೂರ್ಣವಾಗಿ ಬಿಟ್ಟುಗೊಡುವದು ಶಕ್ಯವಿಲ್ಲವೊ ಅಂಥದರವಿರುದ್ಧ ಹೋರಾಟ ಹೂಡುವದು ನಿರರ್ಥಕ. ಪಾರ್ಲಿಮೆಂಟರಿ ಚಟುವಟಿಕೆಯನ್ನು ಕೈಕೊಂಡ ಬಳಿಕ ಈ ಪ್ರಯತ್ನವನ್ನು ಬಹಿಷ್ಕರಿಸುವದು ಯೋಗ್ಯವಾಗಲಾರದು. ಆದರೆ ಅದರಲ್ಲಿಯ ಸ್ಥಳಗಳನ್ನು ತುಂಬುವದಕ್ಕಾಗಿ ಅನುಚಿತ ಸ್ಪರ್ಧೆ ನಡೆಯಬೇಕೆಂದು ಇದರ ಅರ್ಥವಲ್ಲ; ಎಂದೂ ಆಗದು. ಮರ್ಯಾದೆಯನ್ನು ನಾವು ತಿಳಿದುಕೊಳ್ಳುವಾ.

ಪಂಚಗಣಿ ಮೋ. ಕ. ಗಾಂಧಿ
೧೮-೭-೪೬

ಕ್ರಾಂತಿಕಾರಕ ರಾಟೆ

ಶ್ರೀ ಧೀರೇಂದ್ರ ಮುಜುಮದಾರರು ಹಿಂದುಸ್ತಾನಿಯಲ್ಲಿ ಕ್ರಾಂತಿಕಾರಕ ರಾಟೆ ಎಂಬ ಪುಸ್ತಿಕೆಯನ್ನು ಪ್ರಸಿದ್ಧಿಸಿರುವರು. ಕೇವಲ ೪೦ ಪುಟಗಳ ಪುಸ್ತಿಕೆ ಅದಾಗಿದ್ದರೂ ಹೊಸ ಯೋಜನೆಯನ್ನೆಲ್ಲ ಅದು ಒಳಗೊಂಡಿದೆ. ಅದನ್ನು ಯಶಸ್ವಿಯಾಗಿ ಕಾರ್ಯಕಾರಿ ಮಾಡುವಲ್ಲಿ ನಿಜ ಸ್ವರಾಜ್ಯ ಮತ್ತು ನಿಜ ಕ್ರಾಂತಿ ಹೇಗೆ ಅಡಕವಾಗಿದೆಂಬುದನ್ನು ಅದು ಹೇಳುತ್ತದೆ. ಯೋಜನೆಯನ್ನು ಒಳ್ಳೆ ಉತ್ಸಾಹದಿಂದ ಸ್ವೀಕರಿಸದಿದ್ದರೆ ಕ್ರಾಂತಿಯೆಲ್ಲ ಕಾಗದದಲ್ಲಿಯೆ ಉಳಿಯುವದು. ಮತ್ತು ಕೃತಿಯೆ ಅದರ ಸತ್ಯತೆಯನ್ನು ಸಿದ್ಧಪಡಿಸುವದು. ಈ ಯೋಜನೆಯನ್ನು ಹೇಗೆ ಯಶಸ್ವಿಯಾಗಿ ಕಾರ್ಯಕಾರಿ ಮಾಡಬಹುದೆಂಬುದನ್ನು ಜನತೆಗೆ ತೋರಿಸುವದು ಅತ್ಯಂತ ಮಹತ್ವದ್ದಾಗಿದೆ. ಕೈತುಂಬ ರೊಕ್ಕಕೊಡಲು ಸಿದ್ಧರಿದ್ದರೂ ತಾವು ಖಾದಿಯನ್ನು ಕೊಳ್ಳಲಾರೆವಲ್ಲ ಎಂದು ನಗರವಾಸಿಗಳು ಬಹಳ ಖಿನ್ನರಾಗಿದ್ದಾರೆ. ಈ ಬಗೆಯ ಕೊರತೆ ಹಿಂದೆಯೂ ಆಗಿದೆ. ಆದರೆ ಆ ಕಾಲಕ್ಕೆ ಕೇವಲ ಹಣದ ಸರಿಪಡಿಸುವಿಕೆಯ ಪ್ರಶ್ನೆಯಿದ್ದುದರಿಂದ, ನಿಮಗೆ ಬೇಗ ಖಾದಿ ಸಿಕ್ಕುವಂತೆ ಮಾಡುವೆನೆಂದು ಹೇಳಿ ನಾನವರನ್ನು ಸಮಾಧಾನಪಡಿಸಿದ್ದೆ. ಆದರೆ ಇಂದು ದುಡ್ಡಿನಿಂದ ಕಾರ್ಯವಾಗುವುದಿಲ್ಲ. ಇಲ್ಲವೆ ನಿಜ ಕ್ರಾಂತಿ ದುಡ್ಡಿನಿಂದ ಸಾಧ್ಯವಿಲ್ಲ. ಜೀವನದಲ್ಲೆಲ್ಲ ವ್ಯಾಪಿಸಿದ ಆಲಸ್ಯವನ್ನು ಬಿಟ್ಟುಗೊಡುವದು ಮತ್ತು ಕೆಡಿಸದೆ ಕಟ್ಟುವದು ಬಹಳ ಕಠಿನವಾದುದು. ಗಾಡಿಯನ್ನು ಲೂಟಿ ಮಾಡುವದು ಮತ್ತು ಹತ್ತು ಸಾವಿರ ರೂಪಾಯಿಗಳನ್ನು ಪಡೆಯುವದು ಸರಳ. ಆದರೆ ತನ್ನ ಬೆವರು ಸುರಿಸಿ ಅಷ್ಟು ಹಣವನ್ನು ಸಂಪಾದಿಸುವದು ಕಠಿನ. ಶೇರಪೇಟೆಯಲ್ಲಿ ಒಂದೇ ದಿನದಲ್ಲಿ ಲಕ್ಷಾವಧಿ ರೂಪಾಯಿ ಗಳಿಸುವದು ನಿತ್ಯದ ಸಂಗತಿಯಾಗಿದೆ. ಆದರೆ ಸ್ವತಃ ಪರಿಶ್ರಮಬಟ್ಟು ಒಂದು ದಿನದಲ್ಲಿ ಅಷ್ಟು ಹಣ ಸಂಪಾದಿಸಿದ್ದನ್ನು ಯಾರಾದರೂ ಕೇಳಿರುವರೋ? ಲಾಟರಿಯಲ್ಲಿ ವಿಜಯಿ ತಿಕೀಟು ಪಡೆದು ಬಡವನು ಶ್ರೀಮಂತನಾದುದು ಗೊತ್ತು. ಆದರೆ ಯಾವನೊಬ್ಬ ಬಡ ಮನುಷ್ಯನು ತನ್ನ ಪರಿಶ್ರಮದಿಂದ ಕ್ಷಣಾರ್ಧದಲ್ಲಿ ಸಂಪತ್ತನ್ನು ಗಳಿಸಲಾರನು. ದಿನದ ಪೇಟೆಯ ಕೂಲಿಯೆಷ್ಟಿದೆಯೋ ಅಷ್ಟನ್ನು, ಎಂಟಾಣೆ ಇರಬಹುದು ಇಲ್ಲವೆ ಎರಡಾಣೆಯೂ ಇರಬಹುದು. ಅವನು ಸಂಪಾದಿಸುವನು.

ನಾಲ್ವತ್ತು ಕೋಟಿ ಜನರ ಪರಿಶ್ರಮದಿಂದ ಖಾದಿಯನ್ನು ತಯಾರಿಸುವದು ಬೇರೆ ಗಿರಣಿ ಬಟ್ಟೆ ತಯಾರಿಸುವದು ಬೇರೆ. ಕೆಲ ಸಾವಿರ ಜನರ ಸಹಾಯದಿಂದ ಯಂತ್ರಗಳ ಮುಖಾಂತರ ನಿಜವಾದ ರಾಜ್ಯ ಬರಲಾರದು. ಆದರೆ ೨೦ ಕೋಟಿ ಜನರು ತಮ್ಮ ಶ್ರಮದಿಂದ ತಮ್ಮ ಉಪಯೋಗಕ್ಕಾಗಿ ಮತ್ತು ಉಳಿದುದನ್ನುಹಾರಾಟಕ್ಕಾಗಿ ಎಂದು ಖಾದಿಸಿದ್ಧಪಡಿಸಿದ್ದಾದರೆ ಹಿಂದುಸ್ತಾನದ ಭವಿತವ್ಯವನ್ನು ಅವರು ಬದಲಿಸುವದು ನಿಶ್ಚಿತ. ನಾಲ್ವತ್ತು ಕೋಟಿ ಜನರಲ್ಲಿ ೨೦ ಕೋಟಿ ಜನರು ತಮ್ಮ ಅವಶ್ಯಕತೆಗಾಗಿ ಬಟ್ಟೆ ತಯಾರ ಮಾಡುವ ಶ್ರಮವೆಂದೂ ತೆಗೆದುಕೊಳ್ಳುವದಿಲ್ಲೆಂಬುದು ಹೇಳತಕ್ಕ ಮತ್ತೊಂದು ಸಂಗತಿ. ಆದರೆ ನಾನು ಮಾತ್ರ ಅದಕ್ಕೆಂದಿಗೂ ಒಪ್ಪೆನು.

ಪಂಚಗಣಿ ಮೋ. ಕ. ಗಾಂಧಿ
೧೮-೭-೧೯೪೬ (ಹರಿಜನ ಸೇವಕದಿಂದ)

(೯ನೇ ಪುಟದಿಂದ ಬಂದುದು)

ರಾಯನು ತನ್ನ ಕೃತಿಯಿಂದ ತಾನು ಉತ್ತಮ ಹಿಂದೂ ಮತ್ತು ಉತ್ತಮ ಮುಸ್ಲಿಮರಿಬ್ಬರೂ ಸೇರಿದ ಪ್ರತೀಕವೆಂದು ತೋರಿಸಿಕೊಟ್ಟನು.

ಗಾಂಧೀಜಿ ನೆರೆದವರಿಗೆ ಇಂಥ ಭಾವನೆಯನ್ನು ಬೆಳೆಸಿಕೊಳ್ಳಲು ಉಪದೇಶಿಸಿ ಕೊನೆಗೊಳಿಸಿದರು. ಎಲ್ಲರೂ ಸೇರಿ ಅಹಮದಾಬಾದದ ಹಿಂದೂಗಳಿಗೂ ಮುಸ್ಲಿಮರಿಗೂ ವಿವೇಕವನ್ನು ದಯಪಾಲಿಸಬೇಕೆಂದು ದೇವರನ್ನು ಪ್ರಾರ್ಥಿಸಿದರೆ ಅವರ ಪ್ರಾರ್ಥನೆ ವ್ಯರ್ಥವಾಗಲಾರದೆಂದೂ ಅದು ಆಕಾಶದಲ್ಲಿ ಸರ್ರನೆ ಹಾರಿ ಅಹಮದಾಬಾದದ ದಂಗೆಗಾರರ ಹೃದಯವನ್ನು ಮುಟ್ಟಿ ಕರಗಿಸಿ ಅವರನ್ನು ಪರಾವೃತ್ತರಾಗಿ ಮಾಡದಿರದೆಂದೂ ನಂಬಿಕೆಯನ್ನು ಗಾಂಧೀಜಿ ವ್ಯಕ್ತಗೊಳಿಸಿದರು.

ಪಂಚಗಣಿ —ಪ್ಯಾರೆಲಾಲ
೨೧-೭-೪೬

ಹಿಂದುಸ್ತಾನ

ಮುಂಬಯಿ

ಪುಣೆಯ ಅಸಿಸ್ಟಂಟ ರೇಶನಿಂಗ ಆಫೀಸರ ಟಿ. ದೇವಭಾಂಕರ ಮತ್ತು ಇನಸ್ಪೆಕ್ಟರ ಡಿ ವಿ ಮೆಹೆಂದಲೆಯವರು ಲಂಚ ತೆಗೆದುಕೊಂಡರೆಂಬ ಆರೋಪಕ್ಕಾಗಿ ಜಿಲ್ಹಾ ಮ್ಯಾಜಿಸ್ಟ್ರೇಟರು ಅವರನ್ನು ಸಸ್ಪೆಂಡ ಮಾಡಿದ್ದು ಬೇಗನೆ ಅವರ ಮೇಲೆ ಖಟ್ಲೆ ಹೂಡಲಿರುವರು.

ಬೆಳವಂಡಿ ರೇಲ್ವೆ ಸ್ಟೇಶನ ಮಾಸ್ತರ ಎಸ್ ಎಂ ಚಿಟಣೀಸ ಬೆಳಗಾವಿ ಸಬ್ ರಜಿಸ್ಟರ ಕಚೇರಿಯಲ್ಲಿಯ ಕಾರಕೂನ ಪಿ ಆರ್ ಶಿಕಾರಪುರ ಮತ್ತು ರಾಹೂರಿಯ ಪೋಲೀಸ ಸಬ್ ಇನಸ್ಪೆಕ್ಟರ ಎಸ್ ಡಿ ಟಿಕಳೆ ಇವರೂ ಲಂಚದ ಆರೋಪದಲ್ಲಿ ಸಿಕ್ಕಿರುವರು.

ಮುಂಬಯಿ ಅಪೆರಾ ಹೌಸದ ಹತ್ತರದ ಒಂದು ಮನೆಯಲ್ಲಿ ೧೫ ದಿನಗಳ ಕೆಳಗೆ ಪೋಲೀಸರು ತೀಕ್ಷ್ಣ ಹೋರಾಟದ ನಂತರ ದರವಡೆಗಾರರ ಗುಂಪೊಂದನ್ನು ಹಿಡಿದಿದ್ದಾರಷ್ಟೆ. ಬೇರೆ ಬೇರೆ ಜಿಲ್ಲೆಗಳಲ್ಲಿ ದರೋಡೆ ಹಾಕುತಿರುವ ದೊಡ್ಡ ಗುಂಪಿನ ಪ್ರಮುಖರೆ ಇಲ್ಲಿರುವರೆಂದು ಇದೀಗ ಕಂಡುಬಂದಿದೆ. ಕಳೆದ ಮೂರು ವರ್ಷಗಳಲ್ಲಿ ಬೇರೆ ಬೇರೆ ಕಡೆ ಮಾಡಿದ ೩೦ ದರವಡೆಗಳು ಈ ಜನರವೇ ಎಂದು ಕಂಡುಹಿಡಿಯಲಾಗಿದೆ. ಗ್ಯಾಂಗ ಮುಂದಾಳು ಭಂಗೀಖಾನನು ೪ ಸಲ [illegible] ಗಾಯಕ್ಕೊಳಗಾಗಿ ಆಸ್ಪತ್ರೆಯಲ್ಲಿ ಉಪಚರಿಸಲ್ಪಡುತಿರುವನು.

ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರೂ ಸುಪ್ರಸಿದ್ಧ ನಾಟಕಕರ್ತರೂ ಆಗಿರುವ ಶ್ರೀ ಟಿ ಪಿ ಕೈಲಾಸಂ ಇವರಿಗೆ ಅಗಷ್ಟ ೪ಕ್ಕೆ ೬೦ ವರುಷ ತುಂಬುವುದರಿಂದ ಮುಂಬಯಿ ಕನ್ನಡಿಗರು ಅಂದು ಅವರಿಗೆ ಹಮ್ಮಿಣಿ ಸಮರ್ಪಿಸಲು ನಿಶ್ಚಯಿಸಿದ್ದಾರೆ. ಈ ಬಗ್ಗೆ ಮೈಸೂರು ಸಂಘದವರು ಒಂದು ಸಮಿತಿ ನಿಯಮಿಸಿರುವರು. ಕೈಲಾಸಂರವರಿಗೆ ಹಿಂದುಸ್ತಾನ ವೃತ್ತಪತ್ರ ಸಂಘದವರು ಸನ್ಮಾನ ಮಾಡಿದರು.

ಟ್ರೇಡ ಯೂನಿಯನ ಅಧಿವೇಶನದ ಕಾರ್ಯಕಲಾಪ ಮುಗಿಸಿಕೊಂಡು ಕೂಲಿಕಾರ ಮುಖಂಡರಾದ ಎಸ್ ಎ ಡಾಂಗೆ ಇವರು ಮುಂಬಯಿಗೆ ಮರಳಿದರು. ಅಂತರ್‌ರಾಷ್ಟ್ರೀಯ ಪರಿಸ್ಥಿತಿ ಹದಗೆಟ್ಟಿದ್ದು ಇನ್ನೊಂದು ಮಹಾ ಯುದ್ಧದ [illegible]ವಿದೆಂದು ಅವರು ಅಭಿಪ್ರಾಯ ಪಟ್ಟರು.

ಕಲ್ಯಾಣದ ಹತ್ತರ ಡೊಂಬಿವಿಲಿಯಲ್ಲಿ ದರೋಡೆಗಾರರ ಗುಂಪೊಂದು ಮನೆಯನ್ನು ಮುತ್ತಿ ಪಿಸ್ತೂಲಿನ ಬೆದರಿಕೆಯಿಂದ ಮನೆಯ ಯಜಮಾನ ಮತ್ತು ಅವನ ಮಗ ಸೊಸೆ ಮತ್ತು ಆಳನ್ನು ಗಾಯಗೊಳಿಸಿ ೨೦ ಸಾವಿರ ರೂಪಾಯಿಗಳ ಬೆಳ್ಳಿ ಬಂಗಾರ ಸಾಮಾನುಗಳನ್ನು ಅಪಹರಿಸಿಕೊಂಡು ಹೋಗಿರುವರು.

ಮುಂಬಯಿಯ ಇಂಡಿಯಾ ಯುನಾಯಿಟೆಡ್ ಮಿಲ್ಸ ಗುಂಪಿನಲ್ಲಿಯ ಗಿರಣಿ ಕೆಲಸಗಾರರ ಬೇಡಿಕೆಗಳನ್ನು ಮಾನ್ಯ ಮಾಡಿಸಿಕೊಳ್ಳುವುದಕ್ಕಾಗಿ ಶ್ರೀ. ಅಬಿದಅಲ್ಲಿ ಜಾಫರಭಾಯರು ೩೧ರಿಂದ ಕಾಂಗ್ರೆಸಭವನದಲ್ಲಿ ಅನ್ನ ಸತ್ಯಾಗ್ರಹ ಹೂಡಿರುವರು. ಕಾಂಗ್ರೆಸಭವನದಲ್ಲಿ ಉಪವಾಸ ಹೂಡಬೇಡಿರೆಂದು ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧಿಕಾರಿಗಳು ಎಷ್ಟೊಂದು ಹೇಳಿದರೂ ಅಬೀದಲ್ಲಿಯವರು ಅಲ್ಲಿಯೇ ಉಪವಾಸ ಹೂಡಿರುವರು.

[illegible]ಬಯಿ ರಾಯಲ್ ವೆಸ್ಟರ್ನಇಂಡಿಯಾ ಟರ್ಫ ಕ್ಲಬ್ಬಿನವರು ಶರ್ಯತ್ತು ಸಾಗಿಸಲು ಅಪ್ಪಣೆ ಪಡೆದುಕೊಳ್ಳಲು ೧೫ ಲಕ್ಷ ರೂಪಾಯಿ ಲಾಯಿಸೆನ್ಸ ಫೀ ಮುಂಬಯಿ ಸರಕಾರಕ್ಕೆ ಕೊಡಲು ಒಪ್ಪಿದ್ದಾರೆ.

ಪ[illegible]ಖಾನದೇಶದ ಕಪಡ್ನೆ ಹಳ್ಳಿಯವರಿಂದ ವಸೂಲ ಮಾಡಿದ್ದ ೫೦೦೦ ರೂ. ಸಾಮೂಹಿಕ ದಂಡವನ್ನು ಅಲ್ಲಿಯ ಮಲ್ಟಿಪರಪಜ ಸೊಸಾಯಿಟಿಗೆ ಕೊಡಬೇಕೆಂದು ಗ್ರಾಮವಾಸಿಗಳು ಕೇಳಿಕೊಂಡದ್ದಕ್ಕಾಗಿ ಸರಕಾರದವರು ಅದಕ್ಕೆ ಒಪ್ಪಿರುವರು. ಸೊಸಾಯಿಟಿಯವರು ಆ ಹಣವನ್ನು ಹೊಲಮನೆಯ ವ್ಯವಸಾಯಕ್ಕಾಗಿ ಟ್ರ್ಯಾಕ್ಟರ ಖರೇದಿ ಮಾಡುವದಕ್ಕಾಗಿ ಉಪಯೋಗಿಸುವರು.

ಮದ್ರಾಸ

ಪೂರ್ವ ಗೋದಾವರಿ ಜಿಲ್ಲೆಯಲ್ಲಿ ಮೊದಲನೆ ಶತಮಾನದ ಬುದ್ಧ ವಿಹಾರವೊಂದು ದೊರೆತಿದೆ. ಪೂರ್ವ ಗೋದಾವರಿ ಜಿಲ್ಲೆಯಲ್ಲಿ ಇಂಥ ವಿಹಾರ ಸಿಕ್ಕದ್ದು ಇದೇ ಮೊದಲನೆಯದು.

ಮದ್ರಾಸ ಪ್ರಾಂತದಲ್ಲಿ ವೈದ್ಯಕೀಯ ಶಾಖೆಯನ್ನು ಪುನರ್ಘಟಿಸಲು ಸರಕಾರದವರು ಸ್ಪೆಶಲ್ ಅಫೀಸರರೊಬ್ಬರನ್ನು ನಿಯಮಿಸಿದ್ದಾರೆ. ಕರ್ನಾಟಕ, ಆಂಧ್ರ, ಕೇರಳ ಮತ್ತು ತಮಿಳ ಹೀಗೆ ನಾಲ್ಕು ಭಾಗಗಳಲ್ಲಿ ಒಂದೊಂದು ವೈದ್ಯಕೀಯ ಕಾಲೇಜನ್ನು ತೆರೆಯಬೇಕೆಂದೂ ಮದ್ರಾಸ ನಗರದಲ್ಲಿ ಕೇಂದ್ರ ಸಂಶೋಧನ ಖಾತೆ ಮತ್ತು ಕಾಲೇಜನ್ನು ತೆರೆಯಬೇಕೆಂದೂ ನಿರ್ಧರಿಸಲಾಗಿದೆ.

ವಿಶಾಖಪಟ್ಟಣದ ಕಮಾಂಡಿಂಗ ಅಫೀಸರ ಮೇಜರ ವಾಲ್ಕರವರ ಕೊಲೆಯ ಆರೋಪಕ್ಕೊಳಗಾದ ಲೆ. ಸಿ ಎಸ್ ದೌಗಲ್ ಇವರ ಕೋರ್ಟ ಮಾರ್ಶಲ್ ವಿಚಾರಣೆ ಪ್ರಾರಂಭವಾಗಿದೆ.

ಹರಿಜನರ ಪ್ರಾಥಮಿಕ ಚುನಾವಣೆಗಳಲ್ಲಿ ಅಂಬೇಡಕರ ಪಕ್ಷದವರು ಆರಿಸಿ ಬಂದಿರುವರೆಂದು ಶಿವರಾಜರು ಹೊರಡಿದ ಪ್ರಕಟಿನೆಯನ್ನು ಮದ್ರಾಸ ಮಂತ್ರಿಗಳಾದ ಶ್ರೀ ವಿ. ಆಯ್. ಮುನಿಸ್ವಾಮಿ ಪಿಳ್ಳೆಯವರು ಅಲ್ಲಗಳೆದಿರುವರು. ಮದ್ರಾಸ ಪ್ರಾಂತದಲ್ಲಿಯ ೩೦ ಸ್ಥಳಗಳಲ್ಲಿ ೨೭ ಸ್ಥಳಗಳಿಗೆ ಕಾಂಗ್ರೆಸ ಪ್ರತಿನಿಧಿಗಳು ಅವಿರೋಧವಾಗಿ ಆರಿಸಿ ಬಂದಿರುವರು. ಇಲ್ಲವೆ ಹೆಚ್ಚು ಮತಗಳಿಂದ ಆರಿಸಿ ಬಂದಿರುವರು. ಕೇವಲ ಮೂರು ಸ್ಥಳಗಳಲ್ಲಿ ಮಾತ್ರ ಕಾಂಗ್ರೆಸ ಹರಿಜನರಿಗೆ ಹರಿಜನರ ಹೆಚ್ಚು ಮತ ದೊರೆಯಲಿಲ್ಲ ಎಂದು ಅವರು ಅಂಕಿ ಸಂಖ್ಯೆ ಕೊಟ್ಟಿರುವರು.

ತ್ರಿಚನಾಪಲ್ಲಿಯ ಹತ್ತರ ಕರೂರಲ್ಲಿ ೧೦ ಕೈಮಗ್ಗ ಕಾರಖಾನೆಗಳಿಗೆ ಬೆಂಕಿ ಹಚ್ಚಿದ್ದಕ್ಕಾಗಿ ಪೋಲೀಸರು ಗೋಳೀಬಾರು ಮಾಡಬೇಕಾಯಿತು. ಮೂರು ಕಾರಖಾನೆಗಳು ಬೆಂಕಿಯಿಂದ ಸುಟ್ಟು ಹೋಗಿದ್ದು ೫ ಲಕ್ಷ ರೂಪಾಯಿಗಳ ಹಾನಿಯಾಗಿದೆ. ಗೋಳೀಬಾರಿನಲ್ಲಿ ಗಾಯಗೊಂಡ ೬ ಜನರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ನೂಲು ಹಂಚುವಿಕೆ ಸಂಬಂಧದಲ್ಲಿ ಗದ್ದಲವುಂಟಾಗಿ ಜನಸಮೂಹ ಕಾರಖಾನೆಗೆ ಬೆಂಕಿ ಹಚ್ಚಿದ್ದರಿಂದ ಇಷ್ಟೆಲ್ಲ ಅನರ್ಥ ಸಂಭವಿಸಿತು. ಕರ್ಫ್ಯೂ ಹುಕುಮು ಹೊರಡಿಸಿದ್ದು ೫೦ ಜನರನ್ನು ಸೆರೆಹಿಡಿಯಲಾಗಿದೆ.

ಮದ್ರಾಸ ಪ್ರಾಂತದಲ್ಲಿ ಬರಗಾಲ ಪರಿಹಾರ ಕಾರ್ಯಕ್ಕೆಂದು ಉಗಾಂಡದಲ್ಲಿಯ ಹಿಂದೀಯರು ೨೫ ಸಾವಿರ ರೂಪಾಯಿಗಳನ್ನು ಮುಖ್ಯ ಮಂತ್ರಿಗಳ ಕಡೆಗೆ ಕಳಿಸಿಕೊಟ್ಟಿರುವರು. ಆಹಾರ ಪದಾರ್ಥಗಳಿಲ್ಲರಿಂದ ಧನರೂಪ ಸಹಾಯ ಮಾಡಿರುವದಾಗಿ ಅವರು ತಿಳಿಸಿರುವರು.

ಹೊಸದಿಲ್ಲಿ

ದಕ್ಷಿಣ ಆಫ್ರಿಕೆಯಿಂದ ಯಾವದೊಂದು ಸರಕನ್ನು ಭೂ-ಜಲ-ವಾಯು ಮಾರ್ಗಗಳಿಂದ ತರಿಸಬಾರದೆಂದೂ ಅಲ್ಲಿಗೆ ಯಾವ ಸರಕನ್ನೂ ಭೂ-ಜಲ-ವಾಯು ಮಾರ್ಗಗಳಿಂದ ಕಳಿಸತಕ್ಕದ್ದಲ್ಲೆಂದೂ ಹಿಂದುಸ್ತಾನ ಸರಕಾರದವರು ಪ್ರಕಟನೆಯೊಂದನ್ನು ಹೊರಡಿಸಿ ಸಾರಿದ್ದಾರೆ.

ಹಿಂದುಸ್ತಾನ ಸರಕಾರದವರು ಒಂದು ಪ್ರಕಟನೆ ಹೊರಡಿಸಿ ಕಲ್ಲುಸಕ್ಕರಿ ಧಾರಣೆ ನಿಯಂತ್ರಿಸಿದ್ದನ್ನು ಹಿಂತೆಗೆದುಕೊಂಡಿದ್ದಾರೆ.

ಸಂಯುಕ್ತಪ್ರಾಂತ

ಬ್ರಿಟಿಶ್ ಮಂತ್ರಿತ್ರಯರ ವಿರುದ್ಧ ಸಂಯುಕ್ತ ಪ್ರಾಂತದಲ್ಲಿ ಹರಿಜನರು ಶಾಸನಸಭೆಯ ಮುಂದೆ ನಿರೋಧನ ನಡಿಸಿರುವರು. ಕೆಲ ಸಮಯದ ನಂತರ ಪೋಲೀಸರು ಬಂದು ಅವರನ್ನು ಮೋಟರಿನಲ್ಲಿ ತೆಗೆದುಕೊಂಡು ದೂರ ಒಯ್ದು ಬಿಟ್ಟರು.

ಡೆಹರಾಡೂನ ಹಾಲೆಟ ಆಸ್ಪತ್ರೆಯ ಹೆಸರನ್ನು ಬದಲು ಮಾಡಲು ಸರಕಾರದವರು ವಿಚಾರ ನಡೆಸಿರುವರೋ ಎಂದು ಯುಕ್ತಪ್ರಾಂತ ಶಾಸನಸಭೆಯಲ್ಲಿ ಕೇಳಿದ್ದಕ್ಕೆ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು ಈ ಬಗ್ಗೆ ಯಾವದೇ ಸೂಚನೆಯನ್ನು ವಿಚಾರ ಮಾಡಲು ಸಿದ್ಧರಿರುವರೆಂದು ಹೇಳಿದರು.

ಮಧ್ಯಪ್ರಾಂತ

ಕಾಂಗ್ರೆಸ್ ಕಾರ್ಯ ಸಮಿತಿಯು ವರ್ಧಾದಲ್ಲಿ ಗುರುವಾರ ಅಗಷ್ಟ ೮ ರಿಂದ ಪ್ರಾರಂಭವಾಗುವದು ಸದಸ್ಯರ ಹೊರತಾಗಿ ಆಚಾರ್ಯ ಕೃಪಲಾಣಿ, ಶಂಕರರಾವ ದೇವ ಡಾ. ಪ್ರಫುಲ್ಲಚಂದ್ರ ಘೋಷ, ಸರೋಜಿನಿ ನಾಯುಡು, ಡಾ. ಪಟ್ಟಾಭಿ ಸೀತಾರಾಮಯ್ಯ, ಆಚಾರ್ಯ ನರೇಂದ್ರದೇವ ಮತ್ತು ಜಗಜ್ಜೀವನರಾಮರಿಗೆ ಸಭೆಗೆ ಬರಲು ಆಮಂತ್ರಣ ಕಳಿಸಲಾಗಿದ.

ಶೇಟ ಪುನಮಚಂದ ರಂಕಾರವರು ತಮ್ಮ ಎದುರಾಳಿ ಎಚ್. ವಿ. ಕಾಮತರನ್ನು ೮ ಮತಗಳಿಂದ ಸೋಲಿಸಿ ನಾಗಪುರ ಪ್ರಾಂತಿಕ ಕಾಂಗ್ರೆಸ ಕಮೀಟಿಗೆ ಮತ್ತೆ ಅಧ್ಯಕ್ಷರಾಗಿ ಆರಿಸಿ ಬಂದಿರುವರು.

ಬಂಗಾಲ

ಚಿತಗಾಂಗ ಭಾಗದಲ್ಲಿ ಮಹಾಪೂರದಿಂದ ಬೆಳೆಯು ನಾಶವಾಗಿದ್ದನ್ನು ತುಂಬಿ ಕೊಡುವದಕ್ಕಾಗಿ ಅಲ್ಲಿಯ ಒಕ್ಕಲಿಗರಿಗೆ ೧ ಲಕ್ಷ ಮಣ ಬೀಜ ಪೂರೈಸಲು ಸರಕಾರದವರು ನಿರ್ಧರಿಸಿದ್ದಾರೆ. ಮನೆಮಾರು ಕಳೆಕೊಂಡವರಿಗೆ ಬಟ್ಟೆಗೆ ಮತ್ತು ಉಳಿದ ಸಹಾಯವನ್ನು ಮಾಡುವದಾಗಿ ಸರಕಾರದವರು ಸಾರಿದ್ದಾರೆ.

ಮುಂಬಯಿ ಗವರ್ನರರಾದ ಸರ್ ಜಾನ್ ಕಾಲ್ವಿಲ್‌ರು ಮೂರು ತಿಂಗಳ ರಜೆಯ ಮೇಲೆ ಹೋಗಲಿರುವದರಿಂದ ಸರ್ ಅಂಡ್ರೂಕ್ಲೋ ಇವರನ್ನು ಚಕ್ರವರ್ತಿಗಳು ಅವರ ಸ್ಥಳಕ್ಕೆ ನೇಮಿಸಿದ್ದಾರೆ. ಕಾಲ್‌ವಿಲ್ಲ ಸಾಹೇಬರು ಅಗಷ್ಟ ೧೯ ರಿಂದ ರಜೆಯ ಮೇಲೆ ಹೋಗುವರು.

ಪತ್ತುಮಂಡಲಕ್ಕೆ ವಿದ್ಯುತ್ ಶಕ್ತಿಯನ್ನು ಪೂರಯಿಸುವದಕ್ಕಾಗಿ ಮದ್ರಾಸ ಸರಕಾರವು ೫೦ ಲಕ್ಷ ರೂಪಾಯಿ ಯೋಜನೆ ಮಾಡಿದ್ದು ಮೈಸೂರು ಸರಕಾರದವರು ಜೋಗ ಜಲಪಾತದಲ್ಲಿ ತಯಾರ ಮಾಡುತಿರುವ ವಿದ್ಯುತ್‌ನ್ನು ಕೇಳಬೇಂದು ನಿರ್ಧರಿಸಿರುವರು. ಇದು ತುಂಗಭದ್ರಾ ಅಣೆಕಟ್ಟಿನ ಸ್ಥಳಕ್ಕೂ ಬಳ್ಳಾರಿ ಹೊಸಪೇಟೆ ಮೊದಲಾದ ಗ್ರಾಮಗಳಿಗೂ ದೊರೆಯುವದು. ೧೯೪೮ ನೇ ಇಸ್ವಿ ಮಧ್ಯದಲ್ಲಿ ಈ ಪೂರೈಕೆ ಪ್ರಾರಂಭವಾಗಬಹುದೆಂದು ನಿರೀಕ್ಷಿಸಲಾಗಿದೆ.

ವಿಜಾಪುರದ ಕನ್ನಡ ಸಾಹಿತ್ಯ ಸಂಘದ ೫ನೇ ವಾರ್ಷಿಕೋತ್ಸವವು ರಾ. ಬ. ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ೨೧ಕ್ಕೆ ಸಾಂಗವಾಯಿತು. ಶ್ರೀ. ಬೇಂದ್ರೆಯವರು ಮುಖ್ಯ ಅತಿಥಿಗಳಾಗಿದ್ದರು. ಅವರ ಸ್ತುತಿಪರವಾದ ಕವನವೊಂದನ್ನು ಬರೆದ ತಾಮ್ರಪಟವೊಂದನ್ನು ಅವರಿಗೆ ಸಮರ್ಪಿಸಲಾಯಿತು. ಸಂಘದ ಕೈಬರಹದ ಮಾಸಪತ್ರಿಕೆಯೂ ಪ್ರಕಟವಾಯಿತು. ಪ್ರತಿಯೊಂದು ಮನೆಯಲ್ಲಿ ಕನ್ನಡ ಸಂಘ ಸ್ಥಾಪನೆಯಾಗಬೇಕೆಂದು ಬೇಂದ್ರೆಯವರು ಹೇಳಿದರು.

"ಸಂಪೂರ್ಣವಾಗಿ ಸಹಕರಿಸಿರಿ"

—ಪಂಡಿತ ನೆಹರು

"ಆಹಾರದ ಪರಿಸ್ಥಿತಿಯಿಂದ ಉಂಟಾಗಿರುವ ಸಂಕಟವನ್ನು ತಪ್ಪಿಸಲು ಮತ್ತು ಅದರ ಭಾರವನ್ನು ಎಲ್ಲರೂ ಸಮನಾಗಿ ವಹಿಸಲು ನಮ್ಮೆಲ್ಲರ ಸಂಪೂರ್ಣ ಸಹಕಾರವು ಬೇಕಾಗುತ್ತದೆ. ವಿಶೇಷವಾಗಿ, ಸಾರ್ವಜನಿಕ ಸಹಕಾರವು ಅವಶ್ಯವಾಗಿದೆ."

—ಫೆಬ್ರುವರಿ ೧೭ಕ್ಕೆ ಕೊಟ್ಟ ಹೇಳಿಕೆ

ನಮ್ಮ ಪ್ರತಿಜ್ಞೆ ಮತ್ತು ಬಿನ್ನಹ

ಕೊರತೆಯ ಭಾಗಗಳಲ್ಲಿರುವವರಿಗೆ ನಾವು ಸಂಪೂರ್ಣ ಬೆಂಬಲವೀಯುವ ಬಗ್ಗೆ ಪ್ರತಿಜ್ಞೆ ಮಾಡುತ್ತೇವೆ. ದೇಶದ ಯಾವತ್ತೂ ಸಾಧನ ಸಾಮಗ್ರಿಯನ್ನು ಒಂದುಗೂಡಿಪಿ ಅವರಿಗೆ ತ್ವರಿತವಾಗಿ ನೆರವನ್ನು ನೀಡಲಾಗುತ್ತಿದೆ. ಅವರಿಗಿರುವ ಆಹಾರದ ಕೊರತೆಯಲ್ಲಿ ದೇಶದ ಉಳಿದ ಭಾಗವು ಪಾಲು ವಹಿಸುವದಲ್ಲದೆ ಸಮಪಾಲು ವಹಿಸುವದು. ಪ್ರತಿಯೊಬ್ಬನಿಗೆ ಯೋಗ್ಯ ಪ್ರಮಾಣದಲ್ಲಿ ಆಹಾರವು ದೊರೆಯುವಂತೆ ಮಾಡುವದಕ್ಕಾಗಿ ಶಿದಾ ಪದ್ಧತಿಯನ್ನು ವಿಸ್ತರಿಸಲಾಗುತ್ತಿದೆ. ಬೆಲೆ ನಿಯಂತ್ರಣವನ್ನು ತಪ್ಪದೆ ಸಾಗಿಸಲಾಗುವುದು. ಶಾಂತತೆ ಮತ್ತು ಆತ್ಮ ವಿಶ್ವಾಸದಿಂದ ನಡೆದುಕೊಳ್ಳಿರಿ. ನಿಮಗೆ ಅವಶ್ಯವಿರುವದಕ್ಕಿಂತ ಹೆಚ್ಚಿಗೆ ಕೊಂಡುಕೊಳ್ಳಬೇಡಿರಿ. ಲಾಭಬಡಕರೊಡನೆ ಯಾವದೇ ತರದ ಸಂಬಂಧವನ್ನಿಟ್ಟುಕೊಳ್ಳಬೇಡಿರಿ.

ಹೆಚ್ಚುಳಿದ ಭಾಗಗಳಲ್ಲಿರುವವರಿಗೆ ಸಂಪೂರ್ಣ ಸಹಾಯವನ್ನು ಒದಗಿಸಬೇಕೆಂದು ನಾವು ಅವರಿಗೆ ಬಿನ್ನವಿಸಿಕೊಳ್ಳುತ್ತೇವೆ. ನಿಮ್ಮಲ್ಲಿ ಹೆಚ್ಚಾಗಿ ಇರುವ ಕಾಳನ್ನು ನೀವು ಕೊಟ್ಟುಬಿಡಬೇಕಾಗಿದ್ದರೂ ನಿಮಗೆ ಸಾಕಷ್ಟು ಕಾಳು ಉಳಿಯುವುದು. ನಿಮ್ಮ ಪಟ್ಟಣದಲ್ಲಿ ಶಿದಾ ಕ್ರಮವನ್ನು ಬಳಿಕೆಯಲ್ಲಿ ತಂದರೆ ನಿಮ್ಮ ದೇಶಬಾಂಧವರಿಗೆ ನೆರವಾಗುವುದಕ್ಕಾಗಿ ಹೀಗೆ ಮಾಡಲಾಗಿದೆಯೆಂದು ನೆನಪಿನಲ್ಲಿಡಿರಿ. ಇಷ್ಟೆಲ್ಲ ಆಗಿಯೂ ನಿಮ್ಮ ಹತ್ತರ ಸಾಕಷ್ಟು ಉಳಿಯುವುದು. ಸ್ವಲ್ಪಾದರೂ ಕೂಡಿಹಾಕಿ ಇಡಬೇಡಿರಿ. ಅಧಿಕಾರಿಗಳೊಡನೆ ಸಹಕರಿಸಿರಿ.

ಆಹಾರದ ಕೊರತೆಯನ್ನು ಹೋಗಲಾಡಿಸಿರಿ

ಒಮ್ಮನಸ್ಸಿನಿಂದ ದುಡಿಯಿರಿ ಎಲ್ಲರೂ ಪಾಲುಗಾರರಾಗಿರಿ

ವ್ಯಾಪಾರಿಗಳಿಗೆ ಮತ್ತು ಬೆಳೆಯುವವರಿಗೆ ಸಂದೇಶ

ನಿಮಗೆ ಶಕ್ಯವಿದ್ದಷ್ಟು ಕಾಳನ್ನೆಲ್ಲ ಹೊರಗೆಡವಿರಿ; ನೀವು ಕೂಡಿಡುವ ಪ್ರತಿಯೊಂದು ಮಣ ಕಾಳು ಒಬ್ಬ ದೇಶಬಾಂಧವನ ಮರಣಕ್ಕೆ ಕಾರಣವಾಗುವುದು. ನಿಯಂತ್ರಿತ ಬೆಲೆಗಳಿಗಷ್ಟೇ ಮಾರಿರಿ-ಅವು ನಿಮಗೆ ಹಾಗೂ ಗ್ರಾಹಕರಿಗೆ ಇಬ್ಬರಿಗೂ ಯೋಗ್ಯವಾಗಿವೆ. ಎರಡನೇಯವರಿಗೆ ದುಃಖ ಕೊಟ್ಟು ಹಣ ಗಳಿಸುವುದು ಪಾಪನೆಂದು ತಿಳಿಯತಕ್ಕದ್ದು.

ಲಾಭಬಡಕರನ್ನು ಮತ್ತು ಕಳ್ಳಪೇಟೆಗಾರರನ್ನು ತಮ್ಮ ಯಾವತ್ತೂ ಶಕ್ತಿಯನ್ನು ಉಪಯೋಗಿಸಿ ಹತ್ತಿಕ್ಕಬೇಕೆಂದು ಸರಕಾರ ಹಾಗೂ ಜನತೆಯು ನಿಶ್ಚಯಿಸಿರುತ್ತದೆ. ಕಳ್ಳಪೇಟೆಯನ್ನು ತಪ್ಪಿಸಿರಿ; ಅದು ಅಪರಾಧವಾಗಿದೆ.

ಹಿಂದುಸ್ಥಾನ ಸರಕಾರದ ಆಹಾರ ಖಾತೆ, ಹೊಸದಿಲ್ಲಿ, ಇವರ ಪ್ರಕಟನೆ

ನಿಜಾಮ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳು

[೫ನೇ ಪುಟದಿಂದ ಮುಂದರಿದುದು]

ಅಧಿಕಾರಗಳ ವಿಸ್ತರಣೆ

೧೯೩೯ ರಲ್ಲಿ ಸುಧಾರಣೆಗಳನ್ನು ಸಾರಿದಾಗ ಶಾಸನಸಭೆಯ ಅಧಿಕಾರ ವ್ಯಾಪ್ತಿಯ ಹೊರಗಿರಿಸಿದ್ದ ಕೆಲ ವಿಷಯಗಳನ್ನೂ ಈಗ್ಗೆ ಅದರ ಅಂಕೆಗೊಳಪಡಿಸಲಾಗಿದೆ. ಅದರಲ್ಲಿ ಅತ್ಯಂತ ಮಹತ್ವದ್ದು ಆಯವ್ಯಯ ಪತ್ರಿಕೆಯನ್ನು ಶಾಸನಸಭೆಯಲ್ಲಿ ಮಂಡಿಸುವ ಸಂಬಂಧದ್ದಿರುವದು. ಸಂಬಳ, ಭತ್ತೆ, ವಿರಾಮ ವೇತನ, ಮೊದಲಾದ ವಿಷಯಗಳು ಶಾಸನಸಭೆಯ ಅಂಕೆಗೊಳಪಡಿಸಲ್ಪಟ್ಟವೆ.

ಇದಲ್ಲದೆ ವಿಶೇಷಾಧಿಕಾರವನ್ನು ಪಯೋಗಿಸುವ ಮೊದಲು ಶಾಸನಸಭೆಯ ಮತವನ್ನು ಇನ್ನೊಮ್ಮೆ ಸಂಬಂಧಪಟ್ಟ ವಿಷಯದಲ್ಲಿ ತೆಗೆದುಕೊಳ್ಳಬೇಕು, ಶಾಸನಸಭೆಯ ಅಂಕಿತದಲ್ಲಿ ಸೇರದಿರುವ ವಿಷಯಗಳಲ್ಲಿ ಪ್ರಶ್ನೆ, ಗೊತ್ತುವಳಿ, ಮಸೂದೆಗಳನ್ನು ಮಂಡಿಸಲು ಅವಕಾಶ ಕೊಡಬೇಕು, ಮತ್ತು ಮಹತ್ವದ ಜಾತೀಯ ಪ್ರಶ್ನೆಯಲ್ಲಿ ಕಾರ್ಯಕಾರಿ ಮಂಡಲದ ಸದಸ್ಯರೂ ದರಬಾರಕ್ಕೆ ಸೇರಿದ ಭೂಮಿಯ ನಾಮಕರಣ ಪ್ರತಿನಿಧಿಗಳೂ ಮತದಾನ ಮಾಡತಕ್ಕದ್ದಲ್ಲ ಎಂದು ನಿಜಾಮರು ಆದೇಶಪತ್ರವಿತ್ತಿದ್ದಾರೆ.

ಸಾತ್ವಿಕ ಆಕಾಂಕ್ಷೆ

ಸರಕಾರಿ ಪ್ರಕಟಣೆ, ನಿಜಾಮರ ಫರ್ಮಾನ್ ಮತ್ತು ಕಾರ್ಯಕಾರಿ ಮಂಡಲದ ಅಧ್ಯಕ್ಷರ ಪತ್ರಿಕಾ ಪರಿಷತ್ತು ಇವೆಲ್ಲವುಗಳಲ್ಲಿಯೂ ಕೆಲ ಸಾತ್ವಿಕ ಆಕಾಂಕ್ಷೆಗಳನ್ನು ವ್ಯಕ್ತಗೊಳಿಸಲಾಗಿದೆ. ಎಲ್ಲ ವೃತ್ತಿ, ಹಿತಸಂಬಂಧ, ಜಾತಿಗಳು ಸೌಹಾರ್ದ ಸಹಕಾರಗಳಿಂದ ಸುಧಾರಣೆಗಳನ್ನು ಕಾರ್ಯಕಾರಿ ಮಾಡಲು ಪ್ರಯತ್ನಿಸಬೇಕು. ಹಿಂದುಸ್ತಾನ ಸ್ವತಂತ್ರವಾಗುತಿರುವಾಗ ಈ ಘಟನಾತ್ಮಕ ಸುಧಾರಣೆಗಳು ಸ್ಥಾಯಿಯಾಗಿರದೆ ಮುಂದಡಿಯಿಡುವವು. ಹೊಸದಾಗಿ ಬರುವ ಶಾಸನ ಸಭೆಯ ಸಲಹೆ ಪಡೆದು ಶಾಸನ ಸಭೆ, ಸ್ಥಾನಿಕ ಸಂಸ್ಥೆಗಳ ಅಧಿಕಾರಗಳನ್ನು ಹೆಚ್ಚಿಸಲು ನಿಜಾಮರು ಮುಂದಾಗಲಿಚ್ಛಿಸುವರು, ಇತ್ಯಾದಿ. ನಿಜಾಮರು, ಹಿಂದೂ-ಮುಸ್ಲಿಮರು ತಮ್ಮ ರಾಜ್ಯದ ಎರಡು ಕಣ್ಣುಗಳೆಂಬ ಭಾವನೆಯಿಂದಲೇ ತಾನೀ ಸುಧಾರಣೆಗಳನ್ನು ಸಾರಿದ್ದಾಗಿ ಹೇಳಿದ್ದಾರೆ. ಅಕ್ಟೋಬರದಲ್ಲಿ ಚುನಾವಣೆಗಳ ಕಾಲಕ್ಕೆ ಸಾರ್ವಜನಿಕ ಸಭೆಗಳ ಮೇಲಿರುವ ಪ್ರತಿಬಂಧಗಳನ್ನು ಸಡಿಲಿಸಲಾಗುವದೆಂದು ಕಂದಾಯ ಮಂತ್ರಿ ಗ್ರಿಗ್ಸನ್ನರು ಹೇಳಿದ್ದಾರೆ.

ನಾಮಕರಣ ಸದಸ್ಯರನ್ನು ನೇಮಿಸುವಾಗಲೂ ಜಾತಿ, ವೃತ್ತಿಗಳ ಅಧಿಕೃತ ಸಂಸ್ಥೆಗಳನ್ನು ಮೊದಲೇ ವಿಚಾರಿಸಿಕೊಳ್ಳಲಾಗುವದೆಂದು ಆಶ್ವಾಸನ ಕೊಡಲಾಗಿದೆ.

ಗುಪ್ತ ಆಶ್ವಾಸನ

ಈ ಸುಧಾರಣೆಗಳ ಪ್ರಕಟನೆಗಿಂತ ಒಂದು ವಾರ ಮೊದಲು ಹೈದರಾಬಾದ ಸಂಸ್ಥಾನದ ಮಜಲಿಸ್ ಇತ್ತಿಹಾದುಲ್ ಮುಸ್ಲಿಮಿನ್ (ಹೈದರಾಬಾದ ಮುಸ್ಲಿಂ ಸಂಘ) ಸಂಘದವರು ಒಂದು ಗುಪ್ತ ಪತ್ರವನ್ನು ಪ್ರಸಿದ್ಧಿಸಿ ಸರಕಾರವನ್ನು ಪೇಚಿಗೆ ಕೆಡಹಿದರು. ಆ ಪತ್ರದ ಮೂಲಕ ನಿಜಾಮ ಸಾಹೇಬರು ಮಜಲಿಸ್ ಸಂಸ್ಥೆಗೆ ೧೯೩೯ ರಲ್ಲಿಯೆ ಕೆಲ ಗುಪ್ತ ಆಶ್ವಾಸನಗಳನ್ನು ಕೊಟ್ಟಿದ್ದರು.

ಭಾವೀ ಶಾಸನ ಸಭೆಯಲ್ಲಿ ಮುಸ್ಲಿಮರು ಅಲ್ಪಸಂಖ್ಯಾಕರಾಗಿರಕೂಡದು ಎಂದು ಮಜ್ಲಿಸದವರು ಕೇಳಿಕೊಂಡದ್ದಕ್ಕೆ ಒಪ್ಪಿ ಶಾಸನ ಸಭೆಯಲ್ಲಿ ದರಬಾರಕ್ಕೆ ಸೇರಿದ ಭೂಮಿಗಳ ಪರವಾಗಿ ಸದಸ್ಯರನ್ನು ನಾಮಕರಣ ಮಾಡುವಾಗ ಮುಸ್ಲಿಮರನ್ನೇ ನೇಮಿಸುವದಾಗಿ ನಿಜಾಮರು ವಾಗ್ದಾನ ಕೊಟ್ಟಿದ್ದರು. ಇದಲ್ಲದೆ ಸಂಯುಕ್ತ ಮತದಾನ ಪದ್ಧತಿಯಂತೆ ಆರಿಸಿಬರುವವರಿಗೆ ಸ್ವಜಾತಿಯ ನೂರಕ್ಕೆ ೪೦ ಮತಗಳಾದರೂ ಬೀಳಬೇಕೆಂದಿದ್ದುದನ್ನು ನೂರಕ್ಕೆ ೫೧ ಬೀಳಬೇಕೆಂದು ಬದಲಿಸಿದುದಾದರೂ ಮಜ್ಲಿಸದ ಅಪೇಕ್ಷೆಯ ಮೇರೆಗೆಯೆ ಎಂದು ಈ ಪತ್ರದಿಂದ ಹೊರಬಿದ್ದಿದೆ. ಮಜ್ಲಿಸ ಸಂಸ್ಥೆಯನ್ನು ಕೇಳಿಯೆ ಈ ಸುಧಾರಣೆಗಳನ್ನು ಸಾರಲಾಗಿತ್ತೆಂದು ಸರಕಾರ ಒಪ್ಪಿಕೊಂಡಿದೆ. ಈ ಗುಪ್ತಪತ್ರವನ್ನು ಸರಕಾರದ ಸಮ್ಮತಿಯಿಲ್ಲದೆ ಪ್ರಸಿದ್ಧಿಸಿದ್ದರಿಂದ ಸರಕಾರ ಖಿನ್ನವಾಗಿದೆಯಲ್ಲದೆ ಸಂಸ್ಥಾನದ ಮುಸ್ಲಿಮೇತರರಲ್ಲಿ ತ್ವೇಷವುಂಟಾಗಿದೆ. ನೂರಕ್ಕೆ ೧೨ ಜನರಿರುವ ಅಲ್ಪಸಂಖ್ಯಾಕ ಮುಸ್ಲಿಮರನ್ನು ಬಹುಸಂಖ್ಯಾಕರಾಗಿ ಪರಿಗಣಿಸಿದ್ದಲ್ಲದೆ ಸರಕಾರವೂ ಮುಸ್ಲಿಮರೂ ಒಂದೇ ಎಂಬಂತೆ ಸರಕಾರ ವರ್ತಿಸಿದಂತಾಗಿದೆಯೆಂದು ಹಿಂದೂಗಳು ತಿಳಿದುಕೊಂಡಿದ್ದಾರೆ. ೧೧ ಜನ ಕಾರ್ಯಕಾರಿ ಮಂಡಲ ಸದಸ್ಯರಲ್ಲಿ ೯ ಜನ ಮುಸ್ಲಿಮರಿದ್ದು ಅವರಿಗೆ ಮತಾಧಿಕಾರವಿರುವದರಿಂದ ಶಾಸನ ಸಭೆಯಲ್ಲಿ ಮುಸ್ಲಿಮರಿಗೆ ಬಹುಮತ ಕಟ್ಟಿಟ್ಟಂತಾಗಿದೆ.

ಹಿಂದೀಯರೊಡನೆ

ಒಪ್ಪಂದ ಮಾಡಿಕೊಳ್ಳದಿದ್ದರೆ ಕ್ರಾಂತಿಯಾಗುತ್ತಿತ್ತು!

ಕಾಂಗ್ರೆಸ್ಸಿನಲ್ಲಿ ಲಕ್ಷಾಂತರ ಅಲ್ಪಸಂಖ್ಯಾಕರಿದ್ದಾರೆ

ಪಾರ್ಲಮೆಂಟಿನಲ್ಲಿ ಚರ್ಚಿಲ್ಲರ ಟೀಕೆಗೆ ಮಂತ್ರಿಗಳ ಉತ್ತರ

ನಡುಗಾಲ ಸರಕಾರ ಯೋಜನೆ ಕುಸಿದುದೆಂತು?

ಪಾರ್ಲಿಮೆಂಟಿನಲ್ಲಿ ಹಿಂದುಸ್ತಾನ

ಬ್ರಿಟಿಶ ಮಂತ್ರಿತ್ರಯರು ಇಂಗ್ಲಂಡಿಗೆ ಮರಳಿದ ನಂತರ ಅವರು ಹಿಂದುಸ್ತಾನದಲ್ಲಿ ಸಾಧಿಸಿದ ಕಾರ್ಯಗಳನ್ನು ಪಾರ್ಲಿಮೆಂಟಿಗೆ ವರದಿಮಾಡಲು ಜುಲೈ ೧೮ಕ್ಕೆ ದಿನ ಗೊತ್ತುಪಡಿಸಲಾಗಿತ್ತು. ಈ ಪ್ರಶ್ನೆಯನ್ನು ಚರ್ಚಿಸಲು ವಿರೋಧಿ ಪಕ್ಷದವರು ಆತುರರಾಗಿದ್ದರು. ಆದರೆ ಹಿಂದುಸ್ತಾನದ ರಾಜಕೀಯ ಪರಿಸ್ಥಿತಿ ಇನ್ನೂ ಬಹಳ ಕೋಮಲವಾಗಿದ್ದುದರಿಂದ ದೀರ್ಘವಾದ ಚರ್ಚೆಯನ್ನು ನಡೆಸಿ ಸಂಧಾನದ ಮಾರ್ಗದಲ್ಲಿ ಹೊಸ ತೊಡಕುಗಳನ್ನು ಉಂಟುಮಾಡಬಾರದೆಂಬ ಸರಕಾರದ ಅಪೇಕ್ಷೆಯನ್ನು ವಿರೋಧಿ ಪಕ್ಷದವರು ಒಪ್ಪಿಕೊಂಡಿದ್ದರು. ಆದುದರಿಂದ ಚರ್ಚೆ ಎಷ್ಟು ಭೀಷಣವಾಗಿರಬಹುದಾಗಿತ್ತೊ ಅಷ್ಟು ಆಗಲಿಲ್ಲ. ಕಿಡಿಗಳು ಹಾರಲಿಲ್ಲ. ಆದರೂ ಚರ್ಚಿಲ್ಲ ಸಾಹೇಬರು ಮಾತ್ರ ತಮ್ಮ ಶಿಥಿಲವಾದ ಹಲ್ಲುಗಳಿಂದ ಸಾಧ್ಯವಿದ್ದಷ್ಟು ವಿಷ ಕಾರಲು ಪ್ರಯತ್ನ ಮಾಡಿದರು.

ಚರ್ಚೆ ಸ್ಟಾಫೋರ್ಡ ಕ್ರಿಪ್ಸರ ಇತಿಹಾಸಕಥನದಿಂದ ಪ್ರಾರಂಭವಾಯಿತು. ಅದರಲ್ಲಿ ಅಂಥ ಹೊಸದೇನೂ ಇದ್ದಿರಲಿಲ್ಲ. ಮಂತ್ರಿತ್ರಯರು ಹಿಂದುಸ್ತಾನಕ್ಕೆ ಬಂದು ಅವರು ಮರಳುವ ವರೆಗಿನ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯಾಗಿತ್ತು ಅವರ ಭಾಷಣ. ಅಲ್ಪ ಸಂಖ್ಯಾಕರ ವಿಷಯದಲ್ಲಿ ಯೋಗ್ಯ ರಕ್ಷಣೆ ಕೊಡಲು ಉಭಯ ಪಕ್ಷಗಳೂ ಸಮ್ಮತಿಸಿದ್ದವೆಂದೂ ಅವರ ಹಕ್ಕು ಬಾಧ್ಯತೆಗಳ ವಿಷಯದಲ್ಲಿ ಸಲಹೆ ಕೊಡಲು ಒಂದು ಸಮಿತಿಯನ್ನು ಏರ್ಪಡಿಸಲು ವ್ಯವಸ್ಥೆಯಾಗಿದೆಯೆಂದೂ ಸಂಸ್ಥಾನಗಳು ಯೂನಿಯನ್ನಿನಲ್ಲಿ ಸೇರಲು ಬಿಡಲು ಸ್ವತಂತ್ರರಾಗಿರುವವೆಂದೂ ಕ್ರಿಪ್ಸರು—ವಿರೋಧಿ ಪಕ್ಷದ ಆಶಂಕೆಗಳನ್ನು ಮುಂಗಂಡೋ ಎಂಬಂತೆ ಆಶ್ವಾಸನವಿತ್ತರು. ಅವರು ಹೇಳಿದ್ದರಲ್ಲಿ ಇನ್ನೊಂದು ಮಹತ್ವದ ಸಂಗತಿ ಯೆಂದರೆ ಘಟನಾ ಸಮಿತಿಯಲ್ಲಿ ಪ್ರವೇಶಿಸಲು ಒಪ್ಪಿದ ನಂತರ ಮೇ ೧೬ ರ (ದೀರ್ಘಕಾಲದ) ಯೋಜನೆಯಲ್ಲಿ ಹೇಳಿದ್ದಕ್ಕೆ ವ್ಯತಿರಿಕ್ತವಾಗಿ ಪಕ್ಷಗಳು ನಡೆಯಲಾರವೆಂದು ತಿಳಿಯಪಡಿಸಿದ್ದು. ಘಟನಾ ಸಮಿತಿಗೆ ಮಂತ್ರಿತ್ರಯರ ಹೇಳಿಕೆಯನ್ನು ಬದಲಿಸುವ ಅಧಿಕಾರವುಂಟೆಂದೂ ಪ್ರಾಂತಗಳು ಗುಂಪುಗಳಿಂದ ಹೊರಗುಳಿಯಲು ಯೋಜನೆಯನ್ವಯ ಅವಕಾಶವುಂಟೆಂದೂ ಕಾಂಗ್ರೆಸ್ಸು ವಾದಿಸುತ್ತ ಬಂದುದಕ್ಕೆ ಇದು ಉತ್ತರವೆಂಬಂತಿತ್ತು. ಹೊಸ ರಾಜ್ಯಘಟನೆ ಎಲ್ಲ ಜಾತಿ ಮತ ಪಂಗಡಗಳ ಅನಿರ್ಬಂಧ ಸಮ್ಮತಿಯಿಂದಲೇ ಸಾಧ್ಯವಾಗುವದೆಂದೂ ಯೂನಿಯನ್ ಸರಕಾರವನ್ನು ಒತ್ತಾಯದಿಂದ ಸ್ಥಾಪಿಸಲಾಗುವದಿಲ್ಲವೆಂದೂ ಅವರು ಹೇಳಿದರು. ಇದರಿಂದ ಹಳೆಯ ಕಾನ್ಸರ್ವೇಟಿವರ ಹಾಡಿನಲ್ಲಿ ಪಲ್ಲವಿಯಾದ "ಸಂಪೂರ್ಣ ಐಕ್ಯ" ದ ಕರಾರನ್ನು ಹೊಸ ಸರಕಾರವಾದರೂ ಪೂರ್ತಿಯಾಗಿ ಬಿಟ್ಟುಕೊಟ್ಟಿಲ್ಲೆಂದು ಕಾಣುವದು.

ಕಾಂಗ್ರೆಸ್ಸಿನ ಮುತ್ಸದ್ದಿತನ

ನಡುಗಾಲ ಸರಕಾರದ ಯೋಜನೆ ಹೇಗೆ ಕುಸಿದು ಬಿತ್ತೆಂಬುದನ್ನು ಕ್ರಿಪ್ಸರು ವಿವರಿಸಿದ್ದು ಆ ರಹಸ್ಯದ ಮೇಲೆ ಬೆಳಕು ಕೆಡಹುತ್ತದೆ. ಒಂದು ಪಕ್ಷ ಈ ಯೋಜನೆಯನ್ನು ತಿರಸ್ಕರಿಸಿದರೆ ಉಳಿದವರನ್ನೊಳಗೊಂಡು ನಡುಗಾಲ ಸರಕಾರ ರಚಿಸುವ ವಿಚಾರ ಮೊದಲು ಇದ್ದುದು ನಿಜ. ಆದರೆ ಕಾಂಗ್ರೆಸ್ಸು ನಡುಗಾಲ ಸರಕಾರದ ಯೋಜನೆಯನ್ನು ತಿರಸ್ಕರಿಸಿದರೂ ದೀರ್ಘಕಾಲದ ಯೋಜನೆಯನ್ನು ಸ್ವೀಕರಿಸಿದ್ದು "ಮುತ್ಸದ್ದಿತನ" ವಾಯಿತೆಂದು ಕ್ರಿಪ್ಸರು ಒಪ್ಪಿಕೊಂಡರು. ಹೀಗೆ ಮಾಡಿದ್ದರಿಂದ ಮಂತ್ರಿತ್ರಯರು ಪೇಚಿಗೆ ಬಿದ್ದರು. ದೀರ್ಘಕಾಲ ಯೋಜನೆಯನ್ನು ಉಭಯ ಪಕ್ಷಗಳೂ ಒಪ್ಪಿರುವಾಗ ನಡುಗಾಲದ ಸರಕಾರದಲ್ಲಿ ಒಂದನ್ನು ಬಿಟ್ಟು ಇನ್ನೊಂದರೊಡನೆ ಸರಕಾರ್ ರಚಿಸುವದು ಸಮಂಜಸವೆಂದು ಅವರಿಗೆ ಅನಿಸಲಿಲ್ಲ. ಆದುದರಿಂದ ಅವರಿಗೆ ಜಿನ್ನಾರು ಸಿಟ್ಟಿಗೆದ್ದರೂ ನಡುಗಾಲಯೋಜನೆಯನ್ನು ಮೂಲೆಗುಂಪು ಮಾಡುವ ಹೊರತು ಬೇರೆ ಉಪಾಯವೇ ಉಳಿಯಲಿಲ್ಲ.

ಸ್ಟಾಫೋರ್ಡರು ಇನ್ನೊಂದು ವಿಷಯವನ್ನೂ ನಿಚ್ಚಳಗೊಳಿಸಿದರು. ಕಾಂಗ್ರೆಸ್ಸಿನ ರಾಷ್ಟ್ರೀಯ ಸ್ವರೂಪವನ್ನು ಅವರು ಒಪ್ಪಿಕೊಂಡದ್ದಲ್ಲದೆ ಬಹ್ಯಸಂಖ್ಯಾಕ ಮುಸ್ಲಿಮರ ಪ್ರತಿನಿಧಿಯಾದ ಮಾತ್ರಕ್ಕೆ ಸರಕಾರದಲ್ಲಿಯ ಮುಸ್ಲಿಮ ಸದಸ್ಯರೆಲ್ಲರನ್ನು ನೇಮಿಸುವ ಹಕ್ಕು ತಮಗಿದೆಯೆಂಬ ಲೀಗದ ವಿಧಾನವನ್ನು ತಾವು ಒಪ್ಪಿಕೊಳ್ಳುವದು ಸಾಧ್ಯವಿಲ್ಲೆಂದೂ ಅವರು ಸಾರಿದರು. ಸೀಖರಿಗೆ ಸಂರಕ್ಷಣೆ ಕೊಡಲು ಎರಡೂ ಪ್ರಮುಖ ಪಕ್ಷಗಳು ಒಪ್ಪಿರುವದರಿಂದ ಅವರು ಸಹಕರಿಸಬೇಕೆಂದೂ ಕ್ರಿಪ್ಸರ ಪ್ರಾರ್ಥನೆಯಾಗಿತ್ತು.

ಚರ್ಚಿಲ್ಲರ ಹೊಟ್ಟೆಯುರಿ

ಕ್ರಿಪ್ಸರ ನಂತರ ಮಾತಾಡಿದ ವಿನ್ಸಟನ್ ಚರ್ಚಿಲ್ಲರು ಹಿಂದೀ ಪ್ರಗತಿಯ ಬಗ್ಗೆ ತಮಗಿರುವ ಅಸಹನೆಯನ್ನು ತೋರಿಸುತ್ತ ಕಾಂಗ್ರೆಸ್ಸು ಸಹಕರಿಸದಿದ್ದರೂ ೨೦ ಲಕ್ಷ ಜನರು ತಮ್ಮೊಡನೆ ಸೇರಿ ಯುದ್ಧದಲ್ಲಿ ಹೋರಾಡಿದ್ದನ್ನು ಎತ್ತಿ ಕೊಂಡಾಡಿದರು. ಈಗಲೂ ಎರಡು ಹಿಂದೀ ಪಕ್ಷಗಳಲ್ಲಿ ಒಪ್ಪಂದವಾಗಿಲ್ಲ. ಭಿನ್ನಾಭಿಪ್ರಾಯಗಳು ಎಂದಿಗಿಂತ ತೀಕ್ಷ್ಣವಾಗಿವೆಯೆಂದರವರು. ಹಿಂದುಸ್ತಾನವನ್ನು ತೆರವು ಮಾಡುವಾಗ ನಾವು (ಬ್ರಿಟಿಶರು) ಅಂತಿಮ ವ್ಯವಸ್ಥೆಗೆ ಕ್ಷತ್ರಿಯ ಜನಾಂಗದ ಒಪ್ಪಿಗೆ ಪಡೆಯುವದು ಜಾಗತಿಕ ಶಾಂತಿಯ ದೃಷ್ಟಿಯಿಂದ ಅವಶ್ಯವಿದೆ. ಸವರ್ಣ ಹಿಂದುಗಳ ಹಿತಕ್ಕಾಗಿ ಒಂಭತ್ತು ಕೋಟಿ ಮುಸ್ಲಿಮರ ಜನಾಂಗವನ್ನು ಹತ್ತಿಕ್ಕಬಾರದು. ಇತ್ಯಾದಿಯಾಗಿ ಚರ್ಚಿಲ್ಲರು ಬಡಬಡಿಸಿದರು. ಮುಂದೆ ಮಂತ್ರಿತ್ರಯರಲ್ಲಿ ಇನ್ನೊಬ್ಬರಾದ ಎ ವಿ ಅಲೆಗ್ಝಾಂಡರರ ಭಾಷಣದ ನಡುವೆ ಬಾಯಿ ಹಾಕಿ ಚರ್ಚಿಲ್ಲರು "ಸ್ವಾತಂತ್ರ್ಯ ತೆಗೆದುಕೊಳ್ಳಿರೆಂದು ನೀವು ಹೇಳುತ್ತೀರಿ. ಅದನ್ನೇ ತೆಗೆದುಕೊಳ್ಳಲು ಹಿಂದೀಯರು ಸಿದ್ಧತೆ ನಡೆಸಿದ್ದಾರೆ. ನಿಜ ಪರಿಸ್ಥಿತಿಯನ್ನು ಕುರಿತು ಎಲ್ಲರೂ ಕಣ್ತೆರೆದು ಎಚ್ಚರದಿಂದಿರಬೇಕು. ನೀವು ಯಾರೊಡನೆ ಮಾತುಕತೆ ನಡೆಸುತಿರುವಿರೋ ಅವರು ಯಾವುದಕ್ಕೂ ಹಿಂಜರಿಯುವದಿಲ್ಲ." ಎಂದು ತಮ್ಮ ನಿಜವಾದ ಭೀತಿಯ ಇಲಿಯನ್ನು ಚೋಣಿನಿಂದ ಹೊರಬಿಟ್ಟರು.

ಕ್ರಾಂತಿಯಾಗುತಿತ್ತು!

ಅನಿರೀಕ್ಷಿತವಾಗಿ ಎನ್ನಬೇಕು, ಚರ್ಚಿಲ್ಲರ ತಲೆಹರಟೆಗೆ ಮಂತ್ರಿತ್ರಯರಲ್ಲಿ ಮೂರನೆಯವರಾದ ಎ ವಿ ಅಲೆಗ್ಝಾಂಡರರು ನಿರ್ದಾಕ್ಷಿಣ್ಯವಾದ ಬಿಚ್ಚುನುಡಿಯ ಉತ್ತರವನ್ನಿತ್ತರು. ಬ್ರಿಟಿಶ ಸಾಮ್ರಾಜ್ಯದಲ್ಲಿ ಸ್ವತಂತ್ರ ರಾಷ್ಟ್ರಗಳ ಮಾಲಿಕೆಯಿರಬೇಕೆಂಬ ಚರ್ಚಿಲ್ಲರ ವಾದ ಸರಿಯಾದರೂ ಹಾಗೆಹೇಳಿ ಸುಮ್ಮನೆ ಕುಳಿತು ಫಲವಿಲ್ಲವೆಂದು ಅವರು ಹೇಳಿದರು. ೧೯೪೨ ರಲ್ಲಿ ನಡೆದು ಕೊಂಡಂತೆ ಈಗಲೂ ತಾವು ನಡೆದು ಕೊಂಡಿದ್ದರೆ ಬರಿಗೈಯಿಂದಲೇ ಮರಳಬೇಕಾಗುತಿತ್ತೆಂದೂ ಪೌರ್ವಾತ್ಯ ರಾಷ್ಟ್ರಗಳಲ್ಲಾದ ವಿಲಕ್ಷಣ ರಾಜಕೀಯ ಜಾಗ್ರತಿಯ ಫಲವಾಗಿ ಹಿಂದುಸ್ತಾನದೊಡನೆ ಒಪ್ಪಂದಮಾಡಿಕೊಳ್ಳದಿದ್ದರೆ ಅಲ್ಲಿ ಅಭೂತಪೂರ್ವ ಕ್ರಾಂತಿಯಾಗುತಿತ್ತೆಂದೂ ರಕ್ತದ ಕಾಲುವೆಗಳನ್ನು ಬ್ರಿಟಿಶರು ಎದುರಿಸಿಕೊಳ್ಳಬೇಕಾಗುತಿತ್ತೆಂದೂ ಅಲೆಗ್ಝಾಂಡರರು ಸ್ಪಷ್ಟವಾಗಿ ನುಡಿದುಬಿಟ್ಟರು. ಅಲ್ಪ ಸಂಖ್ಯಾಕರ ಬಗ್ಗೆ ಚರ್ಚಿಲ್ಲರು ವಹಿಸಿದ ಪ್ರೇಮವನ್ನು ಟೀಕಿಸುತ್ತ ಅವರು ಲಕ್ಷಾಂತರ ಅಲ್ಪ ಸಂಖ್ಯಾಕರೂ ಬಹುಸಂಖ್ಯಾಕ ಹರಿಜನರೂ ಕಾಂಗ್ರೆಸ್ಸನ್ನು ಸೇರಿರುವರೆಂಬುದು ಮೂರು ತಿಂಗಳ ಅನುಭವದಿಂದ ತಮಗೆ ವೇದ್ಯವಾಗಿದೆಯೆಂದು ಹೇಳಿದರು.

ಲಾರ್ಡ್ಸ್‌ಸಭೆಯಲ್ಲಿ ಭಾರತಮಂತ್ರಿಪೆಥಿಕಲಾರೆನ್ಸರು ಮಾಡಿದ ಭಾಷಣದಲ್ಲಿ ವಿಶೇಷ ಏನೂ ಇದ್ದಿಲ್ಲವಾದರೂ ನಡುಗಾಲ ಯೋಜನೆ ಕುಸಿದು ಬೀಳಲು ಒಂದು ವಿಧದಲ್ಲಿ ಜಿನ್ನಾರೇ ಕಾರಣರಾದರೆಂದು ಅಭಿಪ್ರಾಯ ಬರುವಂತೆ ಅವರು ಮಾತಾಡಿದರು. ಕಾಂಗ್ರೆಸ್ಸು ಸಮಪ್ರಾತಿನಿಧ್ಯವನ್ನೂ ಲೀಗದ ಮುಸ್ಲಿಂ ಮಂತ್ರಿಗಳನ್ನು ನೇಮಿಸುವ ಪೂರ್ಣ ಗುತ್ತಿಗೆಯನ್ನು ಒಪ್ಪದಿದ್ದರೂ ಈ ವಿಷಯಗಳನ್ನೆಲ್ಲ ಬದಿಗಿಟ್ಟು ಯೋಜನೆಗೆ ಒಪ್ಪುತಿತ್ತೆಂದೂ ಆದರೆ ಜಿನ್ನಾರವರು ಈ ಸಂಧಿಯಲ್ಲಿ ಲೀಗೇತರ ಮುಸ್ಲಿಮರು ನಡುಗಾಲ ಸರಕಾರದಲ್ಲಿರಬಾರದೆಂದು ಹಟಹಿಡಿದು ವಾಯಿಸರಾಯರಿಗೆ ಪತ್ರಬರೆದುದಲ್ಲದೆ ಆ ಪತ್ರಗಳು ಪ್ರಸಿದ್ಧವಾಗುವಂತೆ ಮಾಡಿದ್ದರಿಂದಲೇ ಕಾಂಗ್ರೆಸ್ಸು ತನ್ನ ಧೋರಣೆ ಬದಲಿಸಬೇಕಾಯಿತೆಂದೂ ಅವರು ತಿಳಿಸಿದರು.

ಮೊದಲು ಸ್ವಾತಂತ್ರ್ಯವಿಲ್ಲ?

ಹಿಂದುಸ್ತಾನ ಚರ್ಚೆಗೆ ಸ್ವಲ್ಪ ಮೊದಲು ಪ್ರಕಟವಾದ ಶ್ವೇತ ಪತ್ರಗಳಲ್ಲಿ ಈ ವರೆಗೆ ಪ್ರಕಟವಾದ ಕೆಲ ಪತ್ರಗಳು ಪ್ರಸಿದ್ಧವಾಗಿವೆ. ಅವುಗಳಲ್ಲಿ ಮೌ. ಅಝಾದರು ದೀರ್ಘಾವಧಿ ಯೋಜನೆಯನ್ನು ಕುರಿತು ವಿವರಣೆ ಕೇಳಿ ೨೦ಕ್ಕೆ ಮಂತ್ರಿಗಳಿಗೆ ಬರೆದ ಪತ್ರ ಮತ್ತು ಅದರ ಉತ್ತರ ಮಹತ್ವದವು. ಗುಂಪಿನ ಯೋಜನೆಯನ್ನು ಎರಡು ಪಕ್ಷಗಳ ಸಮ್ಮತಿಯಿಲ್ಲದೆ ಬದಲಿಸುವದು ಸಾಧ್ಯವಿಲ್ಲ. ಘಟನಾ ಸಮಿತಿಯ ಸಾರ್ವಭೌಮತ್ವ ಮೇ ೧೬ ರ ಯೋಜನೆಗೊಳಪಟ್ಟಿದ್ದು ಅದರ ನಿರ್ಣಯಕ್ಕೆ ಪಾರ್ಲಮೆಂಟು ಸಮ್ಮತಿಸಬೇಕಾಗುವದು. ಮತ್ತು ಆ ಸಮ್ಮತಿ ದೊರಕಬೇಕಾದರೆ ಅಲ್ಪ ಸಂಖ್ಯಾಕರಿಗೆ ಸಾಕಷ್ಟು ರಕ್ಷಣೆ ಕೊಡಬೇಕು ಮತ್ತು ಅಧಿಕಾರತ್ಯಾಗದಿಂದುದ್ಭವಿಸಬಹುದಾದ ಸಮಸ್ಯೆಗಳ ಬಗ್ಗೆ ಬ್ರಿಟನದೊಡನೆ ಯೋಗ್ಯ ಒಪ್ಪಂದ ಮಾಡಿಕೊಳ್ಳಬೇಕು. ಎಂಬದಾಗಿ ಭಾರತ ಮಂತ್ರಿಗಳು ಸ್ಪಷ್ಟೀಕರಿಸದ್ದಲ್ಲದೆ ಹೊಸರಾಜ್ಯ ಘಟನೆ ಜಾರಿಯಲ್ಲಿ ಬರುವ ಮೊದಲು ಸ್ವಾತಂತ್ರ್ಯ ದೊರೆಯಲಾರದೆಂದು ತಿಳಿಸಿದ್ದಾರೆ.

ಶಿವಮೊಗ್ಗಿಯಲ್ಲಿ ೧೮ ಕ್ಕೆ ೫ ಪಲ್ಲ ಅಕ್ಕಿ ತೆಗೆದು ಕೊಂಡು ಒಂದು ಕಾರು ಚಿತ್ರದುರ್ಗದ ಕಡೆಗೆ ಹೋಗುತಿರುವದನ್ನು ನೋಡಿ ಇಬ್ಬರು ಕಾನಸ್ಟೇಬಲ್ಲರು ಒಬ್ಬ ದಫೇದಾರನು ಅದನ್ನು ನಿಲ್ಲಿಸಲು ಪ್ರಯತ್ನಿಸಿದರು. ಮೋಟರು ಸಾಯಕಲ್ ಮೇಲೆ ಹೊರಟ ಕಾನಸ್ಟೇಬಲ್ಲನ ಸಾಯಕಲ್ಲನ್ನು ಪುಡಿಪುಡಿ ಮಾಡಿ ಮುಂದೆ ಹೋಯಿತು. ಸುದೈವದಿಂದ ಕಾನಸ್ಟೇಬಲ್ಲನಿಗೆ ಏನೂ ಆಗಲಿಲ್ಲ. ಪೋಲೀಸ ಅಧಿಕಾರಿಗಳು ಮುಂದಿನ ಕ್ರಮ ನಡೆಸಿದ್ದಾರೆ.

ಮೂಲ ಶಿಕ್ಷಣಕ್ಕೆ ೭೮ ಲಕ್ಷ ರೂಪಾಯಿ

ಮುಂಬಯಿ ಶಾಸನ ಸಭೆಯಲ್ಲಿ ಪೂರಕ ಬೇಡಿಕೆಗಳು

ಲೀಗಿನವರ ಟೀಕೆ

ಮುಂಬಯಿ ಶಾಸನ ಸಭೆಯಲ್ಲಿ ಈ ವಾರ ಜರಗಿದ ಕಾರ್ಯಕಲಾಪಗಳಲ್ಲಿ ಹೆಚ್ಚಿನ ಅಂಶ ಪೂರಕ ಬೇಡಿಕೆಗಳಿಗೆ ಸಂಬಂಧಿಸಿತ್ತು. ಕಾಂಗ್ರೆಸ್ ಸರಕಾರದವರು ಕೈಕೊಂಡ ಹೊಸ ಧೋರಣೆಗನುಸಾರವಾಗಿ ಬೇಕಾಗುವ ಅನೇಕ ವೆಚ್ಚಗಳಿಗೆ ಈ ಬೇಡಿಕೆಗಳು ಸಂಬಂಧಿಸಿದ್ದವು. ವಿರೋಧಿ ಪಕ್ಷದವರು, ಅಂದರೆ ಲೀಗಿನವರು ಅವುಗಳಿಗೆ ೪೭ ಕಡಿತದ ಸೂಚನೆಗಳನ್ನು ಮುಂದಿಸಿದ್ದರೂ ಅವುಗಳಲ್ಲಿ ೪೧ ಯಾವ ನಿರ್ದಿಷ್ಟ ಖಾತೆಗೂ ಸಂಬಂಧಿಸಿರದಿದ್ದುದರಿಂದ ಅವುಗಳನ್ನು ನಿಯಮಬಾಹ್ಯ ಮಾಡಲಾಯಿತು. ಮುಂದಿಸಲಾದ ಪೂರಕ ಬೇಡಿಕೆಗಳ ಒಟ್ಟು ಮೊತ್ತ ೫,೯೯,೨೬,೯೯೬ ರೂಪಾಯಿಗಳಷ್ಟಿತ್ತು. ಈ ಹಣದಲ್ಲಿ ಕಾಲು ಭಾಗವನ್ನು ಬರಗಾಲ ಪೀಡಿತವಾದ ಸಾತಾರಾ, ಪುಣೆ, ಅಹಮದನಗರ, ಧಾರವಾಡ, ಬೆಳಗಾವಿ, ಜಿಲ್ಹೆಗಳಿಗೆ ಪರಿಹಾರ ಕೊಡಲು ವೆಚ್ಚ ಮಾಡಲಾಗುವದು. ಬರಗಾಲ ಪ್ರದೇಶದಲ್ಲಿ ಮೇ ದಿಂದ ಅಕ್ಟೋಬರವರೆಗೆ ಅಗ್ಗ ದರದಲ್ಲಿ ಕಾಳು ಹಂಚುವ ಸಲುವಾಗಿ ೭೨ ಲಕ್ಷ ರೂಪಾಯಿ ಚಿಕ್ಕ ಮಕ್ಕಳಿಗೂ ಗರ್ಭಿಣಿಯರಿಗೂ ಪುಕ್ಕಟೆ ಹಾಲು ಪೂರಯಿಸಲು ೮೨ ಲಕ್ಷ ರೂಪಾಯಿ, ಮೂಲ ಶಿಕ್ಷಣದ ಯೋಜನೆಯನ್ನು ಜಾರಿಗೆ ತರಲು ೭೮,೫೪,೪೦೪ ರೂಪಾಯಿ, ಮುಂಬಯಿ ನಗರದಲ್ಲಿ ಲಂಚ ನಿರೋಧಕ ಶಾಖೆಯನ್ನು ತೆರೆಯಲು ೭೨,೬೦೦೦ ರೂಪಾಯಿ ಇತ್ಯಾದಿಯಾಗಿ ವಿಭಜಿಸಲಾಗಿದೆ.

ಮುಸ್ಲಿಂ ಲೀಗಿನ ಟೀಕೆಗಳು


ಕಡಿತಗಳನ್ನು ಮುಂದಿಸುತ್ತ ಲೀಗ್ ಸದಸ್ಯರು ಸರಕಾರವನ್ನು ಹಲ ವಿಧವಾಗಿ ಟೀಕಿಸಿದರು. ಸರಕಾರದವರು ಮದ್ಯಪ್ರತಿಬಂಧವನ್ನು ಸಾಕಷ್ಟು ವೇಗದಿಂದ ಮುಂದೆ ಸಾಗಿಸುತ್ತಿಲ್ಲವೆಂದು ಅಬಕಾರಿ ಬೇಡಿಕೆಯ ಕಾಲಕ್ಕೆ ಟೀಕಿಸಲಾಯಿತು. ಮೂಲ ಶಿಕ್ಷಣದ ಬಗ್ಗೆ ಅವರ ಪ್ರತಿಭಟನೆ ವಿಶೇಷವಾಗಿತ್ತು. ವೃತ್ತಿ ಮೂಲಕವಾಗಿ ಶಿಕ್ಷಣ ಕೊಡುವ ತತ್ವ ತಮಗೆ ಅಸಮ್ಮತವಲ್ಲದಿದ್ದರೂ ಚರಕಾವನ್ನು ಅದರಲ್ಲಿ ತಂದಿಕ್ಕಿ ಮುಸ್ಲಿಮರ ಮೇಲೆ ಗಾಂಧೀ ತತ್ವವನ್ನು ಹೇರಲಾಗುವದೆಂದು ಅವರು ಆಕ್ಷೇಪಿಸಿದರು. ಇದಕ್ಕೆ ಮುಖ್ಯಮಂತ್ರಿಗಳೂ ಶಿಕ್ಷಣ ಮಂತ್ರಿಗಳೂ ಅದ ಖೇರರು ಉತ್ತರವಿತ್ತು ಈ ಟೀಕೆಗೆ ಪುನಃ ಕಷಾಯವೇ ಕಾರಣವೆಂದೂ ಅದನ್ನು ಬಿಟ್ಟರೆ ಮತ್ತು ಕೇವಲ ಶೈಕ್ಷಣಿಕ ದೃಷ್ಟಿಯಿಂದ ನೋಡಿದರೆ ಯೋಜನೆಯಲ್ಲಿ ಯಾವ ದೋಷವೂ ಇಲ್ಲವೆಂದೂ ನೂಲುವ ವಿಷಯದಲ್ಲಿ ಆಕ್ಷೇಪವಿದ್ದರೆ ವಿದ್ಯಾರ್ಥಿಗಳಿಗೆ ಇತರ ಕೈಗಾರಿಕೆಗಳ ಮೂಲಕ ಶಿಕ್ಷಣ ಪಡೆಯಲು ಅವಕಾಶವೊದಗಿಸಲಾಗುವದೆಂದೂ ಸಮಾಧಾನ ಹೇಳಿದರು. ಬೇಡಿಕೆ ಪ್ರಚಂಡ ಬಹುಮತದಿಂದ ಮಂಜೂರಾಯಿತು. ಲಂಚ ನಿರೋಧಕ ಬೇಡಿಕೆಯ ಬಗ್ಗೆ ಲೀಗ್ ಸದಸ್ಯ ಮಿರ್ಜಾ ಅಖ್ತಾರ ಹಸನ್ನರು ಟೀಕಿಸುತ್ತ ಪೋಲೀಸರೇ ಲಂಚನಿರೋಧನ ಶಾಖೆಯಲ್ಲಿರುವದರಿಂದ ಅದು ಫಲಕಾರಿಯಾಗುವ ಸಂಭವವಿಲ್ಲವೆಂದು ದೂರಿದರು. ಬಡಸಂಬಳದ ಪೋಲೀಸರ ಮೇಲೆ ತೀಕ್ಷ್ಣಕ್ರಮ ಕೈಕೊಳ್ಳಬಾರದೆಂದೂ ಅವರ ಅಭಿಪ್ರಾಯವಿತ್ತು.

ಪೂರಕ ಬೇಡಿಕೆಗಳ ಚರ್ಚೆ ಮುಗಿದ ನಂತರ ತಾ ೨೭ಕ್ಕೆ ಅಧಿವೇಶನ ಮುಗಿಯುವದು.

ಲೀಲಾವತಿಯವರ ಮಸೂದೆ

ಶ್ರೀಮತಿ ಲೀಲಾವತಿ ಮುನಶಿಯವರು ಪದವೀಧರ ಮತ್ತು ಮ್ಯಾಟ್ರಿಕ್ಯುಲೇಟರನ್ನು ಒತ್ತಾಯದ ಶಿಕ್ಷಕತನಕ್ಕೆ ಹಚ್ಚಬೇಕೆಂದು ತಂದ ಗೊತ್ತುವಳಿಯನ್ನು ವಿರೋಧದ ಮೂಲಕ ಮಂತ್ರಿಗಳ ಅಪೇಕ್ಷೆಯಂತೆ ಹಿಂತೆಗೆದುಕೊಳ್ಳಲಾಯಿತು.

ಹಿಂದೂ, ಸೀಖ, ಜೈನ, ಆರ್ಯಸಮಾಜ, ಬ್ರಹ್ಮಸಮಾಜಕ್ಕೆ ಸೇರಿದವರ ಬಹುಪತ್ನಿತ್ವವನ್ನು ಪ್ರತಿಬಂಧಿಸುವ ಮಸೂದೆಯೊಂದನ್ನು ಮುಂಬಯಿ ಸರಕಾರ ತರಲಿದೆ.



ಮುಂಬಯಿ ಶೇರಪೇಟೆ

ಜುಲೈ ೨೪

ಮುಂಬಯಿ ಶೇರ ಪೇಟೆಯಲ್ಲಿ ಪ್ರಮುಖ ಕಂಪನಿಗಳ ಪಾಲುಗಳು ಇನ್ನೊಂದು ಅಭೂತಪೂರ್ವ ಘಟ್ಟವನ್ನೇರಿವೆ. ಹೊಸ ೩॥ ದರದ ಬಡ್ಡಿಯ ಸರಕಾರಿ ಸಾಲದ ಸಾರುವಿಕೆಯಿಂದಲೂ ಬ್ಯಾಂಕ್ ದರ ೨॥ ಗೆ ಇಳಿಯುವದೆಂಬ ಸಂಶಯದಿಂದಲೂ ಅದಕ್ಕಿಂತ ಹೆಚ್ಚು ಉತ್ಪನ್ನ ಕೊಡುವ ಪಾಲುಗಳಿಗೆ ತೇಜೀ ಮಂದಿ ವ್ಯಾಪಾರಸ್ಥರು ಮುಸುರುತ್ತಾರೆ. ಹೀಗೆ ಟಾಟಾ ಸ್ಟೀಲ ಡೆಫರ್ಡ ೩೩೧೮—೧೨—೦ ರಿಂದ ೩೪೪೩—೧೨—೦ ರ ವರೆಗೇರಿ ೩೪೪೨-೮-೦ ರಲ್ಲಿ ನಿಂತಿದೆ. ಡಾಯಿಂಗ ೨೮೦೫—೦—೦ ರಿಂದ ೨೯೪೨—೮—೦ ಕ್ಕೇರಿ ೨೯೩೫-೦-೦ ರಲ್ಲಿಯೂ ಕೋಹಿನೂರು ೧೦೫೮-೦-೦ ರಿಂದ ೧೧೨೩-೦-೦ ಕ್ಕೂ ಸ್ವದೇಶಿ ೯೦೬-೯-೦ ರಿಂದ ೯೮೬-೮-೦ ಕ್ಕೂ ಗೋಕಾಕ ೪೨೦-೦-೦ ರಿಂದ ೫೦೬-೦-೦ ಕ್ಕೂ ಸೆಂಟ್ರಲ್ ಇಂಡಿಯಾ ೫೨೫-೦-೦ ರಿಂದ ೫೬೭-೦-೦ ಕ್ಕೂ ಸೆಂಚೂರಿ ೧೨೨೫-೦-೦ ರಿಂದ ೧೩೦೦-೦- ಕ್ಕೂ ಬೇಲಾಪುರ ೩೪೯-೦-೦ ೩೬೬-೦-೦ ಕ್ಕೂ ಏರಿದವು. ಸಿಂಧ್ಯ ಸ್ಟೀಮ ೫೯-೬೦ ರ ಸುತ್ತ ಚಲಿಸುತ್ತಿದೆ. ಅಸೋಸಿಯೇಟೆಡ್ ಸಿಮೆಂಟ್ಸ ೨೬೮-೦-೦ ರಿಂದ ೨೭೮-೦-೦ ಕ್ಕೇರಿದೆ. ಬ್ಯಾಂಕ ಪಾಲುಗಳಲ್ಲಿ ಇಂಪೀರಿಯಲ್ ಎಫ್ ಸಿ ೩೨೨೨-೦-೦ ರಿಂದ ೩೩೧೦-೦-೦ ಕ್ಕೇರಿದರೆ ಸೆಂಟ್ರಲ್ ಬ್ಯಾಂಕ್ ೧೫೫-೮-೦ ರಿಂದ ೧೫೬-೮-೦ ಕ್ಕೇರಿದೆ. ರಿಜರ್ವ ಬ್ಯಾಂಕ್ ೧೭೮-೦-೦ ರಿಂದ ೧೭೯-೦-೦.

ಸರಕಾರಿ ಸಾಲಪತ್ರಗಳಲ್ಲಿ ಜಿ. ಪಿ. ನೋಟು ೧೦೫-೬-೦ ರಿಂದ ೧೦೬-೧೩-೦ ಕ್ಕೆ ೩॥ (೧೯೪೭-೫೦) ಸಾಲ ೧೦೨-೧೧-೦ ರ ಸುತ್ತ ಇವೆ.

ಚಿನ್ನ—ಬೆಳ್ಳಿ

ಚಿನಿವಾರ ಕಟ್ಟೆಯಲ್ಲಿ ಪೂರೈಕೆಯ ಪರಿಸ್ಥಿತಿ ಸುಧಾರಿಸುವ ಮೊದಲೇ ಭಯದಿಂದ ಮಾರಾಟ ಹೆಚ್ಚಿಬಿಟ್ಟದ್ದರಿಂದ ೮೬-೧೦-೦ ಕ್ಕೆ ಇಳಿದು ಹೋದ ನಂತರ ಮುಂದೆ ತೇಜೀ ವ್ಯಾಪಾರಿಗಳು ಇದರ ಪ್ರಯೋಜನ ಪಡೆದು ದರಗಳನ್ನು ಮುಂದೊತ್ತಲು ಸಮರ್ಥರಾದರು. ತಯಾರಿ ಚಿನ್ನ ೯೬-೧೪-೦ ಕ್ಕೇರಿದೆ. ವಾಯದಾ ೯೫—೧೦—೦, ಬೆಳ್ಳಿಯಾದರೂ ೧೫೫-೮—೦ ರಿಂದ ೧೬೪-೦-೦ ಕ್ಕೆ ಸುಧಾರಿಸಿತು. (ವಾಯದಾ ೧೬೪-೧೪-೦)

ಅರಳೆ

ಅರಳೆ ಧಾರಣೆಯ ಭವಿತವ್ಯ ತಾ. ೨೯ ಕ್ಕೆ ಜವಳಿ ನಿಯಂತ್ರಕನಿಂದ ನಿರ್ಣಯಿಸಲ್ಪಡುವದು. ಬೆಲೆಗಳನ್ನು ಏರಿಸದೆ ಸರಕಾರಕ್ಕೆ ವಿಧಿಯೇ ಇಲ್ಲ. ಆದರೆ ಸದ್ಯಕ್ಕೆ ಹಳೆ ಅರಳೆಯಲ್ಲಿ ವ್ಯಾಪಾರಿಗಳಿಗೆ ಆಸ್ಥೆಯಿಲ್ಲ. ಅದ್ದರಿಂದ ದರಗಳು ಕುಂಟುತ್ತ ಚಲಿಸುತ್ತಿವೆ. ಕಳೆದ ವಾರಾಂತ್ಯದಲ್ಲಿ ೪೬೮-೦-೦ ರ ವರೆಗೆ ಹೋದ ಜುಲೈ ಅರಳೆ ೪೬೫—೧೨—೦ ಕ್ಕಿಳಿದು ೪೬೭-೮-೦ ಗೇರಿತು. ಸೆಪ್ಟೆಂಬರ ವಾಯದೆ ೪೭೪-೦-೦

ಎಣ್ಣೆ ಕಾಳು

ಶೇಂಗಾ	೧೨೦—೦—೦
ಅಗಸಿ	೨೬—೮—೦
ಅಗಸಿ ಎಣ್ಣೆ	೧೭—೦—೦

ಶಿವಮೊಗ್ಗೆ

ತಾ ೧೬

ದೇಶಾವರ ನಂ೧	ಮಣ೧ಕ್ಕೆ ೨೬	ರಿಂದ	೨೭
,, ,, ೨	೨೪॥	,,	೨೫॥
,, ,, ೩	,, ೨೩	,,	೨೪
ರಾಜಾ ಅಲವು			೨೪—೨೫
ನುಲಿ			೨೪—೨೫
ವಂಟಿ ಬೆಟ್ಟ			೧೮॥ ೧೯
ಬೆಟ್ಟ		,, ೧೬॥	,, ೧೮

ಬೆಟ್ಟ ಜಾತಿಗೆ ಒಳ್ಳೆ ಬೇಡಿಕೆಯುಂಟು.

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿ ಮಣ ರೂ.	೧೪—೧೬
ಅರಿಷಿಣ ಹೇರು	೮೦—೮೮
ಶೇಂಗಾ ಖಂಡಿ ,,	೧೦೫॥—೧೦೭
ಮೆಣಸಿನಕಾಯಿ ಹೇರು ,,	೧೮೦—೧೯೫
ದೇಶಿ ತಂಬಾಕು ಹೇರು	೧೦೦—೨೧।೦
ತಂಬಾಕ ಪಂಢರಪುರಿ ,,	೧೫೦—೨೭೫
ತಂಬಾಕು ಅಕೋಳ (ಹೇರು)	೨೨೫—೩೭೫

ಹುಬ್ಬಳ್ಳಿ ಪೇಟೆ

ಜಯವಂತ ಹತ್ತಿ	ನಂ. ೧	೩೦೦-೩೦೫
,,	ನಂ. ೨	೨೯೦-೨೯೫
,,	ನಂ. ೩	೨೮೦-೨೮೫
		೨೨೨೦-೨೩೫
ಜಿನ		೨೧೦-೨೧೫
ಡಬಲರೋಲರ		೨೦೫-೨೨೦

ದಕ್ಷಿಣ ಕನ್ನಡ

ಮಂಗಳೂರಲ್ಲಿ ಜುಲೈ ೧೮ರ ವರೆಗೆ ೮೦.೩ ಇಂಚು ಮಳೆ ಸುರಿದಿದ್ದು ಇದು ಸರಾಸರಿಗಿಂತ ೧೮. ೪ ಇಂಚು ಅಧಿಕವಾಗಿವೆ.

ಮಂಗಳೂರ ಜಿಲ್ಹಾ ಬೋರ್ಡ ಮತ್ತು ನಗರ ಸಭೆಯ ಚುನಾವಣೆಗಳು ಅಕ್ಟೋಬರದಲ್ಲಿ ಜರುಗಲಿವೆ.

ತಾ ೧೨ಕ್ಕೆ ಮಂಗಳೂರ ಮಿಶನ್ ಹಾಯಸ್ಕೂಲಿನಲ್ಲಿ ಹಿರಿಯ ವಿದ್ಯಾರ್ಥಿಗಳ ಕರ್ನಾಟಕ ಸಭೆಯ ಉದ್ಘಾಟನೆಯನ್ನು ಶ್ರೀ ಕೆ ಬಾಲಕೃಷ್ಣರಾವ ಇವರು ನೆರವೇರಿಸಿದರು. ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ಉದ್ಘಾಟಕರು ಒತ್ತಿ ಹೇಳಿದರು.

ಉಡುಪಿಯ ಕಲಾವೃಂದದ ಎರಡನೆ ಹುಟ್ಟುಹಬ್ಬ ತಾ ೧೩-೧೪ರಲ್ಲಿ ಲೇಖನ, ಭಾಷಣ ಸ್ಪರ್ಧೆ, ಪ್ರಮುಖ ಸಾಹಿತಿಗಳ ಭಾಷಣಗಳಿಂದ ಸಾಂಗವಾಯಿತು.

ಮಂಗಳೂರಿನ ಅಸೋಸಿಯೇಟೆಡ ಎಂಜಿನಿಯರ್ಸ ಕಾರ್ಪೋರೇಶನ್ನಿನವರು ರೈತರಿಗೆ ನೀರಾವರಿ ವಿಷಯದಲ್ಲಿ ಸಲಹೆ ಕೊಡಲು ಮಂಗಳೂರು ತಾಲೂಕು ಕಚೇರಿಯ ಬಳಿ ಒಂದು ಕಚೇರಿಯನ್ನು ತೆರೆದಿರುವರು.

ಬಿರುದು ಪಡೆದ ಮಹನೀಯರು

ಮೈಸೂರು ಮಹಾರಾಜರ ವರ್ಧಂತಿ

ಶ್ರೀಮನ್ಮಹಾರಾಜರು ತಮ್ಮ ವರ್ಧಂತಿ ನಿಮಿತ್ತ ಈ ಕೆಳ ಕಂಡ ಮಹನೀಯರಿಗೆ ಬಿರುದುಗಳನ್ನು ದಯಪಾಲಿಸಿದ್ದಾರೆ.

೧ ಲೇಡಿ ತಂಬೂಚೆಟ್ಟಿಯವರು ದೇಶೋಪಕಾರಿಣಿ; ೨ ಶ್ರೀ ಎಸ್ ವೆಂಕಟರಂಗೈಯಂಗಾರ ರಾಜಧರ್ಮಪ್ರಸಕ್ತ; ೩] ಬಿ ಎಂ ಶ್ರೀನಿವಾಸಯ್ಯ ೪ ಎಂ ನರಸಿಂಹಯ್ಯ ರಾಜಕಾರ್ಯ ಪ್ರಸಕ್ತ; ೫ ಎಂ ಎಸ್ ರಾಮಚಂದ್ರರಾವ್ ೬ ಎಂ ಸಿ ಸುಬ್ರಹ್ಮಣ್ಯ ರಾಜೆ ಅರಸ್ ೭ ಎಸ್ ವೆಂಕಟೇಶಯ್ಯ ೮ ಸಿ ನರಸಿಂಹಯ್ಯ ರಾಜಸೇವಾಸಕ್ತ; ೯. ಪೆರುಮಾಳಶೆಟ್ಟರು, ೧೦. ಬಿ. ಎಸ್. ಗೋಪಾಲರಾವ, ೧೧ ರಾಜನಹಳ್ಳಿ ಮದ್ದೂರಾಯಪ್ಪ ೧೨ ನಂದಿ ಬಸಪ್ಪ ಧರ್ಮರತ್ನಾಕರ; ೧೩ ಡಾ. ಟಿ. ಎಸ್ ಸಿದ್ದಪ್ಪ ಧರ್ಮಪ್ರವೃತ್ತ; ೧೪ ಸಂ. ವಿ. ವೆಂಕಟಗಿರಿಯಪ್ಪ ಸಂಗೀತ ವಿಶಾರದ; ೧೫ ಶ್ರೀ ಅರೈಕುಡಿ ರಾಮಾನುಜ ಅಯಂಗಾರ್ ಗಾಯಕ ಶಿಖಾಮಣಿ; ೧೬ ಶ್ರೀ ದ್ವಾರಂ ವೆಂಕಟಸ್ವಾಮಿ ನಾಯಡು ಸಂಗೀತ ರತ್ನಾಕರ; ೧೭ ಶ್ರೀಗಳಾದ ತಿಟ್ಟೆ ಕೃಷ್ಣ ಅಯ್ಯಂಗಾರ ೧೮ ಬಿ ದೇವೇಂದ್ರಪ್ಪ ಗಾನ ವಿಶಾರದ; ೧೯ ಶ್ರೀ ಎಂ ಅಬ್ದುಲ್ ಅಜೀಜಖಾನ್ ಮತಾಮದ್-ಉಲ್ಮುಲ್ಕ; ೨೦ ಶ್ರೀ ಮಹಾವಿದ್ವಾನ್ ಎಸ್ ಡಿ ವೆಂಕಟಾಚಾರ್ ಸಾಹಿತ್ಯರತ್ನ; ೨೧ ನ್ಯಾಯತೀರ್ಥ ಶಾಂತರಾಜಶಾಸ್ತ್ರಿ ಪಂಡಿತರತ್ನ; ೨೨ ಶ್ರೀ ತಿಮ್ಮಾಚಾರಿ ಚೆಲುವಾಚಾರಿ ವಾಸ್ತುಶಿಲ್ಪ ಸೇವಾಸಕ್ತ;

ಬೆಂಗಳೂರು-ಮೈಸೂರು

ಮೈಸೂರು ಸಂಸ್ಥಾನದ ಮೂಲ ಶಿಕ್ಷಣ ಶಿಬಿರದ ಆರಂಭೋತ್ಸವ ತಾ. ೨೧ ಕ್ಕೆ ಶ್ರೀ ಎಲ್. ಎಸ್. ವೆಂಕಾಜಿರಾಯರ ಅಧ್ಯಕ್ಷತೆಯಲ್ಲಿ ಬೆಂಗಳೂರು ಕೆಂಗೇರಿ ಗುರುಕುಲಾಶ್ರಮದಲ್ಲಿ ನೆರವೇರಿತು. ಆರಂಭೋತ್ಸವವನ್ನು ಮದ್ರಾಸಿನ ವಿದ್ಯಾಸಚಿವರಾದ ಟಿ. ಎಸ್. ಅವಿನಾಶಲಿಂಗಂ ಚೆಟ್ಟಿಯಾರರು ಜರಗಿಸಿದರು. ಸರ್ ಸಿ. ವಿ ರಾಮನ್ ಮೊದಲಾದ ಪ್ರಮುಖರು ಭಾಷಣ ಮಾಡಿದರು.

ನಾನ್ ಗಜೆಟೆಡ್ ವರ್ಗದ ಅಧಿಕಾರಿಗಳಿಗೆ ನೂರಕ್ಕೆ ೫೦ ರಷ್ಟು ಹೆಚ್ಚಾಗಿ ತುಟ್ಟಿ ಭತ್ತೆ ಕೊಡಲು ಮೈಸೂರು ಸರಕಾರದವರು ನಿರ್ಣಯಿಸಿದ್ದಾರೆ. ೨೫೦ ರೂಪಾಯಿ ವರೆಗೂ ಸಂಬಳವಿರುವ ಈ ವರ್ಗದ ತುಟ್ಟಿ ಭತ್ತೆಗಾಗಿ ೩೬.೫ ಲಕ್ಷ ರೂಪಾಯಿ ಹೆಚ್ಚಿಗೆ ವಾರ್ಷಿಕ ವೆಚ್ಚ ವೊದಗುವದೆಂದು ತಿಳಿಯುತ್ತದೆ.

ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷತೆಗೆ ಶ್ರೀ ಕೆ. ಚಂಗಲರಾಯರೆಡ್ಡಿ, ಟಿ. ಸಿದ್ಧಲಿಂಗಯ್ಯ, ಎಚ್. ಸಿ. ದಾಸಪ್ಪ, ಶ್ರೀಮತಿ ಯಶೋಧರಾ ದಾಸಪ್ಪಾ, ಎನ್ ಸಿ. ತಿಮ್ಮಾರೆಡ್ಡಿ, ಕೆ. ವಿ. ವೀರಪ್ಪ ಇವರು ಹುರಿಯಾಳುಗಳಾಗಿದ್ದಾರೆ. ಚುನಾವಣೆ ಜುಲೈ ೩೧ ಕ್ಕೆ ಜರಗುವದು.

ದಕ್ಷಿಣ ಸಂಸ್ಥಾನಗಳ ಸಂಯೋಜನೆಯ ಯೋಜನೆಯನ್ನು ಕುರಿತು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಒಂದು ಹೇಳಿಕೆ ಹೊರಡಿಸಿ, ಇದು ಪ್ರಜಾ ಪ್ರಭುತ್ವದ ಹೆಸರಲ್ಲಿ ನಿರಂಕುಶ ಆಡಳಿತ ನಡೆಸುವ ಸಂಸ್ಥಾನಾಧೀಶರ ಕೂಟವೆಂದು ಸಾರಿದ್ದಾರೆ.

ದಿವಾಣ ಪದವಿಗೆ ಮೈಸೂರಿನವರಲ್ಲದವರನ್ನು ನೇಮಿಸಬಾರದೆಂಬ ಅಭಿಪ್ರಾಯದ ಗೊತ್ತುವಳಿಯನ್ನು ಮೈಸೂರು ಸಂಸ್ಥಾನದ ಪತ್ರಿಕೋದ್ಯಮಿ ಸಂಘದವರು ಪಾಸುಮಾಡಿದ್ದಾರೆ.

ಹಿಂದುಸ್ತಾನದ ಘಟನಾ ಸಮಿತಿ

[೪ ನೇ ಪುಟದಿಂದ ಮುಂದರಿದುದು]

೧೩] ಸೆರಾಜುಲ್ ಇಸ್ಲಾಮ ೧೪] ತಾಮಿಜುದ್ದೀನ ಖಾನ ೧೫] ಡಾ. ಮಹಮ್ಮದ ಹುಸೇನ ೧೬] ಮಜರುಲ್ ಹಕ್ ೧೭] ಅಜೀಜುಲ ಹಕ ೧೮] ಖಾ. ಬ ಅಬ್ದುಲ್ಲಾ ಮಹಮ್ಮದ ೧೯] ಖಾ. ಬ. ಗೈಸುದ್ದೀನ ಪಠಾಣ ೨೦] ಮಹಮ್ಮದ ಹುಸೇನ ಮಲಿಕ ೨೧] ಶ್ರೀಮತಿ ಇಕ್ರಮುಲ್ಲಾ ೨೨] ಖಾ. ಬ. ಬಜಲುಲ್ ಕರಿಮ ೨೩] ಮೋಲಾನಾ ಶಬೀರ ಅಹಮದ ಉಸ್ಮಾನಿ ೨೪] ಪ್ರೊ. ಇಸ್ತಿಯಾಕ ಹುಸೇನ ಕುರೇಶಿ ೨೫] ಮಹಮ್ಮದ ಹಸನ ೨೬] ಹಮೀದುಲ ಹಕ್ಕ ಚೌಧರಿ ೨೭] ಮಹಮ್ಮದ ಅಬ್ದುಲ್ಲಾ ಎಲ್ ಬಾಕಿ ೨೮] ಶಹಾಜಾದಾ ಯುಸುಫ ಮಿರಜಾ ೨೯] ಕೆ ನೂರುದ್ದೀನ ೩೦) ಫರಮಾಜುಲ ಹಕ ೩೧] ಖಾ ಬ ಅಲ್ತಾಫ ಅಹಮ್ಮದ ೩೨ ಎಸ್ ಅಲ್ಲಿ ೩೩] ಎ ಕೆ ಫಜಲುಲ್ ಹಕ (ಕೊನೆಯವರು ಕೃಷಿಕ ಪ್ರಜಾಪಕ್ಷದವರು ಉಳಿದವರೆಲ್ಲ ಲೀಗ ಪ್ರತಿನಿಧಿಗಳು.

ಆಸಾಮ [೧೦]

ಸಾಮಾನ್ಯ [೭]

೧] ಗೋಪಿನಾಥ ಬಾರ್ಡೋಲಾಯ ೨] ರೋಹಿಣಿಕುಮಾರ ಚೌಧರಿ ೩] ವಸಂತ ಕುಮಾರ ದಾಸ ೪] ರೆ. ನಿಕ್ಲೋಲರಾಯ ೫] ಓಮಾಯ ಕುಮಾರದಾಸ ೬] ಧರಣಿಪುರ ವಸುಮತ ೭] ಅಕ್ಷಯಕುಮಾರದಾಸ (ಎಲ್ಲರೂ ಕಾಂಗ್ರೆಸ ಪ್ರತಿನಿಧಿಗಳು)

ಮುಸಲ್ಮಾನ [೩]

೧] ಸರ್ ಮಹಮ್ಮದ ಸಾದುಲ್ಲಾ ೨] ಮೌಲ್ವಿ ಅಬ್ದುಲ ಹಮೀದ ೩] ಅಬ್ದುಲ್ ಮತಿನ ಚೌಧರಿ (ಎಲ್ಲರೂ ಲೀಗ ಪ್ರತಿನಿಧಿಗಳು)

ಈ ವಾರದ ಕತೆ

ರಾಜ ಗುರು

ಬರೆದವರು:— ದಲಕೆ

"ಒಂದು ತ್ರಿಕೋನದಲ್ಲಿಯ ಮೂರು ಕೋನಗಳ ಬೇರಿಜು ೧೮೦ ಅಂಶಗಳಾಗುತ್ತವೆ. ಈ ಪ್ರಮೇಯ ಎಷ್ಟು ಕಠಿಣ ಇದೆಯಲ್ಲವೆ ಮಾಸ್ತರ. ಸುಮ್ಮನೆ ಕೋನಮಾಪಕವನ್ನಿಟ್ಟು ಮೂರು ಕೋನಗಳನ್ನು ಅಳೆದಂತೆ ಚಿತ್ರ ತೆಗೆದು, ಬೇರಿಜು ೧೮೦ಅಂಶ ಎಂದು ತೋರಿಸಿ ಕೊಟ್ಟರಾಗದೆ" ಎಂದು ವಿದ್ಯಾರ್ಥಿಯು ತನ್ನ ಬೆನ್ನು ಹಿಂದಿಂದೆ ಅಭ್ಯಾಸದ ಕೋಣೆಯನ್ನು ಪ್ರವೇಶಿಸುತ್ತಿದ್ದ ಮಾಸ್ತರರನ್ನು ಕೇಳಿದ.

"ಆ ಪ್ರಮೇಯ ಸಿದ್ಧಮಾಡಿ ತೋರಿಸಲು ಕೋನಮಾಪಕ ಯಾವಾಗಲೂ ಉಪಯೋಗಿಸಬಾರದು" ಎಂದಿಷ್ಟೆ ಮಾಸ್ತರನು ನುಡಿದ. ಮೇಜಿನ ಮೇಲೆ ತೆರೆದಿಟ್ಟಿದ್ದ ಪುಸ್ತಕ ನೋಡಿದ. ಇಂಗ್ಲಂಡದ ಇತಿಹಾಸವಾಗಿತ್ತದು. ಇಂಗ್ಲಂಡದ ಮೇಲೆ ಸ್ಪೇನದ ಹಡುಗುಪಡೆಯು ಏರಿಹೋಗಿ ದುರ್ದೈವದಿಂದ ಹಿಂತಿರುಗಿದ ಕತೆಯನ್ನು ಆ ತೆರೆದಿಟ್ಟ ಪುಟಗಳು ಹೇಳುತ್ತಿತ್ತು. ನಿನ್ನೆ ಓದಿ ಮುಗಿಸಿದ ಪಾಠವದು. ಹಾಗಾದರೆ ತನ್ನ ವಿದ್ಯಾರ್ಥಿ ಇಂದು ಚುರುಕಾಗಿದ್ದಾನೆ. ತಾನು ಬರುವ ಮೊದಲೆ ನಿನ್ನಿನ ಪಾಠವನಿನ್ನೊಮ್ಮೆ ಓದಿ ಮುಗಿಸಿದ್ದಾನೆಂದು ಮಾಸ್ತರನು ಮನಸಿನಲ್ಲಿಯೆ ಹಿಗ್ಗಿದ.

"ಇದು ನೋಡಿರಿ ಮಾಸ್ತರೆ, ಓದಿದ ಪುಸ್ತಕ ಮುಚ್ಚಿ ತೆಗೆದಿಡಬೇಕೆಂಬ ಜ್ಞಾನವಿಲ್ಲ. ನಿನ್ನೆ ಇಲ್ಲಿಟ್ಟದ್ದು ಇದು ವರೆಗೆ ಹಾಗೇ ಇಲ್ಲಿ ಬಿದ್ದುಕೊಂಡಿದೆ. ಯಾರಲ್ಲಿ? ಈ ಪುಸ್ತಕ ಮುಚ್ಚಿ ತೆಗೆದಿಡು."

ಕೆಂಪು ನಿಲುವಂಗಿ, ಕೆಂಪು ರುಮಾಲಿನವನೊಬ್ಬ ತನ್ನ ಅಷ್ಟೂ ಹಲ್ಲುಗಳನ್ನು ತೋರಿಸುತ್ತ ಒಳಗೆ ಬಂದು ಪುಸ್ತಕ ಎತ್ತುತ್ತಿದ್ದಾಗಲೆ''

"ಇವತ್ತು ಶಾಲೆಯಲ್ಲಿ ಇತಿಹಾಸದ ತಾಸು ಇದೆಯಲ್ಲ. ಪುಸ್ತಕ ಇರಲಿ" ಎಂದು ಮಾಸ್ತರ ಸೂಚಿಸಿದ.

"ಇರಲಿ ಬಿಡಿರಿ. ನಿನ್ನೆ ಓದಿ ಆಗಿದೆಯಲ್ಲ. ಏ, ಇದನ್ನಿಟ್ಟು ಆ ಚಿತ್ರದ ಪುಸ್ತಕ ಅದೆಯಲ್ಲ, ಶಿವಾಜಿ ಆಗ್ರಾದಿಂದ ಓಡಿಹೋದದ್ದು, ಅದನ್ನು ತೆಗೆದು ಕೊಂಡು ಬಾ" ಎಂದು ವಿದ್ಯಾರ್ಥಿ ಅಜ್ಞಾಪಿಸಿದ.

"ಅವನು ಆ ಪುಸ್ತಕ ತರುವವರೆಗೆ ಸಂಸ್ಕೃತ ಸ್ವಲ್ಪ ನೋಡೋಣ. ಎಲ್ಲಿ, ವಿದ್ವಸ್ ಶಬ್ದದ ರೂಪಗಳನ್ನು ಹೇಳಿ ನೋಡೋಣ.''

"ಮಾಸ್ತರ" ಎಂದು ಬೇಸರದ ದನಿಎಳೆದು "ವಿದ್ಯಾನಾಮ ನರಸ್ಯ ರೂಪಮಧಿಕಂ" ಎಂಬ ಶ್ಲೋಕದ ಅರ್ಥ ಹೇಳಿರಿ. ರೂಪಗಳು ಬಾಯಿಪಾಠ ಆಗಲೊಲ್ಲವು. ಈ ಸಂಸ್ಕೃತ ಎಲ್ಲಿಂದ ಬಂದಿತೊ'' ಎಂದು ಮೋರೆ ಕಿವಚಿದ.

ನಿನ್ನ ರೂಪ ವಿದ್ಯೆಯಲ್ಲಿಲ್ಲ ಕೇವಲ ಸೌಂದರ್ಯ ಪ್ರಸಾಧನಗಳಲ್ಲಿದೆಂದು ಮಾಸ್ತರನು ತನ್ನ ಶಿಷ್ಯನನ್ನು ಮನಸ್ಸಿನಲ್ಲಿಯೆ ಜರೆದು, "ರೂಪಗಳನ್ನು ಪಾಠ ಮಾಡಲೆ ಬೇಕಲ್ಲ. ಪರೀಕ್ಷೆಗೆ ಅವಿಲ್ಲದೆ ನಡೆಯುವಂತಿಲ್ಲ" ವೆಂದನು.

ಅಷ್ಟರಲ್ಲಿಯ ಆ ಆಳು ಚಿತ್ರದ ಪುಸ್ತಕ ತಂದಿತ್ತ. ಮಾಸ್ತರನ ಬಾಯಿಗೆ ಬೀಗ ಬಿತ್ತು. ಶಿಷ್ಯನ ಕುಣಿತ ಹೆಚ್ಚಾಯಿತು.

"ಇದು ನೋಡಿರಿ ಮಾಸ್ತರ. ಶಿವಾಜಿ ಮಿಠಾಯಿ ಪೆಟ್ಟಿಗೆಯೊಳಗ್ಕೆ ಕುಳಿತು ಪಾರಾದನಂತಲ್ಲ. ಪೆಟ್ಟಿಗೆಯಲ್ಲಿದ್ದಾಗ ಅವನು ಹೊಟ್ಟೆತುಂಬ ಮಿಠಾಯಿ ತಿಂದಿರಬೇಕಲ್ಲವೆ? ''

ತನ್ನ ಪ್ರಿಯ ಶಿಷ್ಯನ ತರ್ಕಸಾಮರ್ಥ್ಯವನ್ನು ಕಂಡು ಮಾಸ್ತರನಿಗೆ ಹೊಟ್ಟೆತುಂಬ ನಗೆ ಬಂತು. ಆದರೆ ಬಾಯಿ ಬಿಡುವಂತಿರಲಿಲ್ಲ. ವಿದ್ಯಾರ್ಥಿಯ ಅಪಮಾನವಾಗುವ ಹೆದರಿಕೆ. ಅದ್ದರಿಂದ ಮಾಸ್ತರನು ಉಗುಳು ನುಂಗಿಕೊಂಡು, "ಬಂದು ೨೦ ನಿಮಿಷಗಳಾದವು. ಇನ್ನೂ ಯಾವ ಪುಸ್ತಕ ತೆಗೆದು ಒಂದು ಸಾಲು ಓದುವದಾಗಲಿಲ್ಲ. ಓದುವ ಮನಸ್ಸಿಲ್ಲವೆ ನಿಮಗೆ?" ಎಂದು ವಿದ್ಯಾರ್ಥಿಯನ್ನು ಹೆದರಿಸಲು ಪ್ರಯತ್ನಿಸಿದ.

"ಇವತ್ತು ಓದುವದಿಲ್ಲ ಮಾಸ್ತರ. ಓದುವಂತಿದ್ದರೆ ಈ ಚಿತ್ರದ ಪುಸ್ತಕ ತರಿಸುತ್ತಿದ್ದೆನೆ. ಇಂದು ಮುಂಜಾನೆ ಕಾಫಿ ಆಗಲಿಲ್ಲ. ಅವನು, ಕಾಫಿ ತಂದವನು, ಚಮಚೆ ತರಲು ಮರೆಯಬೇಕೆ? ಬಟ್ಟಲಿನಲ್ಲಿಯ ಕಾಫಿಯನ್ನೆ ಅವನ ಮುಖಕ್ಕೆ ಎರಚಿದೆ. ಈಗ ಓದು ಅಂದರೆ ಏನು ಓದೋದು? ಮಾಸ್ತರೆ, ಯುರೋಪಿಯನರು] ಚಮಚೆಯಿಂದಲೆ ಕಾಫಿ ಕುಡಿಯುವದಿಲ್ಲವೆ ?

ಯಾರ ಸಿಟ್ಟು ಯಾರ ಮೇಲೆ ಎಂದೆಂದುಕೊಂಡ ಮಾಸ್ತರ. ಒಂದು ಚಮಚೆ ತರದ್ದಕ್ಕಾಗಿ ಇಷ್ಟೆಲ್ಲ ಅವಾಂತರ. ಇವರಿಗೆ ಸಹನಶೀಲತೆ ಬರುವದೆಂದೂ. ವಿವೇಕವಿಲ್ಲದೆ ತಾಳ್ಮೆ ಇಲ್ಲ. ತಾಳ್ಮೆ ಇಲ್ಲದೆ ವಿವೇಕ ಬರುವಂತಿಲ್ಲ. ಇಂಥವನೊಂದಿಗೆ ಗುದ್ದಾಡುವದು ತನ್ನ ಪಾಲಿನ ಕರ್ತವ್ಯವಾಗಿದೆ ಎಂದು ಏನೇನೋ ವಿಚಾರದಲ್ಲಿ ಮಾಸ್ತರನು ಮುಳುಗಿರಲು,

"ರಾಮಃ ರಾಮೌ ರಾಮಾಃ" ಎಂಬ ಉಚ್ಚಾರ ಗಟ್ಟಿಯಾಗಿ ಮಾಸ್ತರನ ಕಿವಿಯನ್ನು ಪ್ರವೇಶಿಸಿತು. ವಿದ್ಯಾರ್ಥಿಯು ಬಾಗಿಲಿನತ್ತ ಕೈಮಾಡಿ ಸಂಜ್ಞೆ ಮಾಡುತ್ತ ರಾಮ ಶಬ್ದದ ವಿಭಕ್ತಿ ರೂಪಗಳನ್ನು ಬಾಯಿಂದ ಗಟ್ಟಿಯಾಗಿ ಹೇಳುತ್ತಿದ್ದ.

ಮಾಸ್ತರನು ಇದೇನು ಸ್ಥಿತ್ಯಂತರವೆಂಬುದನ್ನು ಅರಿತು ಕೊಳ್ಳುವಷ್ಟರಲ್ಲಿಯೆ ದಷ್ಟಪುಷ್ಟ ಕಾಯದ ವ್ಯಕ್ತಿಯೊಂದು ಕೋಣೆಯಲ್ಲಿ ಪ್ರವೇಶಿಸಿತು. ಆ ವ್ಯಕ್ತಿಯ ನಡೆಯಂತೆ ನುಡಿಯೂ ಗಂಭೀರವೆಂಬುದನ್ನು ಕೂಡಲೆ ಅರಿತುಕೊಳ್ಳುವಂತಾಯಿತು.

"ಮಾಸ್ತರೆ. ನಮ್ಮ ಯುವರಾಜರ ಅಭ್ಯಾಸ ಹೇಗೆ ನಡೆದಿದೆ. ಮೊನ್ನೆ ಷಾಣ್ಮಾಸಿಕ ಪರೀಕ್ಷೆಯಲ್ಲಿ ತೀರ ಕಡಿಮೆ ಗುಣಗಳನ್ನು ದೊರಕಿಸಿದ್ದಾರೆ. ಸಂಸ್ಕೃತದಲ್ಲಿಯಂತೂ ತೇರ್ಗಡೆ ಹೊಂದಿಲ್ಲ.'

ಹುಲಿಯೆದುರು ನಿಂತ ಆಡಿನಂತಾದ ಮಾಸ್ತರನು ನಿಜವನ್ನು ನುಡಿದು ಶಿಷ್ಯನನ್ನು ನೋಯಿಸಿ ಅವನ ಅಸಹಕಾರವನ್ನು ಎದುರಿಸುವದಕ್ಕಾಗಿ ಹೆಣಗಬೇಕೆ ? ಸುಳ್ಳಾಡಿ ಅವನ ತಂದೆಯನ್ನು ವಂಚಿಸಬೇಕೆ? ಆದರೂ ತಲೆಗೆ ಬೀಸುವ ದೊಣೆಯನ್ನು ತಪ್ಪಿಸಿಕೊಂಡರೆ ಸಾಕೆಂದು,

"ಅದ್ದರಿಂದ ಸಂಸ್ಕೃತವನ್ನೇ ಈಗ ಹೆಚ್ಚಾಗಿ ಹೇಳುತ್ತಿದ್ದೇನೆ'' ಎಂದನು.

"ಇದೇನು ಮಾಸ್ತರರೆ ಸಂಸ್ಕೃತ ಅಂತ ಹೇಳುತ್ತೀರಿ. ಮೇಜಿನ ಮೇಲೆ ಚಿತ್ರದ ಪುಸ್ತಕ ಬಿದ್ದಿದೆ. ನಿಮ್ಮ ಶಿಷ್ಯನನ್ನು ನೀವಷ್ಟು ಗಮನಿಸುವಂತೆ ಕಾಣುವದಿಲ್ಲ. ಆರು ತಿಂಗಳಾದರೂ ನಿಮ್ಮ ಮೇಳ ಕೂಡಿಲ್ಲವೆ?'' ಎಂದು ಆ ರಾಯರು, ರಾಯರೆಂದೇ ಕರೆಯೋಣ ನುಡಿದರು.

ತನ್ನ ಆರು ತಿಂಗಳದ ಅಧ್ಯಾಪನದ ವರದಿಯನ್ನೆ ಕೇಳಿದಂತಿದ್ದ ಈ ಪ್ರಶ್ನೆಯಿಂದ ಮಾಸ್ತರನ ಅಭಿಮಾನ ಜಾಗ್ರತವಾಯಿತು. ಎಷ್ಟೇ ದೊಡ್ಡ ಮನೆತನದವನಿದ್ದರೂ ಶಿಷ್ಯನು ಶಿಷ್ಯನೇ ಆಗಿರಬೇಕು. ಎಂಬ ಅರಿವು ಈ ಹುಡಗನಿಗಿಲ್ಲ, ಅದಕ್ಕಾಗಿ ತಾನು ಈ ಬಿರುನುಡಿಗಳನ್ನು ಕೇಳಬೇಕಾಗಿ ಬಂತಲ್ಲ ಎಂದು ಮಿಡುಕಿದ. ಇದೇ ಸಮಯ ಸಾಧಿಸಿ ಶಿಷ್ಯನಿಗೆ ಬುದ್ಧಿಗಲಿಸಬಹುದೆ ಎಂದು ಆಲೋಚಿಸಿದ. ತನ್ನ ತಲೆ ತುಸು ಮೇಲಕೆತ್ತಿ,

"ಓದಿನ ಕಡೆಗೆ ಇವರ ಲಕ್ಷವೇ ಕಡಿಮೆ. ಒಟ್ಟು ಒಂದು ಗಂಟೆಯ ಸಮಯದಲ್ಲಿ ಇವರಾಗಿಯೆ ಚಿತ್ತವಿಟ್ಟು ಓದುವದು ೧೫—೨೦ ನಿಮಿಷ ಮಾತ್ರ. ಇತರರಂತೆ ದಂಡಿಸಲು ಇಲ್ಲಿ ಸಾಧ್ಯವಿಲ್ಲ.. ಬಾಯಬಿಟ್ಟು ಆಡಿದ್ದಕ್ಕೆ ಕ್ಷಮೆ ಇರಬೇಕು"

"ಇಲ್ಲಿಯೆ ತಪ್ಪುತ್ತೀರಿ ಮಾಸ್ತರೆ ನೀವು ನಮ್ಮ ಹುಡುಗನಾದರೇನು. ದಂಡಿಸಬಾರದೆಂದು ಎಲ್ಲಿ ಹೇಳಿದೆ? ಕೇಳಿದಿರಾ ಮಾಸ್ತರರ ಆರೋಪವನ್ನು" ಎನ್ನುತ್ತ. ತನ್ನ ಮಗನ ಕಡೆಗೆ ತಿರುಗಿದರು. ಆ ರಾಯರು.

ರಾಯರ ಮಗ, ಮಾಸ್ತರರ ಮಹಾ ವಿದ್ಯಾರ್ಥಿ ನೆಲವನ್ನೇ ದಿಟ್ಟಿಸುತ್ತಿದ್ದ. ಕೆನ್ನೆಗಳು ಮಾತ್ರ ಕೆಂಪಾಗಿದ್ದವು. ಕಣ್ಣುಗಳಲ್ಲಿ ಊರಿದ್ದುದು ನೀರೊ ಕಿಡಿಯೊ ಎಂಬುದು ಹೇಳಬರುವಂತಿರಲಿಲ್ಲ. ಯಾಕಂದರೆ ಬಾಗಿದ ತಲೆ ರಾಯರಿರುವಷ್ಟು ಹೊತ್ತು ಮೇಲಕ್ಕೇಳಲಿಲ್ಲ.

"ಇಂದು ಇಲ್ಲಿಯೆ ಊಟಕ್ಕೆ ಬರಬೇಕು ಮಾಸ್ತರರೆ. ನಮ್ಮ ಆಳು ಮುಂಜಾನೆ ೭ ಗಂಟೆಗೆ ನಿಮ್ಮ ಮನೆಗೆ ಹೋದಾಗ ನೀವಿದ್ದಿಲ್ಲವಂತೆ'' ಎಂದು ರಾಯರ ಆಮಂತ್ರಣ ಬಂತು.

"ಆಗಲಿ. ಮುಂಜಾನೆ ನಾನು ದಿವಾಲೂ ಈಸಲಿಕ್ಕೆ ಹೋಗುತ್ತಿರುತ್ತೇನಷ್ಟೆ'' ಎಂದ. ಅಂದು ತುಳಸಿಮದುವೆಯೆಂಬುದು ಆಗ ನೆನಪಾಯಿತು.

"ಹಾಗಾದರೆ ಶಿಷ್ಯನ ಮೇಲೆ ಅನುಗ್ರಹವಿರಲಿ ಈಗ ಕಾಫಿ ತೆಗೆದುಕೊಂಡು ಹೋಗಿರಿ'' ಎಂದು ಹೇಳಿ "ಏನು ಮಾಸ್ತರರೊಂದಿಗಾದರೂ ಕಾಫಿ ಕುಡಿಯುವಿರೊ ಇಲ್ಲವೊ? '' ಎಂದು ತನ್ನ ಮಗನನ್ನು ಕೇಳಿ ಉತ್ತರವನ್ನಪೇಕ್ಷಿಸದೆ ಹೊರಟು ಹೋದರು.

"ಹಾಂ ಕೇಳಿರಿ ನಿಮಗೆ 'ವಿದ್ಯಾನಾಮನರಸ್ಯ' ಶ್ಲೋಕದ ಅರ್ಥ ಬೇಕಲ್ಲವೆ?" ಎಂದು ಮಾಸ್ತರರು ಶಿಷ್ಯನನ್ನಾಕರ್ಷಿಸಲು ಪ್ರಯತ್ನಿಸಿದ.

"ಮಾಸ್ತರರಿಗಿಂದು ಮೇಜವಾನಿ. ಬಾಸುಂದಿ ಪುರಿ ಬೇಕಲ್ಲವೆ?" ಎಂದು ವಿದ್ಯಾರ್ಥಿ ಉಪಹಾಸದ ನಗೆಯನ್ನು ನಕ್ಕ.

ಇಲ್ಲಿಂದ ಎದ್ದು ಓಡಿಹೋಗಲೆ ಅನಿಸಿತು. ಮಾಸ್ತರನಿಗೆ ಛೆ, ಇದೆಲ್ಲಿಯ ಹೇಡಿತನ. ನಿಮ್ಮ ಬಾಸುಂದಿ ತಯಾರಿಸಲು ನೀವು ಹಾಲನ್ನು ಕುದಿಸುವದಿಲ್ಲ, ನಿಮ್ಮ ಜನರ ಜೀವವನ್ನೇ ಕುದಿಸುತ್ತಿರುವಿರಿ ಎಂದಂದುಕೊಂಡು,

"ನಿಮ್ಮ ಬಾಸುಂದಿಗೆ ಬಾಯಿಬಿಟ್ಟವನಾಗಿ ಬಂದವನೆಂದು ತಿಳಿದಿರಾ? ನಮ್ಮ ರೊಟ್ಟಿ ಹಿಂಡಿ ನಮಗೆ ಪಂಚಾಮೃತ. ಇಂದೇನು ಇದೆ ಹಾಡೊ ಓದುವ ವಿಚಾರವೇನಾದರೂ ಇದೆಯೊ? " ಎಂದು ಗದರಿಸಿದ.

ಅಷ್ಟರಲ್ಲಿ ಹೊರಗಿನಿಂದ ನಾಯಿಯೊಂದು ಬೆಕ್ಕನ್ನಟ್ಟಿಕೊಂಡು ಬಂದಿತು. ಪ್ರಾಣಕ್ಕೆ ಹೆದರಿ ಓಡುತ್ತಿದ್ದ ಬೆಕ್ಕು ಇವರ ಕೋಣೆಯನ್ನೇ ಪ್ರವೇಶಿಸಿ ಮೇಜಿನ ಮೇಲೆ ಜಿಗಿದು ಬಾಗಿಲ ಕಡೆಗೆ ಹೆದರಿಕೆಯಿಂದ ನೋಡುತ್ತ ಕುಳಿತಿತು. ಶಿಷ್ಯನ ಗದರಿಕೆಗೆ ಆ ನಾಯಿ ಹೆದರಿ ಕುಂಯಿಗುಡುತ್ತ ಹಿಂತಿರುಗಿ ಹೋಯಿತು. ಆದರೆ ಬೆಕ್ಕಿನ ಅಬ್ಬರಕ್ಕೆ ಮೇಜಿನ ಮಸಿ ದೌತಿ ಉರುಳಿ ಶಿಷ್ಯನ ಮೈಮೇಲಿನ ಬಟ್ಟೆಗಳೆಲ್ಲ ಮಸಿ ಮುಣುಗಿದವು.

"ಈಗ ಬಂದೆ ಮಾಸ್ತರರೆ" ಅನ್ನುತ್ತ ಅವನು ಆ ಇರಾಣಿ ಬಾವುಗವನ್ನೆತ್ತಿಕೊಂಡು ಒಳ ಮನೆಗೆ ನುಗ್ಗಿದ.

ಬಾಗಿಲಲ್ಲಿದ್ದ ಆಳು ಕಳ್ಳ ಹೆಜ್ಜೆಯಿಂದ ಒಳಗೆ ಬಂದು,

"ಮಾಸ್ತರ ಸಾಹೇಬ, ಇದೇನು ಮಾಡಿದಿರಿ. ಪ್ರಕರಣ ದೀರ್ಘಕ್ಕೆ ಹೋಗುವಂತೆ ಮಾಡಿದಿರಿ."

"ನಾನೇನು ಅಂದೆ? ಮತ್ತೆ ಯಾವ ಹುಡಗನಾಗಿದ್ದರೆ ಎರಡೇಟು ಬಿಗಿಯುತ್ತಿದ್ದೆ."

"ಹೌದರಿ, ಅದೆಲ್ಲ ನಮ್ಮ ಹುಡಗರ ಪಾಲಿಗೆ. ಆದರೆ ಇಲ್ಲಿ ಎಲ್ಲಾ ವಿಪರೀತ. ಗೊತ್ತಾಗಲಿಲ್ಲವೇನು ನಿಮಗ ಈ ಆರು ತಿಂಗಳೊಳಗ?''

"ಅಲ್ಲ, ನಿಮ್ಮ ಮನೆಯೊಳಗ ರೊಟ್ಟಿ ನುಚ್ಚು ಕೊಟ್ಟರೆ ನಾನು ಸಂತೋಷದಿಂದ ತಿನ್ನಬಹುದು. ಏನೋ ಉದ್ದೇಶದಿಂದ ಊಟಕ್ಕೆ ಕರೆಯೋದು. ಮೇಲೆ ಈ ಹುಡುಗನ ಬಾಯಿಂದ ಇಂಥ ಮಾತು ಕೇಳುವದು. ಯಾರಿಗೆ ಬೇಕು ಇದೆಲ್ಲ!"

"ಅರಮನೆಯ ಊಟ ಅಂದರ ಎಲ್ಲರೂ ಬಾಯಿಬಿಟ್ಟುಕೊಂಡು ಕೂತಿರತಾರ. ನಮಗೇನೂ ಅಶೆಯಿಲ್ಲ ಬಿಡರಿ. ನಮಗೆ ದೊರೆಯೂದು ಎಂಜಲ ಮಾತ್ರ''

"ಅದೇ ನೋಡು, ನಮ್ಮ ತಾಲೂಕಿನಷ್ಟದ ನಿಮ್ಮ ಸಂಸ್ಥಾನ. ರಾಜ, ಅರಮನೆ, ನಾಲ್ಕಾರು ಮೋಟಾರು ಇಷ್ಟೆಲ್ಲ ಆಡಂಬರ ಇವರಿಗೆ. ಸದಾ ಇಲ್ಲಿಯೇ ಇರುವ ನಿನಗೂ ಇವರ ನಡತೆ ಮನಸ್ಸಿಗೆ ಬಂದಿಲ್ಲ. ಇವರ ಗುಣ್ಯಾನ ಹಿಂಗ"

"ಉಶ್ ! ಯಾರಿಗಾದರೂ ಕೇಳಿಸೀತು. ನಾಲ್ಕು ಲಕ್ಷ ಉತ್ಪನ್ನದಾರರಿಗೆ ಇವೆಲ್ಲ ಇರದೆ ನಮಗೆ ಇರಬೇಕೇನು? ಆದರೆ ನಮ್ಮ ಮಹಾರಾಜರ ತಂದೆಯವರು ರಾಜಮನುಷ್ಯರಿದ್ದರು."

"ನಿಮ್ಮದೇ ರೊಕ್ಕ ಸುಲಿದು ದುಂದುಗಾರಿಕೆ ಮಾಡಿ ನಿಮಗೂ ಮೇಜವಾನಿ ಹಾಕಿಬಿಟ್ಟರ ಒಳ್ಳೆಯವನಾದ. ತಮ್ಮದನ್ನು ಬಿಟ್ಟುಕೊಡುವ ಔದಾರ್ಯ ಅದೆಯೇನು ಇವರಲ್ಲಿ''

"ತನ್ನ ಮಗ ಇಂಗ್ರಜಿ ಸಾಲಿಗೆ ಹೋಗತಾನ. ಪುಸ್ತಕಕ್ಕ ರೊಕ್ಕ ಇಲ್ಲ ಅಂತ ದೈನಾಸ ಬಟ್ಟರ ತಿನ್ನ ಹುಡುಗನ್ನ ಕಂಡು ಇಲ್ಲಿ ಇಲ್ಲಿ ಕೆಲಸಕ್ಕ, ಹೊಟ್ಟ ಬಿಂಶ್ಯಾದರೂ ಬಿಟ್ಟೀತು ಎಂದರು ಇವರು"

"ಏ, ಸುಮ್ಮನಾಗು. ಬಡವರಿಗೆ ಬಡವರೆ ನೆರವಾಗುವವರು."

"ಹೌದು, ನಾವೂ ನೀವೂ ಒಂದೇ ಜಾತಿ ಮಾಸ್ತರ. ಓದಲಿಕ್ಕೆ ಬರುವದಿಲ್ಲಂತ ನಾವು ಪುಸ್ತಕ ತಿರುವಿ ಹಿಡಿದರ ನೀವೂ ತಿರುವಿ ಹಿಡಿದೆ ಪುಸ್ತಕ ಓದುತ್ತೀರಲ್ಲ ಇಲ್ಲಿ!"

"ಓ! ನಿಮ್ಮ ಪ್ರಭುಗಳು ಪುಸ್ತಕ ಎದುರಿಗೆ ಇಟ್ಟುಕೊಂಡು ಓದಬೇಕಾದಾಗ ತೆಪ್ಪಗೆ ಕುಳಿತರೆ ಅವರೆದುರಿಗೆ ಕುಳಿತ ನಾನು ಆ ಪುಸ್ತಕ ಮುಟ್ಟದೆ ಅವರಿಗೆ ಓದಿ ತೋರಿಸಬೇಕಲ್ಲ."

"ಪರೀಕ್ಷಾಕ್ಕೂ ನೀವೇ ಕೂತಬಿಡಿರಿ ಮಾಸ್ತರ."

"ನಾನೂ ಅದೇ ವಿಚಾರ ಮಾಡುತ್ತಿದ್ದೇನೆ. ಅವರಿಗೇನು ಓದು ಕಲಿಯಬೇಕೆಂತೇನಿಲ್ಲ. ಮುಂದಿನ್ನ ಹ್ಯಾಂಗ ನಡೆಸಿಕೊಳ್ಳಬೇಕೆಂಬುದನ್ನು ನಿಮ್ಮಂಥ ಕುರಿಗಳು ಅವರಿಗೆ ಕಲಿಸಿ ಕೊಡತೀರಿ."

"ನೀವೂ ಅಂತೀರಿ ಅನ್ನಿರಿ ಮಾಸ್ತರರೆ. ಮುಂಜಾನೆ ಒಮ್ಮೆ ಇಲ್ಲಿ ಬಂದವರು ನಮ್ಮ ಸರತಿ ಮುಗಿಸಿಕೊಂಡು ಹೋಗಬೇಕಾದರೆ ಸಾವಿರ ಸಲ ಸತ್ತು ಹುಟ್ಟುತ್ತೇವೆ. ಕೆಲಸ ಮಾಡಿದರ ಮಾಡಿದಿರ್ಯಾಕ, ಬಿಟ್ಟರ ಬಿಟ್ಟರ್ಯಾಕ ಅಂತಾ ಕಿರುಕುಳ ತಪ್ಪಿದ್ದಲ್ಲ."

ಅಷ್ಟರಲ್ಲಿ ಇನ್ನೊಬ್ಬ ಆಳು ಬಂದು ಅಂದಿನ ಓದು ಮುಗಿಯಿತು ಆದರೆ ಊಟಕ್ಕೆ ಮಾತ್ರ ಬರಬೇಕೆಂದು ತಿಳಿಸಿದ.

"ನೋಡಿರಿ, ಏನಾದರೂ ಮನಸಿನ ವಿರುದ್ಧ ಆಯಿತೆಂದರೆ ಅಂದು ಅಭ್ಯಾಸವೇ ವರ್ಜ ಸಮ ಒಡೆಯರದು" ಎಂದು ಮೊದಲಿನ ಆಳು ತನ್ನ ಅನುಭವ ವಿವರಿಸಿದ.

"ಅಂತೂ ಅಡ್ಡಿಯಿಲ್ಲ. ಜನರ ಕಲ್ಯಾಣ ಮಾಡುವ ಗುಣ ಇದು'' ಎಂದು ಮಾಸ್ತರ ಹೊರಡಲನುವಾದ.

"ನಿಮ್ಮ ಮೊದಲಿನ ಮಾಸ್ತರರಂತೂ ಎರಡ್ಯ ವರ್ಷ ಕಲಿಸಬೇಕಾದರೆ ಗೋಳಾಡಿ ಹೋದರು. ಅಂತೂ ಒಳ್ಳೇ ಪಾರಾದರು."

ಇನ್ನೂ ನಾಲ್ಕಾರು ತಿಂಗಳ ತನಗಿಲ್ಲಿ ಮುಕ್ತಿ ಎಂದಂದುಕೊಳ್ಳುತ್ತ ಮಾಸ್ತರ ಹೊರಬಿದ್ದ. ಆಳುಗಳಿಬ್ಬರು ಮಾಸ್ತರನ ಕಡೆಗೊಮ್ಮೆ ಕರುಣೆಯಿಂದ ನೋಡಿ ತಮ್ಮೊಡೆಯನ ಪುಸ್ತಕಗಳನ್ನು ಓರಣದಿಂದ ಕಪಾಟಿನಲ್ಲಿಡುವದರಲ್ಲಿ ತೊಡಗಿದರು.

* * *

"ಏನು ಮಾಸ್ತರರೆ, ಕೊಟ್ಟ ಸ್ವಾತಂತ್ರ್ಯದ ಉಪಯೋಗ ಸಂಪೂರ್ಣ ಮಾಡುತ್ತಿರುವಂತೆ ಕಾಣುತ್ತದೆ'' ಎಂದು ಮಹಾರಾಜರು ತಮ್ಮ ಬೆಳ್ಳಿಯ ತಾಟಿನಲ್ಲಿಯ ಬುರುಬುರಿಯನ್ನು ಬಾಯಲ್ಲಿರಿಸುತ್ತ ಕೇಳಿದರು.

ಭೋಜನದ ವ್ಯವಸ್ಥೆಯ ಅಚ್ಚುಕಟ್ಟುತನ ಮನಮೆಚ್ಚುವಂತಿದ್ದರೂ ಸೂಕ್ಷ್ಮವಾಗಿ ನಿರೀಕ್ಷಿಸುವವರಿಗೆ ತಾನೇ ತಾನಾಗಿ ಕಂಡುಬರುತ್ತಿದ್ದ ಪಂಕ್ತಿಭೇದದ ಅರಿವಾಗದಿರುತ್ತಿರಲಿಲ್ಲ. ಮಹಾರಾಜರಿಗೂ ಅವರ ಪಕ್ಕದಲ್ಲಿ ಮುಂದಿಸಿದ್ದ ಅವರ ಮಗನಿಗೂ ತಾಟು ಬಟ್ಟಲ, ತಂಬಿಗೆ ಥಾಲಿ ಅವರು ಉಪಯೋಗಿಸುತ್ತಿದ್ದ ಸಕಲ ವಸ್ತುಗಳೂ ಬೆಳ್ಳಿಯವಾಗಿದ್ದರೆ ಅದೇ ಪಂಕ್ತಿಯಲ್ಲಿಯ ಇತರರಿಗೆ ಹಿತ್ತಾಳೆಯ ಪಾತ್ರೆಗಳಲ್ಲಿಂದ ನೀಡಲಾಗುತ್ತಿತ್ತು. ನೀಡುವ ಪಾತ್ರೆ ಯಾವದಾದರೇನು ಅಡುಗೆ ಒಂದೆ ಅಲ್ಲವೆ ಎಂದು ಸಮಾಧಾನವನ್ನು ಹಚ್ಚಿಕೊಳ್ಳಬೇಕೆಂದರೆ ಅದೂ ಸಾಧ್ಯವಿಲ್ಲ. ಬೆಳ್ಳಿಯ ತಾಟುಗಳಲ್ಲಿಯ ಸಣ್ಣಕ್ಕಿಯ ಅನ್ನದ ವಾಸನೆ ಇಡೀ ಭೋಜನ ಶಾಲೆಯನ್ನು ತುಂಬಿದ್ದರಿಂದ ಇಲ್ಲಿಯ ದಪ್ಪಕ್ಕಿಗೂ ವಾಸನೆ ಹೇಗೆ ಬಂತು ಎಂದು ಇತರರು ತಮ್ಮ ಅನ್ನವನ್ನು ವಾಸಿಸಲು ಮೂಗಿಗೆ ಒಯ್ಯುವಂತಾಗುತ್ತಿತ್ತು. ಹೆಚ್ಚೇನು ಮಹಾರಾಜರೊಂದಿಗೆ ಸಹಭೋಜನವೆಂಬುದೊಂದೆ ಸಂಗತಿ ಇತರೆ ಎಲ್ಲ ವೈಷಮ್ಯಗಳನ್ನು ಮರೆಸಬಲ್ಲುದಾದರೆ ಅಲ್ಲಿ ಸುಖವಾಗಿ ಹೊಟ್ಟೆತುಂಬ ಉಣ್ಣಬಹುದಾಗಿತ್ತು.

—೧೬ನೇ ಪುಟಕ್ಕೆ

Reg. No. B. 3148

LICENCE No. 3
Licenced to Post without Prepayment

KARMAVEER 29-7-46



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಜುಲೈ ತಾ. ೨೯ ರಿಂದ ಅಗಸ್ಟ ೪ ರ ವರೆಗೆ

ಮೇಷ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಪ್ರಿಯ ಜನರ ಸಹವಾಸ ಆದರೆ ಮನೆಯ ಉಳಿದ ಜನರೊಡನೆ ಮೇಲಿಂದ ಮೇಲೆ ಮತಭೇದ. ಮತ್ತು ಬಾಯಿಗೆಬಾಯಿ ಹತ್ತುವದು. ಉದ್ಯೋಗದಲ್ಲಿ ಪ್ರಗತಿ ಕುಂದುವದು ಆದರೆ ಪ್ರತಿಷ್ಠೆ ಮತ್ತು ಲಾಭ ಒಟ್ಟಾರೆ ಅನುಕೂಲವಾಗುತ್ತ ನಡೆದು ಸತ್ತೆ ಇಲ್ಲವೆ ವರ್ಚಸ್ಸಿನಲ್ಲಿ ಸ್ವಲ್ಪ ಹೆಚ್ಚಳ. ಗುಣೀ ಜನರ ಭೆಟ್ಟಿ ಪರಿಚಯದ ಯೋಗವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚಿಗಿದ್ದರೂ ಯಶಸ್ಸಿನ ಒಲವು ನಿಮ್ಮ ಕಡೆಗೇ. ವಿಪರೀತ ಸ್ವಪ್ನಗಳಿಂದ ಮನಸ್ಸು ಅಸ್ವಸ್ಥ, ಸ್ಥಾವರದಲ್ಲಿ ಸ್ವಲ್ಪ ಅನುಕೂಲ ಸಂಗತಿಗಳು. ಒಬ್ಬ ಪ್ರಿಯ ನೆರೆಹೊರೆಯವನ ನಾಶ. ಮಿತ್ರತ್ವದಲ್ಲಿ ವಿರೋಧ ಪ್ರವಾಸ ತೊಂದರೆಯದು, ಆದರೆ ಟ್ಟಿ ಮತ್ತು ಪತ್ರವ್ಯವಹಾರವೂ ಅನುಕೂಲ. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ ನೆ ಚರಣಗಳಿಗೆ ತೊಂದರೆ ಕಡಮೆ. ತಾ. ೩೦—೩೧—೪ ಅನುಕೂಲ.

ವೃಷಭ

ಪ್ರಕೃತಿ ಸಾಧಾರಣವೆ. ಹೆಂಡತಿಗೂಡ ಮೇಲಿಂದ ಮೇಲೆ ಸುಳ್ಳಸುಳ್ಳೆ ತಕರಾರು. ಪ್ರಾಪಂಚಿಕ ಇತರ ಸುಖ ಉತ್ತಮ. ಮತ್ತು ಮಕ್ಕಳೂ ಕೆಲ ಪ್ರಶಂಸನೀಯ ಕೆಲಸ ಮಾಡುವರು. ಉದ್ಯೋಗದಲ್ಲಿ ಪ್ರಗತಿ ಒಳ್ಳೇ ಜೋರಿನಲ್ಲಿ. ಲಾಭದ ಹೆಚ್ಚಳ ಆದರೆ ಪ್ರತಿಷ್ಠೆಯ ಮೇಲೆ ಅನೇಕರು ಏನೇನೋ ಟೀಕೆ ಮಾಡುವರು. ಪ್ರತಿಯೊಂದು ವಿಷಯದಲ್ಲಿ ಸ್ವಲ್ಪಾದರೂ ವಿತಂಡವಾದದ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರ ಸುಖ ಉತ್ತಮ ಬಂಧುವರ್ಗದಲ್ಲಿ ಸ್ವಲ್ಪ ಅನಿಷ್ಟ ಸಂಗತಿಗಳು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರವೂ ಹೆಚ್ಚು ಅನುಕೂಲ. ರೋಹಿಣಿಯ ಕೊನೆಯ ೩ ಮತ್ತು ಮೃಗಾದ ಮೊದಲನೆ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೨೯—೧—೨—೩ ಅನುಕೂಲ.

ಮಿಥುನ

ಪ್ರಕೃತಿ ಸಾಧಾರಣವೆ ಹೆಂಡತಿ ಮತ್ತು ಮಕ್ಕಳ ಸುಖ ಉತ್ತಮ. ಆದರೆ ಉಳಿದ ವಿಷಯಗಳಲ್ಲಿ ಬಹಳ ಪ್ರಾಪಂಚಿಕ ತೊಂದರೆ. ಆಪ್ತರು ಮತ್ತು ನೆರೆಯವರಲ್ಲಿ ನಿಮ್ಮ ವಿರುದ್ಧ ಸ್ವಲ್ಪ ಗುಜಬುಜು. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೆ, ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಪ್ರತಿಯೊಂದು ಕೆಲಸದಲ್ಲಿ ಮೊದಲು ಸ್ವಲ್ಪ ಮನೋಭಂಗವಾಗುವದರಿಂದ ಅಡಚಣಿ, ಆದರೆ ನಂತರ ಅದು ಅಪೇಕ್ಷೆ ಮೀರಿ ಚೆನ್ನಾಗಿ ಆಗುವ ಸುದೈವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ, ಮತ್ತು ದಗದಗಿ ಬಹಳ ಆದರೆ ಕೊನೆಯಲ್ಲಿ ಒಳ್ಳೆ ಯಶಸ್ಸು. ಮಿತ್ರ ಸುಖ ಉತ್ತಮ. ಸ್ವಪ್ನಗಳು ಭಾವೀಸೂಚಕ. ಸಂತ ಮಹಾಂತರ ದರ್ಶನ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಆರಿದ್ರಾದ ಕೊನೆಯ ೩ ಮತ್ತು ಪುನರ್ವಸುವಿನ ೩ ಚರಣಕ್ಕೆ ತೊಂದರೆಯಿಂದ ಯಶಸ್ಸು. ತಾ. ೩೦, ೩೧, ೪ ಅನುಕೂಲ.

ಕರ್ಕ

ಪ್ರಕೃತಿ ಸಾಧಾರಣವೆ. ಮಕ್ಕಳಲ್ಲಿ ಕ್ಲೇಶ ಹೆಂಡತಿ ಗೂಡ ಅನಾದರ ವರ್ತನೆ. ಪ್ರಾಪಂಚಿಕ ಸುಖ ಮೇಲೆ ಮೇಲೆ ನೋಡಲಿಕ್ಕೆ ಉತ್ತಮ ತೋರುವದು ಮತ್ತು ಅರೀತಿ ಕೆಲ ಲೌಕಿಕ ಪ್ರಸಂಗಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಆದರೆ ಅಂದಾಜಿಗಿಂತ ವೆಚ್ಚ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಹುರುಪು. ಪ್ರವಾಸಾದಿ ಕೆಲಸ ಒಟ್ಟಿನಲ್ಲಿ ಅನುಕೂಲ. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷಾದ ಮೊದಲನೆ ಚರಣಕ್ಕೆ ಬಹಳ ಕಡಮೆ ತೊಂದರೆ. ತಾ. ೩೦, ೩೧, ೧, ೨ ಅನುಕೂಲ.

ಸಿಂಹ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಬಹಳ ಕೆಡುತ್ತ ನಡೆವುದು. ಅದರಲ್ಲಿಯೂ 'ಮಾನ್ಯವರ' ಕೆಲ ಅತಿಥಿಗಳು ಹೆಚ್ಚಾಗಿ ಬರುವದರಿಂದ ಪ್ರಾಪಂಚಿಕ ಗೊಂದಲ ವಿಪರೀತವೆನಿಸುವ ಯೋಗ. ಮನೆಯಲ್ಲಿಯ ಹಿರಿಯರ ತಲೆ ತಪ್ಪು ತಿಳುವಳಿಕೆಯಿಂದ ಮೇಲಿಂದ ಮೇಲೆ ಕಾಯುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಅನುಕೂಲ. ಆದರೆ ಸರಾಸರಿ ಲಾಭವೂ ಕಾಲ ಕಾಲಕ್ಕೆ ಕೈಗೆ ಬರಬೇಕಾದರೆ ಸಾಕಬೇಕಾಗಿ ಹೋಗುವದು. ಆದರೆ ವೆಚ್ಚದ ಪ್ರಸಂಗ ಕಡಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿಯೂ ಸಾಕುಬೇಕಾಗಿ ಹೋಗುವದು. ಮಿತ್ರರಿಂದ ವಿಶ್ವಾಸಘಾತ, ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಮಘಾದ ಕೊನೆಯ ೩ ಮತ್ತು ಪೂರ್ವಾದ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೩೦, ೩೧, ೨ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀ ಸುಖ ಅನುಕೂಲವಿದ್ದರೂ ಸಮೀಪದ ಆಪ್ತಳಾದ ಒಬ್ಬ ಸ್ತ್ರೀ ಬಗ್ಗೆ ಪಾಪದೃಷ್ಟಿ ಇಲ್ಲವೆ ಆ ಬಗೆಯ ಲೋಕಾರೋಪ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಸಾಧ್ಯವಾಗದ ಸಂಗತಿಗಳಲ್ಲಿ ನಿರರ್ಥಕ ಸಾಹಸ ಮಾಡುವ ದುರ್ಬುದ್ಧಿ. ಹದಿನೆಂಟು ಕೆಲಸದಲ್ಲಿ ಮನಸ್ಸು ಆದರೆ ಒಂದೂ ಪೂರ್ಣವಾಗದಂತಹ ಪರಿಸ್ಥಿತಿ. ಪ್ರತಿಷ್ಠೆ ಸಾಧಾರಣವೆ ಆದರೆ ಲಾಭ ಮಾತ್ರ ಬಹಳಾಗುವ ದೈವಾನುಕೂಲ. ಆಪ್ತೇಷ್ಟರೊಡನೆ ನಿರರ್ಥಕವಾಗಿ ವಾದವಿವಾದ. ಹೆಂಡತಿ ಹಡೆಯುವದಿದ್ದರೆ ಹಡೆಯಬೇಕಾದರೆ ಅತಿ ಕಷ್ಟ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅರ್ಥಹೀನ ಯಶಸ್ಸು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಉತ್ತರಾದ ಕೊನೆಯ ೩ ಮತ್ತು ಹಸ್ತಾದ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೨೯, ೨, ೩ ಅನುಕೂಲ.

ತುಲಾ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ, ಆದರೆ ಮಕ್ಕಳಿಂದ ಮತ್ತು ಮನೆಯಲ್ಲಿಯ ವೃದ್ಧರಿಂದ ಪೂರ್ಣ ಮಾಡಲಿಕ್ಕೆ ಬಾರದಿದ್ದಂಥ ಆಗ್ರಹದ ತೊಂದರೆ. ಅಪ್ರಿಯ ಜನರ ಸ್ವಾಗತ ಮಾಡುವ ಇಲ್ಲವೆ ಸ್ವತಃ ಸ್ವೀಕರಿಸುವ ಪ್ರಸಂಗ. ಉದ್ಯೋಗದಲ್ಲಿ ದೊಡ್ಡ ಪ್ರಗತಿ ಬಹಳ ಲಾಭ. ಆದರೆ ಅಪ್ರತಿಷ್ಠೆ ಮತ್ತು ಪತ್ತು ಕಡಮೆಯಾಗುವ ಅಂಜಿಕೆ. ಗುಪ್ತ ಕಾರಸ್ಥಾನ ಮಾಡಿದ ಆರೋಪ. ಮಿತ್ರತ್ವದಲ್ಲಿ ವಿರೋಧ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮಜ್ಜಿಗೆ ನಿಮಗೆ ದೊರೆತರೆ ಬೆಣ್ಣಿ ಶತ್ರುಗಳಿಗೆ ಸಿಕ್ಕುವಂಥ ಅನೇಗುಂದಿ ಯಶಸ್ಸು. ಪ್ರವಾಸ ಮತ್ತು ಪತ್ರವ್ಯವಹಾರವೂ ಭೆಟ್ಟಿಗಿಂತ ಅನುಕೂಲ. ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ೧ ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೩೦, ೩೧, ೪ ಅನುಕೂಲ.

ವೃಶ್ಚಿಕ

ಪ್ರಕೃತಿ ಅನುಕೂಲ. ಮತ್ತು ಹೆಂಡತಿ ಹಾಗು ಪ್ರಾಪಂಚಿಕ ಸುಖವು ಉತ್ತಮ ಮಕ್ಕಳಲ್ಲಿ ಬೆಳೆಯುತಿರುವ ಸಮಾಧಾನದ ಅನೇಕ ಸಂಗತಿಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅಭೂತಪೂರ್ವ ಆಗಿ ದುರ್ಘಟ ಕೆಲಸವೊಂದರಲ್ಲಿ ಉಚ್ಚಾಂಕದ ಯಶಸ್ಸು. ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು ಆದರೆ ವಿರೋಧಿಗಳೊಡನೆ ನಿಷ್ಕರುಣೆಯ ವರ್ತನೆ ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠಾದ ೧ ನೇ ಚರಣಕ್ಕೆ ಹೆಚ್ಚು ಅನುಕೂಲ. ತಾ. ೩೦, ೩೧, ೧, ೨, ೩ ಅನುಕೂಲ.

ಧನು

ಪ್ರಕೃತಿಯಲ್ಲಿ ಕೈಕಾಲು ಹರಿಯುವದು ಮೊದಲಾದ ಆಗಂತುಕ ಪೀಡೆ. ಹೆಂಡತಿಗೆ ಜ್ವರ ಇಲ್ಲವೆ ಕಫದಿಂದ ಕ್ಲೇಶ. ಬಹುಶಃ ಪ್ರಾಪಂಚಿಕ ಕೆಲಸದಲ್ಲಿ ಬಹಳ ತೊಂದರೆ ಮತ್ತು ಗೊಂದಲ. ದೂರದ ಆಪ್ತರಿಂದ ಸ್ವಲ್ಪ ಸುಖ. ಸ್ಥಾವರದಲ್ಲಿ ಕೆಲ ಅನುಕೂಲ ಸಂಗತಿಗಳು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಮಾನ್ಯ ಆದರೆ ಲಾಭ ಉತ್ತಮ. ಅಂತರ್ಧ್ಯೇಯಿ ಅತಿಥಿಗಳು ಮನೆಯನ್ನು ತುಂಬುವರು. ಯಾವೊಂದು ಕೆಲಸದಲ್ಲಿ ಆತ್ಮವಿಶ್ವಾಸವೆ ಕಡಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಕಾಲಾಂತರದಿಂದ ಪ್ರತ್ಯಕ್ಷ ಲಾಭವಾಗುವಂಥ ಯಶಸ್ಸು. ಆದರೆ ವಿರೋಧಿಗಳ ನಡೆನುಡಿ ನಿಮಗೇ ಅನುಕೂಲ. ಮಿತ್ರಸುಖ ಉತ್ತಮ. ಪ್ರವಾಸಾದಿ ಕೆಲಸ ಬಹಳ ತೊಂದರೆಯದು. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢಾದ ಮೊದಲನೆ ಚರಣಕ್ಕೆ ತೊಂದರೆ ಕಡಮೆ. ತಾ. ೩೦—೩೧—೨ ಅನುಕೂಲ.

ಮಕರ

ನಿಮ್ಮ ಪ್ರಕೃತಿ ಚೆನ್ನಾಗಿದ್ದರೆ ಹೆಂಡತಿಯದು ಕೆಡುವದು, ಅನಿಲು ನೆಟ್ಟಗಿದ್ದಾಗ ನಿಮ್ಮದು ಕೆಡುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ದಗದಗಿಯದೆ. ಮಕ್ಕಳ ಸಂಬಂಧದಲ್ಲಿ ಸ್ವಲ್ಪ ಚಿಂತೆ ಮತ್ತು ಉದ್ವೇಗ. ಉದ್ಯೋಗದಲ್ಲಿ ಸ್ವಲ್ಪ ಪ್ರಗತಿ ಕಡಮೆ. ಲಾಭ ಉತ್ತಮ ಆದರೆ ಪ್ರತಿಷ್ಠೆ ಕಡಮೆಯೆ. ಮಿತ್ರ ಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಶ್ರವಣಾದ ಕೊನೆಯ ೩ ಮತ್ತು ಧನಿಷ್ಠಾದ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೨—೩—೪ ಅನುಕೂಲ.

ಕುಂಭ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಕೆಡುವದು. ಮೇಲಿಂದ ಮೇಲೆ ಉಭಯತರಲ್ಲಿ ಮತಭೇದಗಳಿಂದ ಮನೆಯಲ್ಲಿ ಎಲ್ಲರಲ್ಲಿಯೂ ಉದ್ವೇಗ, ಮಕ್ಕಳಲ್ಲಿ ಒಬ್ಬರಿಂದ ಲಾಂಛನಾಸ್ಪದ ಕೃತ್ಯಗಳು ಸಂಭವಿಸುವ ಅಂಜಿಕೆ. ಉದ್ಯೋಗದಲ್ಲಿ ಪ್ರಗತಿ ಉತ್ತಮ ಪ್ರತಿಷ್ಠೆ ಕಡಮೆಯೆ. ಆದರೆ ಲಾಭ ಉತ್ತಮ. ಕೆಲವೊಂದು ನಿರೀಕ್ಷ ಜೆಲೆಯ ನಷ್ಟ ಅಪಹಾರವಾಗುವ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸ್ವತಃ ಮತ್ತು ಶತ್ರು ಒಂದೇ ಸವನೆ ತೊಂದರೆ ಕೊಡುವ ಪ್ರಕಾರ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಸ್ವಲ್ಪ ಅನುಕೂಲ. ಶತತಾರಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ೧ನೇ ಚರಣಕ್ಕೆ ತೊಂದರೆ ಕಡಮೆ. ತಾ. ೩೦—೩೧—೪ ಅನುಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಆದರೆ ಮನೆಯಲ್ಲಿ ಕಲಹ ಮತ್ತು ಬಂಧುವರ್ಗದವರಲ್ಲಿ ಸೆಣಸಾಟ ಉಂಟಾಗುವ ಸಂಗತಿಗಳು. ಉದ್ಯೋಗದಲ್ಲಿ ಲಾಭ ಮತ್ತು ಪ್ರತಿಷ್ಠೆ ಉತ್ತಮ. ಆದರೆ ಪ್ರಗತಿಗಾಗಿ ಅಡ್ಡತಿಡ್ಡ ಮಾರ್ಗಗಳಿಂದ ಹೋಗಬೇಕಾದ ಸರತಿ ಇಲ್ಲವೆ ಆ ರೀತಿ ಜನರ ತಿಳುವಳಿಕೆ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಆದರೆ ಶತ್ರುಗಳಿಗೆ ಈರ್ಷೆ ತರುವಂಥ ವರ್ತನೆ. ಮಿತ್ರತ್ವದಲ್ಲಿ ವಿರೋಧ, ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೨೯—೧—೨—೩ ಅನುಕೂಲ.

ಈ ವಾರದ ಕತೆ

(೧೫ ನೇ ಪುಟದಿಂದ ಮುಂದೆ ಸಾಗಿದ್ದು)

"ಏನು ನಮ್ಮ ಮನೆಯ ಅನ್ನ ಬೇಡಾಗಿದ್ದರೆ ಊಟಣ ನಿರಾಕರಿಸಬೇಕಾಗಿತ್ತು. ನಮ್ಮ ಅಪರೋಕ್ಷದಲ್ಲಿ ಹಾಗೆ ಹೇಳಿದಿರಂತೆ."

"ಎಲ್ಲಿಂದಲ್ಲಿಗೆ ಮಹಾರಾಜರೆ, ತಮ್ಮ ಉಪ್ಪು ಉಂಡು ಬೆಳೆಯುತ್ತಿದ್ದೇನೆ. ನಾನು ಹಾಗೆ ಹೇಳಿದೆನೆಂದು ಊಹಿಸುವದೂ ಅಶಕ್ಯ."

"ನಾವು ಪ್ರತ್ಯಕ್ಷ ಇದೇ ಕಿವಿಯಿಂದ ಕೇಳಿದ್ದೇವೆ. ಇರಲಿ ಬಿಡಿರಿ ಹುಡುಗರ ಮಾತು."

ಮಾಸ್ತರರಿಗೆ ತಟ್ಟನೆ ಎಲ್ಲವೂ ಹೊಳೆದಂತಾಯಿತು. ತನ್ನ ಶಿಷ್ಯನು ತನ್ನ ಮೇಲೆ ಮುಯ್ಯ ತೀರಿಸಿಕೊಳ್ಳಲು ಹೂಡಿದ ಆಟವಿದು ಎಂದು. ಆಗ ತಾನು ತಿನ್ನುತಿರುವ ಅನ್ನ ಮುಳ್ಳಿನಂತೆ ಚುಚ್ಚಲಾರಂಭಿಸಿತು. ಅವನಲ್ಲಿ ನಿಗ್ರಹವಿದ್ದಿಲ್ಲವಾದರೆ ಕಿಡಿಮಾತು ಹೊರಬೀಳಬಹುದಾಗಿತ್ತು. ಇವರ ಮನೆಗೆ ಬಂದು ಇವರ ಲಹರಿಯ ಹುಡುಗನೊಡನೆ ತನ್ನ ಪರೀಕ್ಷೆ ಕೊಡಬೇಕಾಗಿ ಬಂದದ್ದರಿಂದ ಅವನಿಗೆ ಕೆಡುಕೆನಿಸಿತು. ತಮ್ಮ ಸಾರ್ವಭೌಮ ಅಧಿಕಾರದ ಅರಿವನ್ನು ಇಟ್ಟುಕೊಂಡೆ ಮಾತಾಡುವ ಮಹಾರಾಜರಿಂದುರು ಅಡುವಲ್ಲಿ ಒಂದು ಮಾತು ಹೆಚ್ಚುಕಡಿಮೆಯಾದರೆ ತನ್ನ ನೌಕರಿಗೆ ಸಂಚಕಾರ ಬರುವ ಹೆದರಿಕೆ. ಅದ್ದರಿಂದ ಮಾಸ್ತರನು ಸರ್ವಸಾಧಕವಾದ ಮೌನವನ್ನೇ ಅವಲಂಬಿಸಿದ.

"ದಕ್ಷ ಶಿಕ್ಷಕರು ನೀವೆಂದು ತಿಳಿದು ನಿಮ್ಮನ್ನು ಆರಿಸಿದ್ದಾಯಿತು. ನಿಮಗೇಕೆ ಈ ಧಿರಾತೆ?" ಎಂದರು ಮಹಾರಾಜರು.

"ಕೇಳಿಕೊಳ್ಳಬಹುದಾದರೆ ಒಂದು ಮಾತು ಅರಿಕೆ ಮಾಡಿಕೊಳ್ಳಬೇಕೆಂದಿದ್ದೇನೆ. ಶಿಕ್ಷಕನಿಗೆ ಸ್ವಾತಂತ್ರ್ಯವಿಲ್ಲದೆ ಶಿಷ್ಯನನ್ನು ತಿದ್ದುವದು ಹೇಗೆ? ಚಿಕ್ಕಪುಟ್ಟ ವಿಷಯಗಳನ್ನು ತಾವು ಗಣಿಸಬಾರದು."

"ನಿಮ್ಮ ಶಿಷ್ಯನ ವಿಷಯ ನಾವೂ ಆಲೋಚಿಸಬೇಕಾಗುತ್ತದೆ. ನಯದಿಂದ ಕೆಲಸ ಸಾಧಿಸಬೇಕು ಮಾಸ್ತರೆ" ಎಂದು ಉತ್ತರ ಬಂದಿತು.

ಚಿನ್ನವಾದರೇನು ಕಾಸಿ ಬಡಿಯದೆ ಆಭರಣವಾಗುತ್ತದೆಯೆ ಎಂದೆಂದುಕೊಂಡು ಮಾಸ್ತರ.

"ನಾಳೆಗೆ ಮಾಸ್ತರರು ಬರಬಹುದಲ್ಲ" ಎಂದು ಮಹಾರಾಜರು ತಮ್ಮ ಮಗನನ್ನು ಕೇಳಿದರು.

"ಆದರೆ ಇಂದು ರಾತ್ರಿ ತುಳಸಿ ಮದುವೆಯ ಸಮಾರಂಭದಲ್ಲಿ ಮಾಸ್ತರರು ತಮ್ಮ ಕನ್ನಡ ಹಾಡುಗಳನ್ನು ಕೇಳಿಸಬೇಕು" ಎಂದ ಆ ಮರಿರಾಯ.

ಅಧಿಕಾರ ನಡೆಸುವ ಗುಣವನ್ನು ಎಷ್ಟೊಂದು ಮೈಗೂಡಿಸಿಕೊಂಡಿದ್ದಾನೆಂದು ಮಾಸ್ತರರು ಮನಸಿನಲ್ಲಿಯೆ ಅಚ್ಚರಿಬಟ್ಟರು.

"ಕೇಳಿರಿ ಮಾಸ್ತರ, ನಿಮ್ಮ ಸಂಗೀತ ನಾವೂ ಕೇಳಬಹುದು. ನಾಳೆಗೆ ಅಧ್ಯಾಪನಕ್ಕಾಗಿ ಬರಬೇಕು." ಎಂದು ಹೊರಟಿತು ಅಜ್ಞೆ.

ಬಳಿಸಾರಿದ ಮುಕ್ತಿ ದೂರವಾಯಿತಲ್ಲ ಎಂದು ಮಾಸ್ತರನು ತುಟಿಪಿಟಿಕ್ಕನ್ನದೆ ಬರಿ ಗೋಣನ್ನಲ್ಲಾಡಿಸಿದನು.

"ಮಾಸ್ತರ ಮುಂಜಾನೆಯದೆಲ್ಲ ಮರೆತು ನನ್ನನ್ನು ಕ್ಷಮಿಸುವಿರಲ್ಲವೆ?" ಎಂದು ಶಿಷ್ಯ ನಗನಗುತ.

"ನಯದಿಂದ ಕೆಲಸ ಸಾಧಿಸಬೇಕು. ಆದರೆ ಅಭ್ಯಾಸದ ವಿಷಯದಲ್ಲಿ ಅಚ್ಚುಕಟ್ಟುತನ ಬೇಕೆಂಬ ಮರೆಯಬೇಡಿರಿ" ಎಂದು ತನ್ನ ಶಿಷ್ಯನಿಗುತ್ತರಿಸಿದ.

ಮಾಸ್ತರನೂ ಹಂಗಿನ ವೀಳ್ಯವನ್ನು ಬಾಯಿಗೆ ಹಾಕಿಕೊಂಡು ಇವರ ಈ ಬುದ್ಧಿ ಹೋಗುವವರೆಗೆ ಇವರಿಗೆ ಓದು ಹತ್ತುವದಿಲ್ಲ. ಸುಮ್ಮನೆ ಹೆರವರ ಜೀವ ಅರೆಯುವದು ಎಂದು ಹೊರಹೊರಟ. ಬಾಯಿಂದ 'ಕಂಡು ಕಂಡು ನೀ ಎನ್ನ' ಎಂಬ ಕೀರ್ತನೆ ತಾನಾಗಿಯೆ ಹೊರಬೀಳುತ್ತಿತ್ತು.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತ ಪ್ರಕಟವಾಯಿತು